ಕರ್ನಾಟಕ ವಿಧಾನಸಭೆ
ಗುರುವಾರ 24ನೇ ಫೆಬ್ರವರಿ 2011ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 12.00 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು
ಆಯವ್ಯಯ 2011–2012
ಭಾಗ–1 ಕೃಷಿ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಸನ್ಮಾನ್ಯ ಸಭಾಧ್ಯಕ್ಷರೇ,

ಅನ್ನದಾತ ರೈತನ ಹೆಸರಿನಲ್ಲಿ ಮುಖ್ಯಮಂತ್ರಿ ಪದವಿಯ ಪ್ರಮಾಣ ವಚನ ಸ್ವೀಕರಿಸಿದ ನಾನು ರೈತರ ಕ್ಷೇಮ ಮತ್ತು ಕೃಷಿ ಕ್ಷೇತ್ರದ ವಿಕಾಸಕ್ಕೆ ಪ್ರಥಮ ಆದ್ಯತೆ ನೀಡಿದ್ದೇನೆ. ಈ 33 ತಿಂಗಳ ಅವಧಿಯಲ್ಲಿ ಹಲವು ರೈತಪರ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಪ್ರಾತ:ಸ್ಮರಣೀಯರಾದ ರೈತರನ್ನು ನಮಿಸಿ ಸ್ಫೂರ್ತಿ ತುಂಬಲು **"ಉಳುವಾ ಯೋಗಿಯ ನೋಡಲ್ಲಿ"** ಎಂಬ ಕುವೆಂಪು ಅವರ ಪ್ರಸಿದ್ಧ ಕವನವನ್ನು ನಮ್ಮ ರೈತ ಗೀತೆಯನ್ನಾಗಿ ಸ್ವೀಕರಿಸಿದೆ.

"ನೇಗಿಲ ಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯೇ ನಿಂತಿದೆ ಧರ್ಮ"

ಎಂಬ ಮಾತು ಮಾರ್ಮಿಕ ಹಾಗೂ ವಿಶಾಲಾರ್ಥವನ್ನು ಧ್ವನಿಸುತ್ತದೆ.

2) **"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು**
ಮೇಟಿಯಿಂ ರಾಟಿ ನಡೆದುದಲ್ಲದೆ
ದೇಶದಾಟವೇ ಕೆಡಗು ಸರ್ವಜ್ಞ" – **ಸರ್ವಜ್ಞ**

ಸರ್ವಜ್ಞನ ಈ ಅರ್ಥಪೂರ್ಣ ವಚನ ಕೃಷಿಯ ಮತ್ತು ಕೃಷಿಕನ ಮಹತ್ವವನ್ನು ಸಾರುತ್ತದೆ.

3) **"ಕೃಷಿ ಕೆಡಗುಪೇಕ್ಷೆಯಲಿ"**– ಉಪೇಕ್ಷಿಸಿದಾಗ, ಕೃಷಿ ಕ್ಷೇತ್ರ ಹಾಳಾಗುವುದಲ್ಲದೆ ಆಹಾರ ಭದ್ರತೆಗೆ ಧಕ್ಕೆಯಾಗಿ ನಾಡಿಗೆ ವಿಪತ್ತು

ಎದುರಾಗುತ್ತದೆ ಎಂಬ ಕವಿಯ ಮಾತು ನಮಗೆ ಎಚ್ಚರಿಕೆಯ ಗಂಟೆಯಾಗಿದೆ. ಆದ್ದರಿಂದ ನನ್ನ ಪ್ರಥಮ ಮುಂಗಡ ಪತ್ರದಿಂದ ಹಿಡಿದು ಇಲ್ಲಿಯವರೆಗೆ ಕೃಷಿ ಕ್ಷೇತ್ರಕ್ಕೆ ಪ್ರಥಮ ಆದ್ಯತೆ ನೀಡುತ್ತಾ ಬಂದಿದ್ದೇನೆ. ಪ್ರಸ್ತುತ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಕೃಷಿ ಕ್ಷೇತ್ರಕ್ಕೆ ಪ್ರತ್ಯೇಕ ಮುಂಗಡ ಪತ್ರ ರೂಪಿಸುವ ವಿನೂತನ ಪ್ರಯತ್ನ ಮಾಡಿದ್ದೇನೆ. ಇದು ರಾಷ್ಟ್ರದಲ್ಲಿಯೇ ಮೊಟ್ಟಮೊದಲ ಮತ್ತು ವಿಶಿಷ್ಟ ಪ್ರಯತ್ನವಾಗಿದೆ. ನಾಡ ಜನತೆ ನನ್ನ ಈ ಪ್ರಯತ್ನಕ್ಕೆ ಒಕ್ಕೊರಲಿನ ಬೆಂಬಲ ನೀಡುತ್ತಾರೆಂದು ಆಶಿಸುತ್ತೇನೆ.

4) ಕಳೆದ ಹಲವಾರು ದಶಕಗಳಿಂದ, ನಮ್ಮ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಶೇಕಡ 70ರಷ್ಟು ಜನಸಂಖ್ಯೆ ಕೃಷಿಯನ್ನು ಆಧರಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಈ ಪ್ರಮಾಣ ಶೇಕಡ 61ಕ್ಕೆ ಇಳಿದಿದೆ. ದೇಶದ ಬೆನ್ನೆಲುಬಾದ ರೈತರ ಸ್ಥಿತಿ-ಗತಿಗಳು ನಿರೀಕ್ಷಿತ ಪ್ರಮಾಣದಲ್ಲಿ ಸುಧಾರಿಸಿಲ್ಲ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಹಾಗೂ ವಿಭಿನ್ನವಾದ ಪ್ರಯತ್ನಗಳನ್ನು ಮಾಡುವ ಅಗತ್ಯವಿದೆ.

5) ಈ ಉದ್ದೇಶದಿಂದ ನಮ್ಮ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ, ನೆಲ ಮತ್ತು ಜಲಕ್ಕೆ ಸಂಬಂಧಪಟ್ಟ ಯೋಜನೆಗಳಿಗೆ ಒಂದು ವಿಶಿಷ್ಟರೂಪ ಕೊಡಲು ಹೊಸ ಪ್ರಯತ್ನವನ್ನು ಮಾಡಿದ್ದೇನೆ. ಈ ಪ್ರಯತ್ನದಲ್ಲಿ ತಜ್ಞರ ಮತ್ತು ಪರಿಣಿತರ ಸಲಹೆಗಳು, ರೈತ ಮುಖಂಡರ ಸಲಹೆಗಳು, ಮೌಲ್ಯಮಾಪನಗಳ ವರದಿಗಳಲ್ಲಿನ ಮುಖ್ಯಾಂಶಗಳು ಹಾಗೂ ಮಾಧ್ಯಮಗಳಲ್ಲಿ ಬಿತ್ತರಿಸಿದ ಅನಿಸಿಕೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

6) ಕೃಷಿಗೆ ಪ್ರತ್ಯೇಕ ಆಯವ್ಯಯ ಏಕೆ?

- ಕೃಷಿಯು ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ್ದು, ಕೃಷಿ ವಲಯದ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರದ ಪಾತ್ರವು ಬಹು ಮಹತ್ತರವಾದದ್ದು.
- ಹಿಡುವಳಿಯ ಗಾತ್ರ ಕ್ರಮೇಣ ಕಡಿಮೆಯಾಗುತ್ತಿದೆ. 1970-71ರಲ್ಲಿ 35.51 ಲಕ್ಷ ಹಿಡುವಳಿಗಳಿದ್ದು, 2001-02ರಲ್ಲಿ 70.79 ಲಕ್ಷ, ಮತ್ತು 2005-06ರಲ್ಲಿ 75.81 ಲಕ್ಷಕ್ಕೆ ಹೆಚ್ಚಿವೆ. ಸರಾಸರಿ ಹಿಡುವಳಿ ಪ್ರದೇಶ 1970-71ರಲ್ಲಿ 3.20 ಹೆಕ್ಟೇರ್‌ನಿಂದ 2005-06ರಲ್ಲಿ 1.63 ಹೆಕ್ಟೇರ್‌ಗೆ ಇಳಿದಿದೆ.

- ಗ್ರಾಮೀಣ ಪ್ರದೇಶದಲ್ಲಿ ಕೃಷಿ ವಲಯವು ಹೆಚ್ಚಿನ ಉದ್ಯೋಗಾವಕಾಶ ಹಾಗೂ ಆದಾಯವನ್ನು ಕಲ್ಪಿಸುವ ಸಾಮರ್ಥ್ಯವನ್ನು ಹೊಂದಿದೆ.
- ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ಉದ್ಯೋಗಾವಕಾಶದ ಪ್ರಮಾಣ ಶೇಕಡ 65ರಿಂದ 61ಕ್ಕೆ ಇಳಿಮುಖವಾಗಿದ್ದು, ಜಿ.ಡಿ.ಪಿ. ಕೊಡುಗೆಯು ಅರ್ಧದಷ್ಟು ಅಂದರೆ ಶೇಕಡ 36ರಿಂದ ಶೇಕಡ 18ಕ್ಕೆ ಇಳಿಮುಖವಾಗಿರುತ್ತದೆ.
- ಕೃಷಿ ನೀತಿಯಲ್ಲಿ ತೀರ್ಮಾನಿಸಿದಂತೆ, ಕೃಷಿ ಕ್ಷೇತ್ರದ ಜಿ.ಡಿ.ಪಿ.ಯನ್ನು ಸುಮಾರು ಶೇಕಡ 4.5ಕ್ಕೆ ಹೆಚ್ಚಿಸಿ ತೀವ್ರಗೊಳಿಸುವುದು ಸುಲಭ ಕೆಲಸವಲ್ಲ. 10ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಪ್ರಗತಿಗಿಂತ ಎರಡರಷ್ಟಕ್ಕೂ ಹೆಚ್ಚು ಕೃಷಿ ಬೆಳವಣಿಗೆಯನ್ನು ಸಾಧಿಸುವ ಸವಾಲನ್ನು ಮುಂದಿಡಲಾಗಿದೆ. ಇದಕ್ಕಾಗಿ ಸರಬರಾಜು ಹಾಗೂ ಬೇಡಿಕೆ ವಿಭಾಗದತ್ತ ತೀವ್ರ ಗಮನಹರಿಸಬೇಕಾಗಿದೆ.

7) ಕೃಷಿ ಹಾಗೂ ಕೃಷಿಯೇತರ ಅಭಿವೃದ್ಧಿಯಲ್ಲಿ ಗಮನಿಸಲಾದ ಪ್ರಮುಖ ಕೊರತೆಗಳು ಈ ಕೆಳಗಿನಂತಿವೆ:

- **ಬಂಡವಾಳದ ಕೊರತೆ**: ಹಲವಾರು ದಶಕಗಳಿಂದಲೂ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಿಗೆ ಅವಶ್ಯಕವಾದ ಬಂಡವಾಳವನ್ನು ತೊಡಗಿಸದೇ ಇರುವುದು ಒಂದು ಪ್ರಮುಖ ಕೊರತೆಯಾಗಿದೆ. ಈಗ ಹೂಡಿಕೆಯಾಗುತ್ತಿರುವ ಬಂಡವಾಳದಲ್ಲಿ ಬಹುತೇಕ ರೈತರ ಸ್ವಂತ ಬಂಡವಾಳವಾಗಿದೆ. ಇದು ಇತರೆ ಕ್ಷೇತ್ರಗಳಿಗಿಂತ ಕಡಿಮೆ ಪ್ರಮಾಣದಲ್ಲಿದೆ. ಸಾಂಸ್ಥಿಕ ಹಣಕಾಸು ಮೂಲಗಳಿಂದಲೂ ಸಹ ರೈತರಿಗೆ ಸುಲಭವಾಗಿ ಮತ್ತು ಸಾಕಷ್ಟು ಬಂಡವಾಳ ಸಿಗುತ್ತಿಲ್ಲ.
- **ಸೂಕ್ತ ತಾಂತ್ರಿಕತೆಯ ಕೊರತೆ**: ಪ್ರಯೋಗಾಲಯಗಳಲ್ಲಿ ಮತ್ತು ಖಾಸಗಿ ಸಂಶೋಧನಾ ಸಂಸ್ಥೆಗಳಲ್ಲಿ ತಾಂತ್ರಿಕತೆ ಬೆಳೆದಿದೆಯಾದರೂ, ಇದನ್ನು ರೈತನಿಗೆ ಮುಟ್ಟಿಸುವಲ್ಲಿ ಮತ್ತು ಅದರಿಂದ ಲಾಭ ಪಡೆಯುವಲ್ಲಿ ಸಾಕಷ್ಟು ಸಫಲವಾಗಿಲ್ಲ. ಈ ಅಂಶ ಸೂಕ್ತವಾದ ಬೆಳೆಯ ತಳಿಗಳು,

ಕೃಷಿ ಪದ್ಧತಿಗಳು, ರೈತರಿಗೆ ತರಬೇತಿ ಮತ್ತು ಸಂಬಂಧಪಟ್ಟ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುತ್ತದೆ.

- **ಸಂಸ್ಕರಣೆ ಮತ್ತು ಮಾರುಕಟ್ಟೆ:** ನಮ್ಮ ರೈತರು ಬಿಸಿಲು, ಮಳೆ ಎನ್ನದೆ ಬೆವರು ಸುರಿಸಿ, ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಲೆ ದೊರೆಯುತ್ತಿಲ್ಲ. ಅಗತ್ಯ ಮಾರುಕಟ್ಟೆ ಸೌಲಭ್ಯಗಳಿಲ್ಲದ ಜೊತೆಗೆ, ಸೂಕ್ತ ವರ್ಗೀಕರಣ ವ್ಯವಸ್ಥೆ, ಉಗ್ರಾಣ, ಶೀತಲಕೇಂದ್ರ ಮತ್ತು ಸಂಸ್ಕರಣಾ ಕೇಂದ್ರಗಳ ಕೊರತೆಯಿಂದ ರೈತರಿಗೆ ಲಾಭದಾಯಕ ಬೆಲೆ ಸಿಗುತ್ತಿಲ್ಲ. ಇನ್ನೊಂದು ಕಡೆ, ಬಳಕೆದಾರರಿಗೂ ಸಹ ಕೃಷಿ ಮತ್ತು ಕೃಷಿಯೇತರ ಸಾಮಗ್ರಿಗಳೂ ಸುಲಭ ಬೆಲೆಗೆ ದೊರೆಯುತ್ತಿಲ್ಲ.
- **ಸಹಭಾಗಿತ್ವದ ಕೊರತೆ:** ನಮ್ಮ ದೇಶದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಣಿತ ಸಂಸ್ಥೆಗಳಿದ್ದರೂ ಸಹ ಅವುಗಳ ಸೇವೆಯನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸೂಕ್ತ ರೀತಿ ನೀತಿಗಳನ್ನು ರೂಪಿಸುವ ಅವಶ್ಯಕತೆ ಇದೆ.

8) ಮೊದಲಿನಿಂದಲೂ, ಕೃಷಿ ಮತ್ತು ಕೃಷಿ ಸಂಬಂಧಿ ಕಾರ್ಯ ಚಟುವಟಿಕೆಗಳ ಮೇಲಿನ ವೆಚ್ಚಗಳನ್ನು ಒಟ್ಟಾರೆ ಆರ್ಥಿಕ ಆಯವ್ಯಯದಡಿಯಲ್ಲೇ ಒದಗಿಸಲಾಗುತ್ತಿತ್ತು. ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದ್ದರೂ ಮತ್ತು ಪ್ರತಿ ಯೋಜನೆಯ ವೆಚ್ಚವನ್ನು ಗಮನಾರ್ಹವಾಗಿ ಹೆಚ್ಚಿಸಿದ್ದರೂ, ಇವೆಲ್ಲಾ ಇಡೀ ಆಯವ್ಯಯದ ಉದ್ದಗಲಕ್ಕೂ ಹಂಚಿ ಹೋಗಿವೆ. ಇದರಿಂದಾಗಿ ಕೃಷಿ ವಲಯದ ನಿರ್ಬಂಧಗಳನ್ನು ಹೋಗಲಾಡಿಸಲು ಮತ್ತು ಅದಕ್ಕೆ ಅಗತ್ಯವಾದ ಚಾಲನೆ ಒದಗಿಸಲು ಕಷ್ಟವಾಗಿದೆ. ಕೃಷಿ ವಲಯದ ಬೆಳವಣಿಗೆಗೆ ಅಗತ್ಯವಾದ ಚಾಲನಾ ಶಕ್ತಿ ಒದಗಿಸಲು ಆಯವ್ಯಯದಲ್ಲಿ ಕೃಷಿಯನ್ನು ಪ್ರತ್ಯೇಕವಾಗಿ ಪರಿಗಣಿಸಲು ಇದು ಸಕಾಲವಾಗಿದೆ.

9) ಈ ಕೃಷಿ ಆಯವ್ಯಯವು ನೆಲ ಮತ್ತು ಜಲ ಕೇಂದ್ರೀಕೃತ ಯೋಜನೆಗಳ ಜೊತೆಗೆ ಅವುಗಳ ಉಪ ವಲಯಗಳ ಹಂಚಿಕೆಯನ್ನು ಒಳಗೊಂಡಿದೆ. ಈ ಬಗ್ಗೆ ಒಂದು ಗಂಭೀರ ಚರ್ಚೆ ನಡೆಸಲು ಮತ್ತು ಸಮಸ್ಯೆಗಳನ್ನು ಸಮಗ್ರವಾಗಿ

ಪರಿಹರಿಸಲು ಪೂರಕವಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಈ ಕೃಷಿ ಆಯವ್ಯಯ ಅನುಕೂಲ ಆಗುವುದೆಂದು ನಾನು ಭಾವಿಸಿದ್ದೇನೆ.

ಪ್ರಮುಖ ಸಾಧನೆಗಳು

10) ಕಳೆದ 33 ತಿಂಗಳಲ್ಲಿ ನಮ್ಮ ಸರ್ಕಾರ ನೆಲ ಮತ್ತು ಜಲ ಸಂಬಂಧಿ ಯೋಜನೆಗಳ ಮೂಲಕ ಸಾಧಿಸಿದ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಕೃಷಿ

11) ಕೃಷಿ ಸಾಲ-ಬಡ್ಡಿ ದರ ಇಳಿಕೆ: ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಕೃಷಿ ಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 3ಕ್ಕೆ ಇಳಿಸಿದ ಹೆಗ್ಗಳಿಕೆ ನಮ್ಮದು. ರೈತರಿಗೆ ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಿಗೆ ಸಕಾಲದಲ್ಲಿ ಹಾಗೂ ಸೂಕ್ತ ಪ್ರಮಾಣದಲ್ಲಿ ಜೊತೆಗೆ ಕಡಿಮೆ ಬಡ್ಡಿ ದರಗಳಲ್ಲಿ ಸಾಲ ದೊರೆಯಬೇಕು ಎಂಬುದು ನಮ್ಮ ಸರ್ಕಾರದ ಗುರಿಯಾಗಿದೆ. ಆದ್ದರಿಂದ ಸಹಕಾರಿ ಸಂಸ್ಥೆಗಳಲ್ಲದೆ ವಾಣಿಜ್ಯ ಬ್ಯಾಂಕುಗಳ ಮೂಲಕವೂ ಕೂಡ ಶೇಕಡ 3ರ ಬಡ್ಡಿ ದರದಲ್ಲಿ ಸಾಲ ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

12) ಮಹತ್ತರ ಬೆಳವಣಿಗೆ: ಸಂತೋಷದ ಸಂಗತಿಯೆಂದರೆ, ರಾಜ್ಯದಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆ 2010-11ರ ಸಾಲಿನಲ್ಲಿ ಶೇಕಡ 5.9ಕ್ಕೆ ಏರಿದೆ. (ಕಳೆದ ವರ್ಷ 2008-09 ಮತ್ತು 2009-10ರಲ್ಲಿ ಕ್ರಮವಾಗಿ ಇದು ಶೇಕಡ 0.5 ಮತ್ತು 4.3 ಇತ್ತು). ಬಹಳ ವರ್ಷಗಳ ನಂತರ ಈ ಪ್ರಮಾಣದ ಏರಿಕೆಗೆ ಬರಲು ನಾವು ತೆಗೆದುಕೊಂಡ ಪ್ರಮುಖ ಕ್ರಮಗಳು ಕಾರಣ ಎಂದು ಹೇಳಲು ನಾನು ಇಚ್ಛಿಸುತ್ತೇನೆ.

13) ದಾಖಲೆಯ ಉತ್ಪತ್ತಿ: 2009-10ನೇ ಸಾಲಿನಲ್ಲಿ 109 ಲಕ್ಷ ಟನ್‌ಗಳಿದ್ದ ಆಹಾರ ಧಾನ್ಯ ಉತ್ಪಾದನೆಯು 2010-11ನೇ ಸಾಲಿನಲ್ಲಿ ಶೇ.15ರಷ್ಟು ಬೆಳವಣಿಗೆಯೊಂದಿಗೆ 125 ಲಕ್ಷ ಟನ್‌ಗಳಿಗೆ ಹೆಚ್ಚಿ ದಾಖಲೆ ನಿರ್ಮಿಸುವುದೆಂದು ಆಶಿಸಲಾಗಿದೆ. ಕೃಷಿ ಭೂಮಿ ಶೇಕಡ 3ರಷ್ಟು ಹೆಚ್ಚಾಗಿದ್ದು, ಇಳುವರಿ ಹೆಚ್ಚಳವಾಗಿರುವುದರಿಂದ ಈ ದಾಖಲೆ ಸಾಧ್ಯವಾಗಿದೆ.

14) ಎಣ್ಣೆ ಬೀಜ ಮತ್ತು ಹತ್ತಿ ಇಳುವರಿಯಲ್ಲಿ ಕ್ರಮವಾಗಿ ಶೇಕಡ 32 ಮತ್ತು 38 ರಷ್ಟು ಹೆಚ್ಚಾಗಿದೆ.

15) ಭೂಚೇತನ: ಇಕ್ರಿಸ್ಯಾಟ್ **(ICRISAT)** ನೆರವಿನೊಂದಿಗೆ ಅನುಷ್ಠಾನಗೊಳಿಸಲಾದ ಭೂಚೇತನ ಯೋಜನೆಯಡಿ 2009ರಿಂದ 2014 ವರ್ಷಗಳ ಅವಧಿಯೊಳಗೆ ತಂತ್ರಜ್ಞಾನ ಮತ್ತು ಲಘು ಪೋಷಕಾಂಶಗಳನ್ನು ಬಳಸಿ ಕನಿಷ್ಟ ಶೇಕಡ 20ರಷ್ಟು ಬೆಳೆ ಇಳುವರಿಯನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. 2009-11ರ ಅವಧಿಯಲ್ಲಿ, ಈ ಯೋಜನೆಯಿಂದ 16 ಜಿಲ್ಲೆಗಳ 12 ಲಕ್ಷ ಹೆಕ್ಟೇರ್ ಒಣಭೂಮಿ ಬೇಸಾಯ ನಡೆಸುತ್ತಿರುವ ಸುಮಾರು 8.7 ಲಕ್ಷ ರೈತರು ಪ್ರಯೋಜನವನ್ನು ಪಡೆದಿದ್ದು, ಶೇಕಡ 25ರಿಂದ 40ರಷ್ಟು ಹೆಚ್ಚಿನ ಇಳುವರಿಯನ್ನು ಸಾಧಿಸಿದ್ದಾರೆ.

16) ಕಳೆದ ಮೂರು ವರ್ಷಗಳ ಅವಧಿಯಲ್ಲಿ ತಮ್ಮ ಉತ್ಪತ್ತಿಯನ್ನು ಉತ್ತಮಪಡಿಸಿಕೊಳ್ಳಲು 81 ಲಕ್ಷ ರೈತರುಗಳಿಗೆ 21.7 ಲಕ್ಷ ಕ್ವಿಂಟಾಲ್ ಗುಣಮಟ್ಟದ ಬೀಜಗಳನ್ನು ಸಹಾಯಧನದ ರೂಪದಲ್ಲಿ ರಿಯಾಯಿತಿ ದರಗಳಲ್ಲಿ ಒದಗಿಸಲಾಗಿದೆ.

17) ಸಾವಯವ ಕೃಷಿ: ರಾಷ್ಟ್ರದಲ್ಲಿ ಪ್ರಥಮ ಬಾರಿಗೆ ಸಾವಯವ ಕೃಷಿ ಮಿಷನ್ ರಚಿಸಿದ್ದು, ಇದರ ಮೂಲಕ ಕಳೆದ ಎರಡು ವರ್ಷಗಳಲ್ಲಿ, 74 ಕೋಟಿ ರೂ. ಗಳ ನೆರವಿನಿಂದ, 1,18,000 ಹೆಕ್ಟೇರ್ ಪ್ರದೇಶದಲ್ಲಿ 87,200 ರೈತರು ಸಾವಯವ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ.

18) ರಸಗೊಬ್ಬರ ಪೂರೈಕೆ: ಸರ್ಕಾರದ ನೆರವಿನಿಂದ ರಾಜ್ಯದಲ್ಲಿ ರಸಗೊಬ್ಬರ ಮಾರುಕಟ್ಟೆಯಲ್ಲಿ ಸ್ಥಿರತೆ ಕಾಪಾಡಲು ಅನುಕೂಲವಾಗಿದೆ. ಕಳೆದ 2 ವರ್ಷಗಳಲ್ಲಿ ಈವರೆಗೆ ಕರ್ನಾಟಕ ಕೃಷಿ ಮಾರುಕಟ್ಟೆ ಒಕ್ಕೂಟವು 1,800 ಕೋಟಿ ರೂ. ಮೌಲ್ಯದ 23 ಲಕ್ಷ ಟನ್ ರಸಗೊಬ್ಬರದ ವಹಿವಾಟು ನಡೆಸಿದೆ. ಕೃಷಿ ಮಾರುಕಟ್ಟೆ ಮಹಾಮಂಡಳಿಯು ಈಗ ರಾಜ್ಯದ ಒಟ್ಟು ರಸಗೊಬ್ಬರ ಬಳಕೆಯ ಮೂರನೇ ಒಂದರಷ್ಟು ಭಾಗದ ವಹಿವಾಟು ನಡೆಸುತ್ತಿದೆ. ಈ ಮಂಡಳಿಯ ಆರ್ಥಿಕ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಕೃಷಿ

ಮಾರುಕಟ್ಟೆ ಮಹಾಮಂಡಳಿಗೆ ದುಡಿಯುವ ಬಂಡವಾಳಕ್ಕಾಗಿ 400 ಕೋಟಿ ರೂ. ಸಾಲವನ್ನು ಪಡೆಯಲು ಸಹಾಯ ನೀಡುವುದು.

ಜೈವಿಕ ಇಂಧನ

19) ಜೈವಿಕ ಇಂಧನ ಕ್ಷೇತ್ರದಲ್ಲಿ ಕರ್ನಾಟಕದ ಸಾಧನೆ ದೇಶದ ಗಮನ ಸೆಳೆದಿದೆ. ದೇಶದಲ್ಲೇ ಪ್ರಪ್ರಥಮವಾಗಿ (ಅ) ಜೈವಿಕ ಇಂಧನ ನೀತಿಯ ಘೋಷಣೆ; (ಆ) ಕಾರ್ಯಪಡೆಯ ರಚನೆ; ಹಾಗೂ (ಇ) ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಸ್ಥಾಪನೆಯಂತಹ ಪರಿಣಾಮಕಾರಿ ಕ್ರಮಗಳಿಂದ ಜೈವಿಕ ಇಂಧನ ಕ್ಷೇತ್ರದಲ್ಲಿ ರಾಜ್ಯ ತನ್ನ ಛಾಪನ್ನು ಮೂಡಿಸಿದೆ. ಕಳೆದ ಎರಡು ವರ್ಷಗಳಲ್ಲಿ 35,000 ಹೆಕ್ಟೇರ್ ವಿಸ್ತೀರ್ಣದ ಪ್ರದೇಶದಲ್ಲಿ ಜೈವಿಕ ಇಂಧನ ಸಸಿಗಳನ್ನು ನೆಡಲಾಗಿದೆ. ರಾಜ್ಯದಾದ್ಯಂತ ಎಂಟು ಜೈವಿಕ ಇಂಧನ "ಮಾಹಿತಿ ಮತ್ತು ಪ್ರಾತ್ಯಕ್ಷಿಕೆ" ಕೇಂದ್ರಗಳು ಕಾರ್ಯಾರಂಭ ಮಾಡಿವೆ. ಗುಣಮಟ್ಟದ ಸಸಿಗಳ ತಯಾರಿಕೆಗೆ ರಾಜ್ಯದ ವಿವಿಧ ಭಾಗಗಳಲ್ಲಿ "ಕ್ಲೋನಲ್ ಆರ್ಚರ್ಡ್" ಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದಲ್ಲಿ ಜೈವಿಕ ಇಂಧನದ ಉಪಯೋಗವನ್ನು ಪ್ರೋತ್ಸಾಹಿಸಲು ಸೂಕ್ತ ಮಾರ್ಗಸೂತ್ರಗಳನ್ನು ನೀತಿಯಲ್ಲಿ ಅಳವಡಿಸಲಾಗುವುದು.

20) 2010-11ನೇ ಸಾಲಿನಲ್ಲಿ 17 ಲಕ್ಷ ಪಂಪುಸೆಟ್ಟುಗಳಿಗೆ 12,273 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗಿದೆ. ಈ ಸಂಬಂಧ ಎಸ್ಕಾಂಗಳಿಗೆ 3,576 ಕೋಟಿ ರೂ.ಗಳಷ್ಟು ಸಹಾಯಧನ ನೀಡಲಾಗಿದೆ. ಈ ವೆಚ್ಚ ಒಟ್ಟು ಬಜೆಟ್ ಗಾತ್ರದ ಶೇ.6ರಷ್ಟಾಗಿದ್ದು, ಇದರಿಂದ ಪಂಪ್‌ಸೆಟ್ ಹೊಂದಿರುವ ಪ್ರತಿ ರೈತನಿಗೆ ವರ್ಷಕ್ಕೆ ತಲಾ 21,000 ರೂ.ಗಳಷ್ಟು ಹಣಕಾಸಿನ ನೆರವು ದೊರೆತಂತಾಗಿದೆ.

ತೋಟಗಾರಿಕೆ

21) **ಕ್ಷೇತ್ರ ವಿಸ್ತರಣೆ ಹೆಚ್ಚಳ:** ರಾಜ್ಯದಲ್ಲಿ ತೋಟಗಾರಿಕೆ ಕ್ಷೇತ್ರ 19.29 ಲಕ್ಷ ಹೆಕ್ಟೇರ್‌ಗೆ ವಿಸ್ತರಣೆಯಾಗಿದ್ದು, ಕಳೆದ ಒಂದು ವರ್ಷದಲ್ಲಿ 37,600 ಹೆಕ್ಟೇರ್ ಪ್ರದೇಶವನ್ನು ತೋಟಗಾರಿಕೆ ವ್ಯಾಪ್ತಿಗೆ ತರಲಾಗಿದೆ. ತೋಟಗಾರಿಕೆಯ ಒಟ್ಟು ಆದಾಯ ರೂ.18,000 ಕೋಟಿ ಮೀರಿದ್ದು, ವಾರ್ಷಿಕ ಕ್ಷೇತ್ರ

ವಿಸ್ತೀರ್ಣದಲ್ಲಿ ಶೇಕಡಾ 4ರಷ್ಟು ಮತ್ತು ಉತ್ಪನ್ನದಲ್ಲಿ ಶೇಕಡಾ 5ರಷ್ಟು ಬೆಳವಣಿಗೆಯನ್ನು ಸಾಧಿಸಲಾಗಿದೆ.

22) ಜೈವಿಕ ಕೇಂದ್ರಗಳು, ತೋಟಗಾರಿಕೆ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯ: ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸರ್ಕಾರ ರಾಜ್ಯದಲ್ಲಿ 4 ಜೈವಿಕ ಕೇಂದ್ರಗಳನ್ನು ಸ್ಥಾಪಿಸಿದೆ. ಜೊತೆಗೆ ತೋಟಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡಲು 9 ತೋಟಗಾರಿಕಾ ಕಾಲೇಜುಗಳು ಮತ್ತು ಒಂದು ಸ್ನಾತಕೋತ್ತರ ಕೇಂದ್ರದೊಂದಿಗೆ ತೋಟಗಾರಿಕಾ ವಿಜ್ಞಾನಗಳ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.

23) ಪ್ರತ್ಯೇಕ ಮಂಡಳಿಗಳು: ಮಾವು ಮಂಡಳಿ ಮತ್ತು ದ್ರಾಕ್ಷಾರಸ ಮಂಡಳಿಯನ್ನು ಪ್ರತ್ಯೇಕವಾಗಿ ಸ್ಥಾಪಿಸುವುದರ ಮೂಲಕ ಮಾವು ಮತ್ತು ದ್ರಾಕ್ಷಿಯಂತಹ ಮೌಲ್ಯಯುತ ಬೆಳೆಗಳ ಅಭಿವೃದ್ಧಿಗೆ ವಿಶೇಷ ಗಮನವನ್ನು ಕೊಡಲಾಗಿದೆ.

24) ಹನಿ ನೀರಾವರಿ: 43,660 ಹೆಕ್ಟೇರ್ ಪ್ರದೇಶದಲ್ಲಿ ಹನಿ ನೀರಾವರಿ ವ್ಯವಸ್ಥೆ ಅಳವಡಿಸಲು ಮತ್ತು 7000 ರೈತರಿಗೆ ಯಂತ್ರೋಪಕರಣ ಖರೀದಿಸಲು ಸಹಾಯಧನ ನೀಡಲಾಗಿದೆ.

ಜಲಸಂಪನ್ಮೂಲ

25) 14 ಯೋಜನೆಗಳು ಪೂರ್ಣ: ಕಳೆದ ಎರಡೂವರೆ ವರ್ಷಗಳಲ್ಲಿ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿದ್ದ 14 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ, 1,34,700 ಎಕರೆ ಪ್ರದೇಶವನ್ನು ನೀರಾವರಿ ವ್ಯಾಪ್ತಿಗೊಳಪಡಿಸಲಾಗಿದೆ.

26) ಭದ್ರಾ ಮೇಲ್ದಂಡೆ ಯೋಜನೆ ಪ್ರಾರಂಭ: ನನ್ನ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಕೃಷ್ಣಾ ಕಣಿವೆಯ ಸ್ಕೀಂ 'ಎ' ಅಡಿಯ ಕೆಲವೊಂದು ನೀರಾವರಿ ಯೋಜನೆಗಳು ಸಿದ್ಧತಾಪೂರ್ವ ಹಂತದಲ್ಲಿದ್ದವು. ಸಿದ್ಧತೆಗಳನ್ನು ಕ್ಷಿಪ್ರವಾಗಿ ಪೂರ್ಣಗೊಳಿಸಿ ಅನುಷ್ಠಾನಕ್ಕೆ ಮುಂದಾಗಿದ್ದೇವೆ. ಪ್ರಮುಖವಾಗಿ ತೀವ್ರ ಬರಗಾಲ ಪೀಡಿತ ಪ್ರದೇಶಗಳಾದ ಚಿತ್ರದುರ್ಗ, ತುಮಕೂರು ಮತ್ತು ಕೋಲಾರ

ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

27) ನಾಲೆಗಳ ಆಧುನೀಕರಣ ಮತ್ತು ಕೆರೆಗಳಿಗೆ ನೀರು ತುಂಬಿಸುವುದು: ಭದ್ರಾ, ತುಂಗಭದ್ರಾ ಹಾಗೂ ಕಬಿನಿ ನಾಲೆಗಳ ಆಧುನೀಕರಣದಿಂದ 1,03,784 ಎಕರೆ ಪ್ರದೇಶಕ್ಕೆ ನೀರು ಹರಿಸಲಾಗಿದೆ. ಬಿಜಾಪುರ, ತುಮಕೂರು, ದಾವಣಗೆರೆ ಹಾಗೂ ಕಾವೇರಿ ಜಲಾನಯನ ಪ್ರದೇಶದಲ್ಲಿ ಅಂತರ್ಜಲ ಹೆಚ್ಚಿಸಲು ಕೆರೆಗಳಿಗೆ ನೀರನ್ನು ಒದಗಿಸುವ ಯೋಜನೆ ಚಾಲನೆಗೊಳಿಸಲಾಗಿದೆ.

28) ಎ.ಐ.ಬಿ.ಪಿ. ಯಿಂದ ಹೆಚ್ಚಿನ ಹಣ: ತ್ವರಿತ ನೀರಾವರಿ ಯೋಜನೆ (ಎ.ಐ.ಬಿ.ಪಿ.) ಅಡಿಯಲ್ಲಿ ಒಂದೇ ಬಾರಿಗೆ ಎಂಟು ಯೋಜನೆಗಳಿಗೆ ಬಾಕಿ ಮೊತ್ತದ 2039 ಕೋಟಿ ರೂ.ಗಳ ನೆರವಿನ ಅನುಮೋದನೆ ಪಡೆಯಲಾಗಿದೆ.

29) ಕೃಷ್ಣಾಕೊಳ್ಳದ ಯೋಜನೆಗಳು: ಕೃಷ್ಣಾಕೊಳ್ಳದ ರೈತರ ಬಹುದಿನಗಳ ಪ್ರಮುಖ ಬೇಡಿಕೆಯಾದ ಚಿಮ್ಮಲಗಿ, ಗುತ್ತಿಬಸವಣ್ಣ ಯೋಜನೆಗಳ ವಿಸ್ತರಣಾ ಕಾಮಗಾರಿ ಹಾಗೂ ಮಲ್ಲಾಬಾದ್ ಯೋಜನೆಗೆ ಚಾಲನೆ ನೀಡಿದ್ದು, ಮುಳವಾಡ ಏತ ನೀರಾವರಿ ಯೋಜನೆಯ ಪ್ರಾರಂಭಕ್ಕೆ ಸಿದ್ಧತೆ ಮಾಡಲಾಗಿದೆ.

30) ನಂಜಾಪುರ ಏತನೀರಾವರಿ, ತಾರಕ, ಉಡುತೊರೆ ಹಳ್ಳ, ಕಾಮ ಸಮುದ್ರ, ಹುಚ್ಚನಕೊಪ್ಪಲು, ಬೆನ್ನಹಳ್ಳಿ, ಹುಂಡಿ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಗೂಳೂರು – ಹೆಬ್ಬೂರು ಮತ್ತು ಹೊನ್ನವಳ್ಳಿ ಕುಡಿಯುವ ನೀರಿನ ಯೋಜನೆಗಳು ಅನುಷ್ಠಾನದಲ್ಲಿವೆ.

31) ಹಳೆಯ ಅಣೆಕಟ್ಟೆಗಳ ಆಧುನೀಕರಣ: ರಾಜ–ಮಹಾರಾಜರ ಕಾಲದ ಅಣೆಕಟ್ಟೆಗಳ ಆಧುನೀಕರಣ ಕಾಮಗಾರಿಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಶಿಂಷಾ ಎಡದಂಡೆ ನಾಲೆಯ ಅಭಿವೃದ್ಧಿ ಕಾಮಗಾರಿ ಯನ್ನು ಆರಂಭಿಸಲಾಗಿದೆ. 1986ರಲ್ಲಿ ಆರಂಭವಾಗಿದ್ದರೂ ನೆನೆಗುದಿಗೆ ಬಿದ್ದಿದ್ದ ಯಗಚಿ ಯೋಜನೆ ಪೂರ್ಣಗೊಳಿಸಲಾಗಿದೆ. ಶಿಥಿಲಾವಸ್ಥೆ ತಲುಪಿದ್ದ ಕೆ.ಆರ್.ಎಸ್. ಗೇಟುಗಳನ್ನು 7.4 ಕೋಟಿ ರೂ. ವೆಚ್ಚದಲ್ಲಿ ಬದಲಿಸಲಾಗಿದೆ.

32) ಪುನರ್ವಸತಿ: ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪುನರ್ವಸತಿ ಹಾಗೂ ಪುನರ್ನಿರ್ಮಾಣಕ್ಕೆ 289 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಭೀಮಾ, ಸಿಂಗಟಾಲೂರು, ಹಿರೇಹಳ್ಳ ಹಾಗೂ ಹಿಪ್ಪರಗಿ ಯೋಜನೆಗಳ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕಾರ್ಯಕ್ರಮದಡಿ ಮತ್ತು ನಾರಾಯಣಪುರ ಅಣೆಕಟ್ಟಿನ ಹಿನ್ನೀರಿನಿಂದ ಬಾದಿತವಾದ 10 ಗ್ರಾಮಗಳ ಸ್ಥಳಾಂತರ ಪ್ಯಾಕೇಜನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪಶುಸಂಗೋಪನೆ

33) ಪಶುಸಂಗೋಪನೆ ಕ್ಷೇತ್ರದಲ್ಲಿ ಕಳೆದ 33 ತಿಂಗಳಲ್ಲಿ ನಮ್ಮ ಸರ್ಕಾರ ತೆಗೆದುಕೊಂಡ ಹಲವಾರು ಕ್ರಮಗಳಿಂದ ಗಮನಾರ್ಹ ಅಭಿವೃದ್ಧಿಯಾಗಿದೆ.

- **ಹೆಚ್ಚಿದ ಹೈನೋದ್ಯಮ:** ರಾಜ್ಯದಲ್ಲಿ ಹಾಲು ಉತ್ಪಾದನಾ ಪ್ರಮಾಣ 48.21 ಲಕ್ಷ ಟನ್‌ಗಳಿಗೆ ಹೆಚ್ಚಿದೆ. 2006–07ರಲ್ಲಿ 41.24 ಲಕ್ಷ ಟನ್ ಇತ್ತು.
- **ಹಾಲು ಉತ್ಪಾದಕರಿಗೆ ಪ್ರೋತ್ಸಾಹ:** 2008–09ನೇ ಸಾಲಿನಲ್ಲಿ ಜಾರಿಗೊಳಿಸಲಾದ ಹಾಲು ಉತ್ಪಾದಕರಿಗೆ ಪ್ರತಿ ಲೀಟರಿಗೆ ರೂ.2ರ ಪ್ರೋತ್ಸಾಹ ಧನ ಯೋಜನೆಯಡಿ 2010–11ನೇ ಸಾಲಿಗೆ 247.58 ಕೋಟಿ ರೂ. ಒದಗಿಸಿದ್ದು, 6.5 ಲಕ್ಷ ಸದಸ್ಯರಿಗೆ ಇದರ ಪ್ರಯೋಜನ ದೊರೆತಿದೆ. ಇದರಿಂದ ಹಾಲು ಉತ್ಪಾದನೆಯಲ್ಲಿ ಶೇಕಡಾ 6.42ರಷ್ಟು ಹೆಚ್ಚಳ ಕಂಡುಬಂದಿದೆ.
- ಹಾಲು ಸಂಸ್ಕರಣೆ ಮತ್ತು ಶೀಥಲೀಕರಣ ಘಟಕಗಳ ಸ್ಥಾಪನೆಗೆ ಚಿಕ್ಕಬಳ್ಳಾಪುರ ಮೆಗಾ ಡೈರಿ ಸ್ಥಾಪನೆಗೆ 10 ಕೋಟಿ ರೂ. ಮತ್ತು ಗುಲ್ಬರ್ಗಾ ಹಾಗೂ ಬೆಳಗಾಂ ಶೀಥಲೀಕರಣ ಘಟಕ ಸ್ಥಾಪನೆಗೆ 10 ಕೋಟಿ ರೂ. ಒದಗಿಸಿದೆ.
- ಸಂಕಷ್ಟದಲ್ಲಿರುವ ವಿಧವೆಯರು ಮತ್ತು ದೇವದಾಸಿಯರಿಗೆ 'ಅಮೃತ ಯೋಜನೆ' ಯಡಿ ಕಳೆದ ಎರಡು ವರ್ಷಗಳಿಂದ 33.69 ಕೋಟಿ ರೂ. ನೆರವನ್ನು 27,353 ಮಹಿಳೆಯರಿಗೆ ನೀಡಲಾಗಿದೆ.
- ಪಶುವೈದ್ಯರ ಕೊರತೆಯನ್ನು ನೀಗಿಸಲು ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪಶುವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗಿದೆ. ಗದಗ ಮತ್ತು ಅಥಣಿಯಲ್ಲಿ ಹೊಸದಾಗಿ

ಪಶುವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

- 2009–10ನೇ ಸಾಲಿನಲ್ಲಿ ಜಾನುವಾರು ಉತ್ಪನ್ನಗಳ ಅಂದಾಜು ಮೌಲ್ಯ ರೂ.13,273 ಕೋಟಿಗಳಾಗಿದ್ದು, ಕಳೆದ ವರ್ಷಕ್ಕಿಂತ ಶೇಕಡ 19ರಷ್ಟು ಹೆಚ್ಚು ಬೆಳವಣಿಗೆಯಾಗಿದೆ.

ಮೀನುಗಾರಿಕೆ

34) ಮೀನುಗಾರಿಕೆಯಿಂದ ಸುಮಾರು 1.16 ಲಕ್ಷ ಒಳನಾಡು ಮೀನುಗಾರರು ಮತ್ತು 1.42 ಲಕ್ಷ ಕಡಲ ಮೀನುಗಾರರು ಲಾಭ ಪಡೆದಿದ್ದಾರೆ. ರಾಜ್ಯದಲ್ಲಿನ ಒಟ್ಟು ಮೀನು ಉತ್ಪಾದನೆ 2007–08ರಲ್ಲಿನ 2.97 ಲಕ್ಷ ಮೆಟ್ರಿಕ್ ಟನ್‌ನಿಂದ 2010–11ರಲ್ಲಿ 4.90 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿದೆಯೆಂದು ತಿಳಿಸಲು ಹರ್ಷಿಸುತ್ತೇನೆ.

ನೂತನ ಕಾರ್ಯತಂತ್ರಗಳು

35) ರಾಜ್ಯದಲ್ಲಿ ಕೃಷಿ ಮತ್ತು ಕೃಷಿಯೇತರ ಹಾಗೂ ನೀರಾವರಿ ಕ್ಷೇತ್ರಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವತ್ತ ನಮ್ಮ ಸರ್ಕಾರವು ದಿಟ್ಟ ಹೆಜ್ಜೆಗಳನ್ನು ಇಡಲು ನಿರ್ಧರಿಸಿದೆ. ಈ ದಿಶೆಯಲ್ಲಿ, ಹೆಚ್ಚುತ್ತಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೂಕ್ತ ಯೋಜನೆಗಳನ್ನು ರೂಪಿಸುವುದು, ಸೂಕ್ತ ತಾಂತ್ರಿಕತೆಯ ಕೊರತೆಯನ್ನು ನೀಗಿಸುವುದು, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಅವಶ್ಯವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು, ಅಗತ್ಯವಾದ ಹಾಗೂ ಉನ್ನತ ಮಟ್ಟದ ಸಂಸ್ಕರಣಾ ಸೌಲಭ್ಯಗಳು, ಉಗ್ರಾಣ ಮತ್ತು ಶೀತಲ ಕೇಂದ್ರಗಳ ನಿರ್ಮಾಣ, ಹಾಗೂ ಸೂಕ್ತ ತಾಂತ್ರಿಕತೆಗೆ ಪರಿಣಿತ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಏರ್ಪಡಿಸುವುದು ಮತ್ತು ಇವೆಲ್ಲದಕ್ಕೂ ಬೇಕಾಗಿರುವ ಅಗತ್ಯ ಪ್ರಮಾಣದ ಬಂಡವಾಳವನ್ನು ಕ್ರೋಢೀಕರಿಸುವ ಹಾಗೂ ಇದರ ಪೂರಕ ಅಂಶಗಳು ಮತ್ತು ಸಂಬಂಧಪಟ್ಟ ರೀತಿ ನೀತಿಗಳಿಗೆ ಈ ವರ್ಷದ ಕೃಷಿ ಆಯವ್ಯಯದಲ್ಲಿ ಹೆಚ್ಚಿನ ಮಹತ್ವವನ್ನು ನೀಡಲು ಉದ್ದೇಶಿಸಿದ್ದೇನೆ.

36) ನಮ್ಮ ರಾಜ್ಯದ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳ ಪುನರುಜ್ಜೀವನಕ್ಕೆ ನಾನು ಈ ಕೆಳಕಂಡ ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿದ್ದೇನೆ.

(i) ಕೃಷಿ, ಕೃಷಿಸಂಬಂಧಿತ ಮತ್ತು ನೀರಾವರಿ ವಲಯಗಳಿಗಾಗಿ 17,857 ಕೋಟಿ ರೂ;

(ii) 10 ಲಕ್ಷ ರೈತ ಕುಟುಂಬಗಳ ಅಭಿವೃದ್ಧಿಗೆ ಸುವರ್ಣ ಭೂಮಿ ಯೋಜನೆ ಅನುಷ್ಠಾನಕ್ಕೆ 1000 ಕೋಟಿ ರೂ;

(iii) ಸಹಕಾರಿ ಸಾಲ ಸಂಘಗಳ ಮುಖಾಂತರ ರೈತರಿಗೆ ಶೇ. 1ರ ಬಡ್ಡಿ ದರದಲ್ಲಿ ಕೃಷಿ ಸಾಲ;

(iv) ಸಾವಯವ ಕೃಷಿಗೆ 200 ಕೋಟಿ ರೂ;

(v) ಜೈವಿಕ ಇಂಧನ ಪ್ರೋತ್ಸಾಹಕ್ಕೆ 125 ಕೋಟಿ ರೂ;

(vi) ಹನಿ ಮತ್ತು ತುಂತುರು ನೀರಾವರಿ ಸಹಾಯಧನಕ್ಕೆ 100 ಕೋಟಿ ರೂ;

(vii) ಕೃಷಿ ಯಂತ್ರೋಪಕರಣಗಳಿಗೆ ಹೆಚ್ಚಿನ ಸಹಾಯಧನಕ್ಕೆ 100 ಕೋಟಿ ರೂ;

(viii) ಭೂ–ಚೇತನ ಕಾರ್ಯಕ್ರಮವನ್ನು 30 ಜಿಲ್ಲೆಗಳಿಗೆ ವಿಸ್ತರಿಸಲು 40 ಕೋಟಿ ರೂ;

(ix) ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆ ಬಲಪಡಿಸಲು ತಾಲ್ಲೂಕಿಗೊಂದು ಆಧುನಿಕ ಸಂಚಾರಿ ವಾಹನ ವ್ಯವಸ್ಥೆಗೆ 40 ಕೋಟಿ ರೂ;

(x) ಪುಷ್ಪೋದ್ಯಮ ಅಭಿವೃದ್ಧಿಗೆ 10 ಕೋಟಿ ರೂ. ವಿಶೇಷ ಅನುದಾನ;

(xi) ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಕೃಷಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ;

(xii) ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ ರಚನೆ;

(xiii) 500 ಕೋಟಿ ರೂ. ಗಳ ಕೃಷಿ ಮೂಲ ಸೌಕರ್ಯನಿಧಿ ಸ್ಥಾಪನೆ;

(xiv) ಕೃಷಿ ಆವರ್ತ ನಿಧಿ 1000 ಕೋಟಿ ರೂ.ಗಳಿಗೆ ಹೆಚ್ಚಳ;

(xv) ನೀರಾವರಿ ಪಂಪುಸೆಟ್ಟುಗಳಿಗೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು 3,900 ಕೋಟಿ ರೂ;

(xvi) ಕೆರೆಗಳ ಪುನರುಜ್ಜೀವನಕ್ಕೆ ಮತ್ತು ಬತ್ತಿ ಹೋದ ಕೆರೆಗಳಿಗೆ ನೀರು ತುಂಬಿಸಲು 1000 ಕೋಟಿ ರೂ;

(xvii) 1 ಲಕ್ಷ ಅಕ್ರಮ ಪಂಪ್‌ಸೆಟ್ಟುಗಳ ಸಕ್ರಮಕ್ಕೆ 100 ಕೋಟಿ ರೂ;

(xviii) 2011–20ನ್ನು ನೀರಾವರಿ ದಶಕವೆಂದು ಘೋಷಿಸಿ, ಜಲ ಸಂಪನ್ಮೂಲ ಅಭಿವೃದ್ಧಿಗೆ 50,000 ಕೋಟಿ ರೂ.ಗಳ ಕ್ರೋಢೀಕರಣ;

(xix) ನೀರಾವರಿ ವಲಯಕ್ಕೆ 2011–12 ರಲ್ಲಿ 7,800 ಕೋಟಿ ರೂ. ಗಳ ವೆಚ್ಚ;

(xx) ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ಬಡ್ಡಿ ರಹಿತ ಸಾಲದ ಯೋಜನೆ;

(xxi) ಗ್ರಾಮೀಣ ಪ್ರದೇಶದ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ;

(xxii) ಜೇನು ಸಾಕಾಣಿಕೆಗೆ 50,000 ಯುವಕ/ಯುವತಿಯರಿಗೆ ಪ್ರೋತ್ಸಾಹ ಧನ;

(xxiii) ಭೂ ದಾಖಲೆಗಳ ನವೀಕರಣಕ್ಕೆ ವಿಶೇಷ ಒತ್ತು ಮತ್ತು ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ;

(xxiv) ಕೃಷಿ ಮಾರುಕಟ್ಟೆಗಳಲ್ಲಿ ಪಾರದರ್ಶಕತೆ ಮತ್ತು ಗಣಕೀಕರಣಕ್ಕೆ ಆದ್ಯತೆ;

(xxv) 50 ಮೀನು ಮಾರುಕಟ್ಟೆಗಳ ನಿರ್ಮಾಣಕ್ಕೆ 5 ಕೋಟಿ ರೂ;

(xxvi) ಸಣ್ಣ ಬಂದರುಗಳ ನಿರ್ಮಾಣಕ್ಕೆ 100 ಕೋಟಿ ರೂ;

(xxvii) ಉಗ್ರಾಣಗಳ ನಿರ್ಮಾಣಕ್ಕೆ 100 ಕೋಟಿ ರೂ;

ಕೃಷಿ ಅಭಿವೃದ್ಧಿ

37) ಸುವರ್ಣಭೂಮಿ ಯೋಜನೆ : ರಾಜ್ಯದಲ್ಲಿ ಒಟ್ಟು 76 ಲಕ್ಷ ರೈತ ಕುಟುಂಬಗಳಿವೆ. ಈ ರೈತ ಕುಟುಂಬಗಳಲ್ಲಿ 8.82 ಲಕ್ಷ ಪರಿಶಿಷ್ಟ ಜಾತಿ ಹಾಗೂ 4.39 ಲಕ್ಷ ಪರಿಶಿಷ್ಟ ಪಂಗಡ ಗುಂಪಿಗೆ ಸೇರಿವೆ. ಒಟ್ಟು ರೈತ ಕುಟುಂಬಗಳ ಶೇಕಡ 75ರಷ್ಟು ಮಂದಿ ಸಣ್ಣ ಮತ್ತು ಅತಿ ಸಣ್ಣ ರೈತ ವರ್ಗಕ್ಕೆ ಸೇರಿದ್ದಾರೆ. ಈ ಸಣ್ಣ ಮತ್ತು ಅತಿ ಸಣ್ಣ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಎಲ್ಲಾ ನೆಲ ಮತ್ತು ಜಲ ಅಭಿವೃದ್ಧಿ ಇಲಾಖೆಗಳು ಹಾಗೂ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಪರಿಣಿತ ಸಂಸ್ಥೆಗಳ ಸಮನ್ವಯದೊಂದಿಗೆ ಒಂದು ಸಮಗ್ರ ಯೋಜನೆಯನ್ನು ರೂಪಿಸಲು ಉದ್ದೇಶಿಸಿದೆ. ಈ ನಿಟ್ಟಿನಲ್ಲಿ:

i. ಈ ವರ್ಷ 10 ಲಕ್ಷ ರೈತ ಕುಟುಂಬಗಳ ಪುನರುಜ್ಜೀವನಕ್ಕೆ ವಿಶೇಷ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಇದರಲ್ಲಿ, ಪರಿಶಿಷ್ಟ ಜಾತಿಯ 2 ಲಕ್ಷ ಹಾಗೂ ಪರಿಶಿಷ್ಟ ಪಂಗಡಗಳ 1 ಲಕ್ಷ ರೈತ ಕುಟುಂಬಗಳು ಸೇರಿವೆ.

ii. ಈ ಯೋಜನೆಯಲ್ಲಿ ಪ್ರತಿ ರೈತ ಕುಟುಂಬಕ್ಕೆ ನೇರವಾಗಿ ಬ್ಯಾಂಕ್ ಅಥವಾ ಸಹಕಾರಿ ಸಂಘಗಳ ಮೂಲಕ, ಪ್ರೋತ್ಸಾಹ ಧನವಾಗಿ ಒಟ್ಟು 10 ಸಾವಿರ ರೂ. ಗಳನ್ನು (2 ಕಂತುಗಳಲ್ಲಿ) ಗರಿಷ್ಠ 2 ಎಕರೆಗೆ ಮೀರದಂತೆ ನೀಡಲಾಗುವುದು. ಹಿಡುವಳಿ ಗಾತ್ರ ಕಡಿಮೆ ಇದ್ದರೆ ಪ್ರೋತ್ಸಾಹಧನವನ್ನು ಅದೇ ಅನುಪಾತದಲ್ಲಿ ನೀಡಲಾಗುವುದು.

iii. ಒಟ್ಟು 10 ಲಕ್ಷ ಕುಟುಂಬಗಳು ಈ ಕ್ಷೇತ್ರಗಳನ್ನು ಒಳಗೊಂಡಿರುತ್ತವೆ: ತೋಟಗಾರಿಕೆ–2.5 ಲಕ್ಷ (ಮಾವು, ದ್ರಾಕ್ಷಿ, ದಾಳಿಂಬೆ, ನಿಂಬೆ, ಬಾಳೆ, ಅನಾನಸ್, ಸಪೋಟ, ಪಪ್ಪಾಯ ಹಾಗೂ ಇತರೆ), ರೇಷ್ಮೆ–50 ಸಾವಿರ, ಜೈವಿಕ ಇಂಧನ–1 ಲಕ್ಷ (ಹೊಂಗೆ, ಸೀಮಾರೂಬ ಹಾಗೂ ಇತರೆ), ಸಾವಯವ ಕೃಷಿ–2 ಲಕ್ಷ, ಉತ್ತಮ ತಳಿಯ ಎಣ್ಣೆ ಬೀಜ, ದ್ವಿದಳ ಧಾನ್ಯಗಳು ಮತ್ತು ಬಿ.ಟಿ. ಹತ್ತಿ–3 ಲಕ್ಷ, ಜೇನು ಸಾಕಾಣಿಕೆ–50 ಸಾವಿರ, ಸವಳು ಮತ್ತು ಜವಳು ಪ್ರದೇಶಗಳಲ್ಲಿ ಮೀನುಗಾರಿಕೆ–50 ಸಾವಿರ. ಇದರಿಂದ ಸುಮಾರು 15 ಲಕ್ಷ ಎಕರೆ ಪ್ರದೇಶಗಳಲ್ಲಿನ ರೈತರ ಜೀವನ ಮಟ್ಟ ಸುಧಾರಿಸುವುದೆಂದು ಆಶಿಸಿದ್ದೇನೆ.

iv. ಈ ಯೋಜನೆ ಪ್ರಮುಖವಾಗಿ ಒಣ ಬೇಸಾಯಗಾರರಿಗೆ ಅನ್ವಯಿಸುತ್ತದೆ. ಇದರಲ್ಲಿ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶಗಳು ಸೇರುವುದಿಲ್ಲ.

v. ಈ ಯೋಜನೆಯನ್ನು ಉತ್ತಮ ರೀತಿಯಲ್ಲಿ ವಿನ್ಯಾಸಗೊಳಿಸಿ, ಅದರ ಪರಿವೀಕ್ಷಣೆ ಮತ್ತು ಕಾರ್ಯಕ್ಷಮತೆ ಹೆಚ್ಚಿಸಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಣತ ಸಂಸ್ಥೆಗಳ (ಇಕ್ರಿಸ್ಯಾಟ್, ಐ.ಐ.ಎಂ.ಬಿ., ಐಸೆಕ್ ಹಾಗೂ ಇತರೆ) ಸಹಯೋಗದಲ್ಲಿ ಅನುಷ್ಠಾನ ಮಾಡಲಾಗುವುದು. ಸಂಬಂಧಪಟ್ಟ ಇಲಾಖೆಗಳು ಆಯಾ ಕ್ಷೇತ್ರಗಳ

ಸಮನ್ವಯ ಇಲಾಖೆಗಳಾಗಿ ಕಾರ್ಯನಿರ್ವಹಿಸುತ್ತವೆ. ಫಲಾನುಭವಿಗಳ ಎಲ್ಲಾ ವಿವರಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು ಮತ್ತು ಎಲ್ಲಾ ಫಲಾನುಭವಿಗಳಿಗೂ ಈ ಕುರಿತು ಪಾಸ್‌ಬುಕ್ ಅನ್ನು ನೀಡಲಾಗುವುದು. ಇದಕ್ಕಾಗಿ ಪ್ರಾರಂಭಿಕ ಹಂತದಲ್ಲಿ 20 ಕೋಟಿ ರೂ. ಗಳನ್ನು ನೀಡಲಾಗುವುದು.

vi. ವಿವರವಾದ ಕಾರ್ಯಯೋಜನೆಗಳನ್ನು ಮಾರ್ಚ್ 2011ರ ಅಂತ್ಯದೊಳಗೆ ಪೂರ್ಣಗೊಳಿಸಿ, ಏಪ್ರಿಲ್ 2011ರಿಂದ ಪ್ರಾರಂಭಿಸಿ, ಈ ಮುಂಗಾರಿನ ಸಮಯಕ್ಕೆ ರೈತರು ಇದರ ಉಪಯೋಗ ಪಡೆಯಲು ಸಾಧ್ಯವಾಗುವಂತೆ ಅನುಷ್ಠಾನಗೊಳಿಸಲಾಗುವುದು. ಫಲಾನುಭವಿಗಳನ್ನು ರಾಜ್ಯದ ಎಲ್ಲಾ ಭಾಗಗಳಿಂದ ಆಯ್ಕೆ ಮಾಡಲಾಗುವುದು.

vii. ಮೇಲಿನ ಎಲ್ಲಾ ಅಂಶಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಈ ವರ್ಷ 1,000 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗುವುದು.

38) ಶೇ. 1ರ ಬಡ್ಡಿ ದರದಲ್ಲಿ ಕೃಷಿ ಸಾಲ: ಈ ವರ್ಷದಿಂದ ಸಹಕಾರಿ ಸಂಸ್ಥೆಗಳ ಮೂಲಕ ಪಡೆಯುವ 3 ಲಕ್ಷದವರೆಗಿನ ಬೆಳೆ ಸಾಲದ ಮೇಲಿನ ಬಡ್ಡಿ ಪ್ರಮಾಣವನ್ನು ಶೇಕಡ 3ರಿಂದ 1ಕ್ಕೆ ಇಳಿಸಿ, ರೈತರಿಗೆ ಸುಲಭವಾಗಿ ಸಾಲ ದೊರಕಿಸುವ ವ್ಯವಸ್ಥೆ ಮಾಡಲಾಗುವುದು. ಬಡ್ಡಿ ದರದಲ್ಲಿ ಇಳಿಕೆಯ ವ್ಯತ್ಯಾಸದ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸುವುದು. ವಾಣಿಜ್ಯ ಬ್ಯಾಂಕುಗಳಿಂದ ರೂ.50,000ವರೆಗೆ ಪಡೆಯುವ ಸಾಲದ ಮೇಲಿನ ಬಡ್ಡಿ ಪ್ರಮಾಣವು ಶೇ.3ರ ದರದಲ್ಲಿ ಮುಂದುವರೆಯುವುದು.

39) ಸಾವಯವ ಕೃಷಿ ಮಿಷನ್: ದೇಶದಲ್ಲೇ ಮೊದಲ ಬಾರಿಗೆ, 2008ರಲ್ಲಿ ನಮ್ಮ ಸರಕಾರ ರೈತ ಸದಸ್ಯರಿರುವ ಸಾವಯವ ಕೃಷಿ ಮಿಷನ್ ಸಮಿತಿಯನ್ನು ರಚನೆ ಮಾಡಿತು. ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳು ಸಾವಯವ ಕೃಷಿಕರ ಸಂಘಗಳ ಮುಖಾಂತರ ಅನುಷ್ಠಾನಗೊಳ್ಳುತ್ತಿವೆ. ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲು, ನಾನು, ಪ್ರತಿ ತಿಂಗಳಿಗೊಮ್ಮೆ "ಅನ್ನದಾತನ ಅಂಗಳದಲ್ಲಿ ಮುಖ್ಯಮಂತ್ರಿಗಳಿಂದ ಸಾವಯವ ಸಂವಾದ" ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಈವರೆಗೆ ಇದ್ದ 72,000 ಸಾವಯವ ರೈತರ

ಸಂಖ್ಯೆಯನ್ನು, ಮುಂದಿನ ವರ್ಷಗಳಲ್ಲಿ, ಪ್ರತಿ ತಾಲ್ಲೂಕಿಗೆ 3000ರಂತೆ ಒಟ್ಟು 5,28,000 ರೈತ ಕುಟುಂಬಗಳಿಗೆ ವಿಸ್ತರಿಸಲಾಗುವುದು. ಅವರಿಗೆ ತರಬೇತಿ, ಕೌಶಲ್ಯವೃದ್ಧಿ, ವಿದೇಶ ಪ್ರವಾಸ, ಉತ್ಪನ್ನಗಳ ಸಂಸ್ಕರಣೆ, ಮಾರುಕಟ್ಟೆ ಸಹಾಯ, ಮೌಲ್ಯಮಾಪನ ಚಟುವಟಿಕೆಗಳಿಗೆ ಈ ವರ್ಷ ಒಟ್ಟು 200 ಕೋಟಿ ರೂ.ಗಳನ್ನು ನೀಡಲಾಗುವುದು.

40) ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸೂಕ್ಷ್ಮ ನೀರಾವರಿ ಯೋಜನೆ: ನೀರಿನ ಸಮರ್ಪಕ ಬಳಕೆಯನ್ನು ಉತ್ತೇಜಿಸಲು, ಅಂತರ್ಜಲ ಸಂರಕ್ಷಣೆ, ಬೆಳೆಗಳಿಂದ ಹೆಚ್ಚಿನ ಇಳುವರಿ, ಉತ್ಪಾದನೆ ಹಾಗೂ ವಿದ್ಯುತ್ ಶಕ್ತಿಯ ಸೂಕ್ತ ಬಳಕೆಯನ್ನು ಪ್ರೋತ್ಸಾಹಿಸಲು ಸೂಕ್ಷ್ಮ ನೀರಾವರಿ ಯೋಜನೆ ಅಗತ್ಯವಾಗಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರದ ಶೇಕಡ 40ರ ಅನುದಾನ ಹಾಗೂ ಉಳಿದ 35ರಷ್ಟು (ಶೇಕಡ 75ಕ್ಕೆ ಸರಿ ಹೊಂದುವಂತೆ) ಸಹಾಯಧನವನ್ನು ರಾಜ್ಯದ ಪಾಲಿನಿಂದ ಸಮನ್ವಯಗೊಳಿಸಿ ಅನುಷ್ಠಾನ ಮಾಡಲಾಗುವುದು. ಈ ಯೋಜನೆಯನ್ನು ಅಂತರಗಂಗಾ ಕಾರ್ಪೋರೇಷನ್ ಮೂಲಕ, ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗುವುದು. 2 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶ ಮತ್ತು 2 ಲಕ್ಷ ಹೆಕ್ಟೇರ್ ತೋಟಗಾರಿಕಾ ಪ್ರದೇಶವನ್ನು ಸೂಕ್ಷ್ಮ ನೀರಾವರಿ ಯೋಜನೆಯಡಿ ತರಲಾಗುವುದು. 2011-12ನೇ ಸಾಲಿನಲ್ಲಿ ಈ ಉದ್ದೇಶಕ್ಕೆ ಒಟ್ಟು 100 ಕೋಟಿ ರೂ. ಅನುದಾನ ನೀಡಲಾಗುವುದು ಮತ್ತು ಅಂತರ್ಜಲದ ತೀವ್ರ ಶೋಷಣೆಯಾಗಿರುವ ತಾಲ್ಲೂಕುಗಳಿಗೆ ಪ್ರಾಮುಖ್ಯತೆ ನೀಡಲಾಗುವುದು.

41) ಕೃಷಿ ಯಾಂತ್ರೀಕರಣ: ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹೆಚ್ಚಿನ ಕೃಷಿ ಯಂತ್ರೋಪಕರಣಗಳ ಅಗತ್ಯವಿದೆ. ರೈತರ ಅವಶ್ಯಕತೆಗೆ ಅನುಗುಣವಾಗಿ ಈ ಉಪಕರಣಗಳನ್ನು (ಉದಾ: ಟ್ರಾಕ್ಟರ್, ಟಿಲ್ಲರ್, ಭತ್ತ ನಾಟಿ ಮಾಡುವ ಯಂತ್ರ, ಕಬ್ಬು ನಾಟಿ ಮಾಡುವ ಯಂತ್ರ, ಕಬ್ಬು ಕೊಯ್ಲು ಯಂತ್ರ, ಇತ್ಯಾದಿ) ಗರಿಷ್ಠ ಶೇಕಡ 50ರ ರಿಯಾಯಿತಿ ದರದಲ್ಲಿ (ರೂ.50,000 ಮೀರದಂತೆ) ಒದಗಿಸಲು ಈ ಯೋಜನೆಗೆ 100 ಕೋಟಿ ರೂ. ಗಳನ್ನು ಹಂಚಿಕೆ

ಮಾಡಲಾಗುವುದು. ಕೃಷಿ ಯಂತ್ರೋಪಕರಣಗಳ ವಿತರಣೆಯಲ್ಲಿ ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ ನೀಡಲಾಗುವುದು.

42) ಭೂಚೇತನ : 2011–12ನೇ ಸಾಲಿನಲ್ಲಿ ಭೂಚೇತನ ಯೋಜನೆಯನ್ನು 30 ಜಿಲ್ಲೆಗಳಿಗೆ ವಿಸ್ತರಿಸಲಾಗುವುದು. 31 ಲಕ್ಷ ಹೆಕ್ಟೇರ್‌ನಲ್ಲಿ (3 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶ ಸೇರಿದಂತೆ) ಸುಮಾರು 30 ಲಕ್ಷ ರೈತರು ಇದರ ಪ್ರಯೋಜನ ಪಡೆಯಲಿದ್ದಾರೆ. ಈ ಯೋಜನೆಯ ವಿಸ್ತರಣೆಗೆ 40 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

43) ಕೃಷಿ ಮೂಲಭೂತ ಸೌಕರ್ಯ ಬಂಡವಾಳ ಹೆಚ್ಚಿಸಲು ಉತ್ತೇಜನ: ನಮ್ಮ ರಾಜ್ಯದಲ್ಲಿ ಸುಸ್ಥಿರ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಸಂಸ್ಕರಣೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಈ ದಿಕ್ಕಿನಲ್ಲಿ 3 ಅಂಶಗಳನ್ನು ಗಮನಿಸಬೇಕಾಗಿದೆ. ಒಂದು, ಸಮಗ್ರ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳ ಅಭಿವೃದ್ಧಿ; ಎರಡು, ಕೃಷಿ ಮತ್ತು ಕೈಗಾರಿಕೆಗಳ ಮಧ್ಯೆ ಸಮನ್ವಯವನ್ನು ರಾಜ್ಯಾದ್ಯಂತ ವಿಸ್ತರಿಸುವುದು; ಮೂರು, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮೂಲಗಳಿಂದ ಉತ್ತಮ ತಾಂತ್ರಿಕತೆ ಮತ್ತು ಬಂಡವಾಳವನ್ನು ಕ್ರೋಢೀಕರಿಸುವುದು. ಈ ದಿಕ್ಕಿನಲ್ಲಿ, ನಾವು ಎರಡು ದಿಟ್ಟ ಹೆಜ್ಜೆಗಳನ್ನು ಇಡುತ್ತಿದ್ದೇವೆ. ಒಂದು, ಅದಕ್ಕೆ ಸಂಬಂಧಪಟ್ಟ ನೀತಿ; ಎರಡು, ಇದಕ್ಕೆ ಪೂರಕವಾದ ಜಾಗತಿಕ ಬಂಡವಾಳ ಸಮಾವೇಶ.

43.1) ಕರ್ನಾಟಕ ಕೃಷಿ–ವಾಣಿಜ್ಯ ಅಭಿವೃದ್ಧಿ ನೀತಿ: ರಾಷ್ಟ್ರದಲ್ಲಿಯೇ ಮೊಟ್ಟ ಮೊದಲ ಬಾರಿಗೆ, ಕೃಷಿ ಮತ್ತು ಕೃಷಿಯೇತರ ಉತ್ಪನ್ನಗಳಿಗೆ ಉತ್ತಮ ಸಂಸ್ಕರಣೆ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ನಿರ್ಮಿಸಲು ಮತ್ತು ಅದಕ್ಕೆ ಅಗತ್ಯವಾದ ಬಂಡವಾಳ ಮತ್ತು ಸೂಕ್ತ ಪರಿಸರವನ್ನು ರೂಪಿಸಲು "ಕರ್ನಾಟಕ ಕೃಷಿ–ವಾಣಿಜ್ಯ ಅಭಿವೃದ್ಧಿ ನೀತಿ" **(Karnataka Agri Business Development Policy)** ಯನ್ನು ಈಗಾಗಲೇ ರೂಪಿಸಲಾಗಿದೆ.

43.2) ಜಾಗತಿಕ ಕೃಷಿ ಬಂಡವಾಳ ಸಮಾವೇಶ: ನಮ್ಮ ರಾಜ್ಯದಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಹೆಚ್ಚು ಬಂಡವಾಳ ಹೂಡುವ ಅಗತ್ಯವಿದೆ. ರೈತರ ಜೀವನೋಪಾಯಗಳಿಗೆ ಉತ್ತಮ ಮಾರ್ಗಗಳನ್ನು ರೂಪಿಸಲು ಮತ್ತು

ಅವರ ಮಕ್ಕಳಿಗೆ ಒಳ್ಳೆಯ ತರಬೇತಿ ನೀಡುವುದು, ರಾಜ್ಯಾದ್ಯಂತ ಉಗ್ರಾಣಗಳು ಮತ್ತು ಶೀತಲ ಕೇಂದ್ರಗಳ ಸ್ಥಾಪನೆ, ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಒದಗಿಸಲು ಅಗತ್ಯವಾದ ವರ್ಗೀಕರಣ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳೊಡನೆ ಸಂಪರ್ಕ ಸಾಧಿಸಲು, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ರಾಜ್ಯಾದ್ಯಂತ ಒದಗಿಸಲು ಸುಮಾರು 51 ಸಾವಿರ ಕೋಟಿ ರೂ. ಅವಶ್ಯಕವೆಂದು ಅಂದಾಜಿಸಲಾಗಿದೆ. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಬಂಡವಾಳವನ್ನು ಆಕರ್ಷಿಸಲು ಈ ವರ್ಷದಲ್ಲಿ (ಜೂನ್ 2011) "ಜಾಗತಿಕ ಕೃಷಿ ಬಂಡವಾಳ ಸಮಾವೇಶ" ವನ್ನು ಆಯೋಜಿಸಲಾಗುವುದು.

43.3) ಮೇಲಿನ ಎರಡೂ ಅಂಶಗಳಿಗೆ ಪೂರಕವಾಗಿ ತಾಂತ್ರಿಕ ಮತ್ತು ಆರ್ಥಿಕ ಯೋಜನಾ ವರದಿಗಳನ್ನು ತಯಾರಿಸಿ, ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲು 2011–12ನೇ ಸಾಲಿಗೆ 50 ಕೋಟಿ ರೂ. ಗಳನ್ನು ಒದಗಿಸಲಾಗುವುದು.

43.4) ಕೃಷಿ ಮೂಲಸೌಕರ್ಯ ನಿಧಿ: ರಾಜ್ಯಾದ್ಯಂತ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಮೂಲಸೌಕರ್ಯಕ್ಕೆ ಬಂಡವಾಳ ಆಕರ್ಷಿಸಿ, ಆ ಮೂಲಕ ಕೃಷಿ ಮೂಲ ಸೌಕರ್ಯ ಯೋಜನೆಗಳಾದ, ಸಂಸ್ಕರಣಾ ಘಟಕಗಳು, ಶೀತಲ ಸಂಗ್ರಹಾಗಾರಗಳು, ಉಗ್ರಾಣಗಳು ಮತ್ತು ಮಾರುಕಟ್ಟೆಗಳ ನಿರ್ಮಾಣ ಹಾಗೂ ನಿರ್ವಹಣೆ ಮತ್ತಿತರ ಚಟುವಟಿಕೆಗಳಿಗೆ ಬಳಸಲು ಕನಿಷ್ಟ ಪಕ್ಷ 500 ಕೋಟಿ ರೂ.ಗಳ ವಾರ್ಷಿಕ ಖಾತರಿ ಹಣದೊಂದಿಗೆ ಕೃಷಿ ಮೂಲಸೌಕರ್ಯ ನಿಧಿ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ.

44) ಕೃಷಿ ಆವರ್ತ ನಿಧಿ: ರೈತರು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ಬಹಳಷ್ಟು ಸಾರಿ ನಷ್ಟಕ್ಕೊಳಗಾಗುತ್ತಾರೆ. ಕೇಂದ್ರ ಸರ್ಕಾರ ಕನಿಷ್ಟ ಬೆಂಬಲ ಬೆಲೆಗಳನ್ನು ನಿಗದಿ ಮಾಡಿದ್ದರೂ, ರೈತರಿಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ, ನಮ್ಮ ರಾಜ್ಯ ಸರ್ಕಾರದಿಂದ ಪ್ರಮುಖ 5 ಬೆಳೆಗಳ (ಭತ್ತ, ಜೋಳ, ಮುಸುಕಿನ ಜೋಳ, ರಾಗಿ ಮತ್ತು ತೊಗರಿ) ಬೆಲೆಯನ್ನು ಕೇಂದ್ರ ಸರ್ಕಾರ ಸೂಚಿಸುವ ಕನಿಷ್ಟ ಬೆಲೆಗಿಂತ ಕಡಿಮೆ ಆಗದಂತೆ ನಿರ್ವಹಿಸಲು ಕೃಷಿ ಆವರ್ತ ನಿಧಿಯನ್ನು 1,000 ಕೋಟಿಗೆ ರೂಪಾಯಿಗೆ ಹೆಚ್ಚಿಸಲಾಗುವುದು.

45) ಭತ್ತ ಮತ್ತು ಕಬ್ಬು ಬೆಳೆಗಳ ಉತ್ಪಾದನೆ: ಕರ್ನಾಟಕ ರಾಜ್ಯದಲ್ಲಿ ಭತ್ತ ಮತ್ತು ಕಬ್ಬು, ನೀರಾವರಿ ಪ್ರದೇಶದ ಪ್ರಮುಖ ಬೆಳೆಗಳಾಗಿವೆ. ಈ ಎರಡೂ ಬೆಳೆಗಳ ಉತ್ತಮ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸುವ ಮೂಲಕ ಉತ್ಪಾದಕತೆಯನ್ನು ಶೇಕಡ 30ರಷ್ಟು ಹೆಚ್ಚಿಸಲು ಈ ವರ್ಷದಿಂದ ಯೋಜನೆ ಪ್ರಾರಂಭಿಸಲಾಗುವುದು. ಭತ್ತದ ಹೆಚ್ಚಿನ ಉತ್ಪಾದಕತೆಯನ್ನು 4 ವರ್ಷಗಳಲ್ಲಿ 8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಕಬ್ಬಿನ ಹೆಚ್ಚಿನ ಉತ್ಪಾದಕತೆಯನ್ನು 4 ವರ್ಷಗಳಲ್ಲಿ 4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುವುದು. ಇದಕ್ಕಾಗಿ ಒಟ್ಟು 9 ಕೋಟಿ ರೂ. ಅನುದಾನ ಒದಗಿಸಲಾಗುವುದು.

46) ಬೀಜಗಳ ಪೂರೈಕೆ: ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಗುಣಮಟ್ಟದ ಬಿತ್ತನೆ ಬೀಜಗಳನ್ನು ಪೂರೈಸಲು 2011-12ನೇ ಸಾಲಿನಲ್ಲಿ 60 ಕೋಟಿ ರೂ. ಒದಗಿಸಲಾಗುವುದು.

47) ಕೃಷಿ, ತೋಟಗಾರಿಕೆ, ಪಶುಪಾಲನೆ ಹಾಗೂ ಮೀನುಗಾರಿಕೆ ವಿಷಯಗಳಲ್ಲಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರಾರಂಭ: ಕೃಷಿಯಲ್ಲಿ ಈಗ ವಾರ್ಷಿಕ ಕೇವಲ 1000 ಪದವೀಧರರು ಹೊರ ಬರುತ್ತಿದ್ದು (ಎಲ್ಲಾ ವಿಶ್ವವಿದ್ಯಾಲಯಗಳೂ ಸೇರಿ), ಇದರಲ್ಲಿ ಶೇಕಡ 80 ರಷ್ಟು ಮಂದಿ ಸ್ನಾತಕೋತ್ತರ ವಿಷಯಗಳನ್ನು ಓದಲು ಹೋಗುತ್ತಾರೆ. ಉಳಿದ ಶೇಕಡ 20 ರಷ್ಟರಲ್ಲಿ ಬಹುತೇಕ ಮಂದಿ ಖಾಸಗಿ ಕಂಪೆನಿಗಳಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳುತ್ತಾರೆ. ಹೀಗಾಗಿ ಗ್ರಾಮೀಣ ಪರಿಸರದಲ್ಲಿ ಕೃಷಿಕರೊಡನೆ ಕೆಲಸ ಮಾಡುವ ತಾಂತ್ರಿಕ ವರ್ಗದ ಸಿಬ್ಬಂದಿಯೇ ಇಲ್ಲದಂತಾಗಿದೆ. ಈ ಕೊರತೆಯನ್ನು ನೀಗಿಸಲು ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ವಿವಿಧ ವಿಷಯಗಳಲ್ಲಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ರೂಪಿಸಲಾಗುವುದು. ಈ ವರ್ಷ 1000 ವಿದ್ಯಾರ್ಥಿಗಳು ದೀರ್ಘಾವಧಿ, ಮತ್ತು 3000 ವಿದ್ಯಾರ್ಥಿಗಳು ಅಲ್ಪಾವಧಿ ತರಬೇತಿ ಪಡೆಯಲಿದ್ದಾರೆ. ಇದಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ 1,000 ರೂ. ವಿದ್ಯಾರ್ಥಿ ವೇತನ ನೀಡಲಾಗುವುದು.

48) ಕೃಷಿ ಮತ್ತು ತೋಟಗಾರಿಕೆಗೆ ಸಂಚಾರಿ ಸೇವಾ ವಾಹನ ವ್ಯವಸ್ಥೆ: ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆಯಲ್ಲಿನ ತಾಂತ್ರಿಕತೆಗಳನ್ನು ರೈತರಿಗೆ ತಲುಪಿಸಲು ಸಂಚಾರಿ ವಿಸ್ತರಣಾ ವ್ಯವಸ್ಥೆಯನ್ನು ಪ್ರಾರಂಭಿಸುವುದು ಅಗತ್ಯವಾಗಿದೆ. ರೈತರ ಕೃಷಿ ಸಮಸ್ಯೆಗಳಿಗೆ ಅವರ ಬಳಿಗೇ ಹೋಗಿ ಪರಿಹಾರ ಸೂಚಿಸಲು, ವಿವಿಧ ಯೋಜನೆಗಳ ಬಗ್ಗೆ ಸೂಕ್ತ ಮಾಹಿತಿ, ಸಲಹೆ ಹಾಗೂ ತರಬೇತಿ ನೀಡಲು ಸಂಚಾರಿ ವಾಹನಗಳನ್ನು ಪ್ರತಿ ತಾಲ್ಲೂಕಿಗೊಂದರಂತೆ ನೀಡಲು ಯೋಜಿಸಿದೆ. ಕೃಷಿ ವಿಶ್ವವಿದ್ಯಾಲಯಗಳು, ಖಾಸಗಿ ಮತ್ತು ಸರ್ಕಾರಿ ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ (ಆರೋಗ್ಯ ಕ್ಷೇತ್ರದಲ್ಲಿ 108 ಮಾದರಿಯಲ್ಲಿ) ಇದನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸಲಾಗುವುದು. ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಸೇರಿ ಈ ಉದ್ದೇಶಕ್ಕೆ 20 ಕೋಟಿ ರೂ. ಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ.

49) ಸಮಗ್ರ ಕೃಷಿಗೆ ಆದ್ಯತೆ: ಕೃಷಿ ಆದಾಯವನ್ನು ಹೆಚ್ಚಿಸಲು ಪರಿಪೂರ್ಣವಾದ ಕ್ರಮಗಳನ್ನು ಅನುಸರಿಸುವ ಮೂಲಕ ಪ್ರಸ್ತುತ ಕೃಷಿ ವ್ಯವಸ್ಥೆಯನ್ನು ಪುನಃಶ್ಚೇತನಗೊಳಿಸುವ ಅವಶ್ಯಕತೆಯಿದೆ. ಆದ್ದರಿಂದ ರಾಜ್ಯದಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಕೆ ಅವಶ್ಯಕವಾಗಿದೆ. ಮೊದಲ ವರ್ಷದಲ್ಲಿ ಪ್ರಾಯೋಗಿಕವಾಗಿ ಪ್ರತಿ ವಿಶ್ವವಿದ್ಯಾಲಯವು ಕನಿಷ್ಟ 25,000 ಹೆಕ್ಟೇರ್ ಪ್ರದೇಶದಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು 2011ರ ಮುಂಗಾರಿನಿಂದ ಅನುಷ್ಠಾನಗೊಳಿಸಲಿದೆ. ರಾಜ್ಯದಲ್ಲಿ ಒಟ್ಟು 1,25,000 ಹೆಕ್ಟೇರ್ ಪ್ರದೇಶದಲ್ಲಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗುವುದು. ಇದಕ್ಕಾಗಿ ಒಟ್ಟು 75 ಕೋಟಿ ರೂ.ಗಳನ್ನು ನೀಡಲಾಗುವುದು.

50) ಹೆಚ್ಚಿನ ಬೀಜೋತ್ಪಾದನೆ: ಪ್ರತಿ ವಿಶ್ವವಿದ್ಯಾಲಯವು ಬೀಜೋತ್ಪಾದನೆ ಸಾಮರ್ಥ್ಯವನ್ನು 3 ಪಟ್ಟು ಹೆಚ್ಚಿಸಲಿದ್ದು, ಇದರಿಂದ ರಾಜ್ಯದ ರೈತರಿಗೆ ಗುಣಮಟ್ಟದ ಬೀಜಗಳು ದೊರಕಲು ಸಹಾಯವಾಗುವುದು. ಈ ಉದ್ದೇಶಕ್ಕೆ 5 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ನೀಡಲಾಗುವುದು. ಕೃಷಿ ಇಲಾಖೆ ಕೃಷಿ ಮಿಷನ್‌ನ ಸಹಯೋಗದೊಂದಿಗೆ ಈ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.

51) ಜೇನು ಸಾಕಾಣಿಕೆಗೆ ಆದ್ಯತೆ: ಜೇನು ಸಾಕಾಣಿಕೆ ಮತ್ತು ಅದರ ಉತ್ಪನ್ನಗಳಿಗೆ ಆದ್ಯತೆ ನೀಡಿ, ರಾಜ್ಯಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆ ಹೆಚ್ಚಿಸಿ, ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಯುವಕ / ಯುವತಿಯರಿಗೆ, ಕೌಶಲ್ಯ ತರಬೇತಿ ಮತ್ತು ಸಹಾಯಧನ ವಿತರಿಸುವ ಅಗತ್ಯವಿದೆ. ಮೊದಲ ಹಂತದಲ್ಲಿ 50,000 ಜೇನು ಪೆಟ್ಟಿಗೆಗಳನ್ನು (ಪ್ರತಿ ಪೆಟ್ಟಿಗೆಗೆ ರೂ.1250 ರಂತೆ) ಸಾವಯವ ಕೃಷಿ ಮಿಷನ್ ಮೂಲಕ ಅನುಷ್ಠಾನಗೊಳಿಸಲಾಗುವುದು.

52) ಜೈವಿಕ ಇಂಧನ: ಹಿಂದುಳಿದ ಪ್ರದೇಶಗಳ ವಿಶೇಷ ಅಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿ "ಹಸಿರು ಹೊನ್ನು" ಮತ್ತು "ಬರಡು ಬಂಗಾರ" ಕಾರ್ಯಕ್ರಮದಡಿಯಲ್ಲಿ ಮುಂದಿನ ಮೂರು ವರ್ಷದಲ್ಲಿ ಒಂದು ಲಕ್ಷ ಹೆಕ್ಟೇರ್ ಪಾಳು ಭೂಮಿಯಲ್ಲಿ ಜೈವಿಕ ಇಂಧನ ನೆಡುತೋಪು (ಹೊಂಗೆ, ಸಿಮರೂಬಾ ಹಾಗೂ ಇತರೆ) ನಿರ್ಮಾಣಕ್ಕೆ ಕಾರ್ಯಯೋಜನೆ ಸಿದ್ಧಪಡಿಸಲಾಗುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪ್ರತಿ ವರ್ಷಕ್ಕೆ 15 ಕೋಟಿ ರೂ. ಗಳಂತೆ 5 ವರ್ಷಕ್ಕೆ 75 ಕೋಟಿ ರೂ. ಗಳ ವಿಶೇಷ ನಿಧಿಯ ಅಗತ್ಯವಿದೆ. ರಾಜ್ಯ ಜೈವಿಕ ಇಂಧನ ಮಂಡಳಿಯ ವಿವಿಧ ಚಟುವಟಿಕೆಗಳಿಗೆ ಒಟ್ಟು 25 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗುವುದು.

53) ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ: ರಾಜ್ಯದಲ್ಲಿ ಶೇಕಡಾ 33ರ ವೃಕ್ಷಕವಚ ಗುರಿ ಸಾಧಿಸಲು, ರೈತರ ಸಕ್ರಿಯ ಭಾಗವಹಿಸುವಿಕೆ ಮೂಲಕ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ರೂಪಿಸಲಾಗಿದೆ. 5 ವರ್ಷದ ಈ ಯೋಜನೆಯಲ್ಲಿ ಪ್ರತಿ ವರ್ಷ 3 ಕೋಟಿ ಸಸಿಗಳನ್ನು ರೈತರ ಜಮೀನಿನಲ್ಲಿ ನೆಡಲು ವಿತರಿಸಲಾಗುವುದು. ಇವುಗಳನ್ನು ಸಂರಕ್ಷಿಸಿ, 3 ವರ್ಷಗಳವರೆಗೆ ಪೋಷಿಸುವ ರೈತರಿಗೆ, ಪ್ರತಿ ಸಸಿಗೆ ಪ್ರತಿ ವರ್ಷ 10, 15, 20 ರೂ.ಗಳ ದರದಲ್ಲಿ 3 ವರ್ಷದವರೆಗೆ ಪಾವತಿಸಲಾಗುವುದು. ಗ್ರಾಮ ಅರಣ್ಯ ಸಮಿತಿ ಸ್ವಸಹಾಯ ಗುಂಪು/ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ಇದಕ್ಕಾಗಿ ಒಟ್ಟು 50 ಕೋಟಿ ರೂ. ಅನುದಾನ

ನೀಡಲಾಗಿದೆ. ಈ ಯೋಜನೆಯಡಿ ಬರುವ ಗಿಡಗಳನ್ನು ಕೃಷಿ ಸಾಲದಡಿ ತರಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

54) ರೈತರ ಸೌಲಭ್ಯಗಳಿಗೆ ಏಕಗವಾಕ್ಷಿ: ರೈತರಿಗೆ ಸಹಾಯಧನ ನೀಡುತ್ತಿರುವ ಎಲ್ಲಾ ಇಲಾಖೆಗಳನ್ನು ಸೇರಿಸಿ "ಏಕಗವಾಕ್ಷಿ" ಯೋಜನೆಯಡಿ ವಿತರಣೆಯಾಗುವಂತೆ ಕ್ರಮ ಕೈಗೊಳ್ಳುವ ಅಗತ್ಯವಿದೆ. ಈಗಾಗಲೇ ಗುಬ್ಬಿ ತಾಲ್ಲೂಕಿನ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಗಣಕೀಕೃತ ಸಾರ್ವಜನಿಕ ಸೇವಾ ಕೇಂದ್ರಗಳ ಮಾದರಿಯಲ್ಲಿ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುವುದು. ಈ ಸೇವಾ ಕೇಂದ್ರ ಯೋಜನೆಯನ್ನು ಇ–ಆಡಳಿತ ಮತ್ತು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ 50 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು.

55) ರೈತರ ಹೋರಾಟಕ್ಕಾಗಿ ಹಲವಾರು ವರ್ಷ ತನ್ನ ಜೀವನವನ್ನೇ ಮುಡಿಪಾಗಿಟ್ಟು, ರಾಜ್ಯಾದ್ಯಂತ ರೈತರ ಹೋರಾಟಕ್ಕೆ ಹೊಸ ಚೈತನ್ಯವನ್ನು ತುಂಬಿದ ಪ್ರೊ: ನಂಜುಂಡಸ್ವಾಮಿಯವರಿಗೆ "ಕೃಷಿ ರತ್ನ ಪ್ರಶಸ್ತಿ" ಯನ್ನು ನೀಡಿ ಅವರ ಪ್ರತಿಷ್ಠಾನಕ್ಕೆ 10 ಲಕ್ಷ ರೂ. ನೀಡಲಾಗುವುದು.

56) ರಾಜ್ಯದಲ್ಲಿ ಸಾವಯವ ಕೃಷಿಯ ಅಭಿಯಾನವನ್ನು ರೂಪಿಸಿ, ಹಲವಾರು ವರ್ಷಗಳು ಇದಕ್ಕಾಗಿ ದುಡಿದು, ಸಾವಿರಾರು ರೈತರಿಗೆ ಮೂಲ ಪ್ರೋತ್ಸಾಹಕರಾಗಿದ್ದ ಶ್ರೀ ತೀರ್ಥಹಳ್ಳಿ ಪುರುಷೋತ್ತಮ ರಾವ್ ಅವರಿಗೆ "ಸಾವಯವ ಕೃಷಿ ರತ್ನ ಪ್ರಶಸ್ತಿ" ಯನ್ನು ನೀಡಿ ಅವರ ಪ್ರತಿಷ್ಠಾನಕ್ಕೆ 10 ಲಕ್ಷ ರೂ. ಅನುದಾನ ಒದಗಿಸಲಾಗುವುದು.

ತೋಟಗಾರಿಕೆ

57) ರಾಜ್ಯದಲ್ಲಿ 4.71 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೇಸಾಯ ಮಾಡುತ್ತಿದ್ದು, ಶೇಕಡಾ 80ರಷ್ಟು ಪ್ರದೇಶ ಮಳೆ ಆಧಾರಿತವಾಗಿದೆ. ತೆಂಗು ಬೆಳೆ ಉತ್ಪಾದಕತೆ ಯೋಜನೆಯನ್ನು ರೂಪಿಸಿ, ಈ ವರ್ಷದಲ್ಲಿ ರೈತರ ಸಹಭಾಗಿತ್ವದಲ್ಲಿ (50%) ಅನುಷ್ಠಾನಗೊಳಿಸಲು 25 ಕೋಟಿ ರೂ. ನೀಡಲಾಗಿದೆ.

58) ನೀರಾ ಸಂಸ್ಕರಣ ಘಟಕ: ತೆಂಗು ಅಭಿವೃದ್ಧಿ ಮಂಡಳಿ ಹಾಗೂ ಮೈಸೂರಿನಲ್ಲಿರುವ ಆಹಾರ ತಾಂತ್ರಿಕ ಸಂಶೋಧನಾ ಕೇಂದ್ರದ ಸಹಯೋಗ ದೊಂದಿಗೆ ನೀರಾ ಸಂಸ್ಕರಣ ಘಟಕವನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕಾ ಫಾರಂನಲ್ಲಿ ಸ್ಥಾಪಿಸಲಾಗುವುದು.

59) ಕರ್ನಾಟಕದಲ್ಲಿ ಒಟ್ಟು 2.13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆ ಬೆಳೆಯುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಹಳದಿ ಎಲೆ ರೋಗದಿಂದ, ಸುಮಾರು 10,400 ಹೆಕ್ಟೇರ್ ಪ್ರದೇಶ ಸಂಕಷ್ಟಕ್ಕೆ ಒಳಗಾಗಿದೆ. ಈ ರೋಗವನ್ನು ನಿಯಂತ್ರಿಸಲು ಸಹಾಯಧನವಾಗಿ 2 ಕೋಟಿ ರೂ. ನೀಡಲಾಗಿದೆ.

60) ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯ ಮತ್ತು ಸಂಬಂಧಿತ ಕಾಲೇಜುಗಳನ್ನು ಅಭಿವೃದ್ಧಿಗೊಳಿಸಿ, ಅಲ್ಲಿನ ಬೋಧನೆಗೆ ಅಗತ್ಯವಾದ ಕಟ್ಟಡಗಳು, ವಿದ್ಯಾರ್ಥಿಗಳ ವಸತಿ ಗೃಹಗಳು, ಸಂಶೋಧನಾ ಕಾರ್ಯಗಳಿಗೆ ಈ ವರ್ಷ 60 ಕೋಟಿ ರೂ. ನೀಡಲಾಗಿದೆ.

61) ಪುಷ್ಪ ಉದ್ಯಮಕ್ಕೆ ಪ್ರೋತ್ಸಾಹ: ರಾಜ್ಯದಲ್ಲಿ ಪುಷ್ಪ ಉದ್ಯಮ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಬೆಳವಣಿಗೆ ಕಂಡಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಲ್ಲಿ ಬೆಳೆಯುವ ವಿವಿಧ ಪುಷ್ಪಗಳಿಗೆ ಬೇಡಿಕೆ ಹೆಚ್ಚಾಗಿದೆ. ರಾಜ್ಯದಲ್ಲಿ ಸಂಘಟಿತ ಕ್ಷೇತ್ರದಲ್ಲಿ ಸುಮಾರು 3500 ಹೆಕ್ಟೇರ್ ಪ್ರದೇಶದಲ್ಲಿ ಪುಷ್ಪ ತೋಟಗಳಿವೆ. ಇವುಗಳನ್ನು ಪ್ರೋತ್ಸಾಹಿಸಲು, ಅವುಗಳ ಶೀತಲ ಕೇಂದ್ರಗಳಿಗೆ ಒದಗಿಸುವ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 2 ರೂ. ಗೆ ಇಳಿಸಲಾಗಿದ್ದು, ಪುಷ್ಪ ಮಾರಾಟವನ್ನು ವ್ಯಾಟ್‌ನಿಂದ ಮುಕ್ತಗೊಳಿಸಲಾಗಿದೆ. ಇದಲ್ಲದೇ, ರಾಜ್ಯದಲ್ಲಿ ಪುಷ್ಪ ಉದ್ಯಮಕ್ಕೆ ವಿಶೇಷವಾದ ವಲಯವನ್ನು ಬೆಂಗಳೂರಿನ ಹೊರಗಡೆ ಸ್ಥಾಪಿಸಲು, ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರಕ್ಕೆ ಪ್ರೋತ್ಸಾಹ ಧನವಾಗಿ 10 ಕೋಟಿ ರೂ. ಗಳನ್ನು ನೀಡಲಾಗುವುದು.

62) ತೋಟಗಾರಿಕೆ ಕ್ಷೇತ್ರದಲ್ಲಿನ ಹಲವಾರು ಸಂಸ್ಥೆಗಳು (ಉದಾ: ಹಾಪ್‌ಕಾಮ್ಸ್, ತೋಟಗಾರಿಕೆ ಕ್ಷೇತ್ರ ಮತ್ತಿತರ ಅಂಗ ಸಂಸ್ಥೆಗಳು) ಮತ್ತು ಇಲಾಖೆಯ ಪುನಃಶ್ಚೇತನ ಮತ್ತು ಪುನರ್ರಚನೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಈ ದಿಕ್ಕಿನಲ್ಲಿ ಪರಿಣಿತ ಸಂಸ್ಥೆಗಳ ಮಾರ್ಗದರ್ಶನದಲ್ಲಿ ಸಾಧಕ ಬಾಧಕಗಳನ್ನು

ಕುರಿತ ಒಂದು ಸಮಗ್ರ ವರದಿಯನ್ನು ತಯಾರಿಸಿ, ಈ ಸಾಲಿನಲ್ಲಿ ಅನುಷ್ಠಾನ ಮಾಡಲು ಸೂಚಿಸಲಾಗಿದೆ.

ರೇಷ್ಮೆ ಅಭಿವೃದ್ಧಿ

63) ಕರ್ನಾಟಕದ ರೇಷ್ಮೆ ಕೃಷಿಗೆ 200 ವರ್ಷಗಳ ಇತಿಹಾಸವಿದೆ. ರೇಷ್ಮೆ ಉದ್ಯಮವು ಕೃಷಿ ಆಧಾರಿತ ಗುಡಿ ಕೈಗಾರಿಕೆಯಾಗಿದ್ದು, ಸುಮಾರು 10 ಲಕ್ಷ ಜನರಿಗೆ ಉದ್ಯೋಗಾವಕಾಶ ಕಲ್ಪಿಸುತ್ತದೆ. ರೇಷ್ಮೆ ಉತ್ಪಾದನೆಯನ್ನು 7500 ಮೆಟ್ರಿಕ್ ಟನ್‌ನಿಂದ 8500 ಮೆಟ್ರಿಕ್ ಟನ್‌ಗೆ ಹಾಗೂ ಎರಡು ಲಕ್ಷ ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ವ್ಯವಸಾಯವನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ. ರಾಜ್ಯಾದ್ಯಂತ ದ್ವಿತಳಿ ಸಾಕಾಣಿಕೆಯಲ್ಲಿ ಚಾಕಿ ಸಾಕಾಣಿಕೆಗೆ ಪ್ರೋತ್ಸಾಹ, ಕ್ಲಸ್ಟರ್ ಮಾದರಿಯಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಲಾಗುವುದು. ಇದಲ್ಲದೆ, ರೇಷ್ಮೆ ಕೃಷಿ ಕ್ಷೇತ್ರಗಳನ್ನು ಪುನಃಶ್ಚೇತನಗೊಳಿಸಿ ಖಾಸಗಿ ಸಹಭಾಗಿತ್ವದಲ್ಲಿ ದೊಡ್ಡ ಪ್ರಮಾಣದಲ್ಲಿ ರೇಷ್ಮೆ ಕೃಷಿಯನ್ನು ಉತ್ತೇಜಿಸಲಾಗುವುದು. ಮೇಲಿನ ಎಲ್ಲಾ ಕಾರ್ಯಯೋಜನೆಗಳಿಗೆ ಒಟ್ಟು 10 ಕೋಟಿ ರೂ. ಗಳನ್ನು ವಿನಿಯೋಗಿಸಲಾಗುವುದು.

ಕೃಷಿಗೆ ವಿದ್ಯುತ್

64) ರಾಜ್ಯದಲ್ಲಿನ ಸುಮಾರು 17 ಲಕ್ಷ ನೀರಾವರಿ ಪಂಪುಸೆಟ್ಟುಗಳಿಗೆ ಪೂರೈಸುವ ಉಚಿತ ವಿದ್ಯುತ್ ಪೂರೈಕೆಯು, ರಾಜ್ಯದ ಒಟ್ಟಾರೆ ವಿದ್ಯುತ್ ಬಳಕೆಯ ಶೇ. 35ರಷ್ಟಿದೆ. ಮಾಪನ ವ್ಯವಸ್ಥೆ ಇಲ್ಲದಿರುವುದರಿಂದ ಇಂಧನವನ್ನು ಲೆಕ್ಕ ಮಾಡುವುದು ಮತ್ತು ವಿದ್ಯುಚ್ಛಕ್ತಿ ವಲಯದಲ್ಲಿ ಉತ್ತರದಾಯಿತ್ವವನ್ನು ತರುವುದು ಕಷ್ಟಸಾಧ್ಯವಾಗಿದೆ. ವಿದ್ಯುಚ್ಛಕ್ತಿಯ ವೆಚ್ಚವು ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಉಚಿತ ವಿದ್ಯುಚ್ಛಕ್ತಿ ಪೂರೈಕೆಯಿಂದಾಗಿ ರೈತರು ಬಳಸುತ್ತಿರುವ ವಾಸ್ತವಿಕ ವಿದ್ಯುತ್ ಬಳಕೆಯನ್ನು ಮಾತ್ರ ಗಣನೆ ಮಾಡುವ ಹಾಗೆ ಒಂದು ದೃಢವಾದ ಇಂಧನ ಗಣನೆ ಮತ್ತು ಲೆಕ್ಕ ಇಡುವ ಪದ್ಧತಿಯನ್ನು ಜಾರಿಗೆ ತರುವ ಅಗತ್ಯವಿದೆ.

65) ಈ ನಿಟ್ಟಿನಲ್ಲಿ ಸರ್ಕಾರವು:

65.1) ನಿರಂತರ ಜ್ಯೋತಿ ಯೋಜನೆ: ಈ ಯೋಜನೆಯನ್ನು 2,123 ಕೋಟಿ ರೂ. ಗಳ ವೆಚ್ಚದಲ್ಲಿ ಎರಡು ಹಂತಗಳಲ್ಲಿ ಒಟ್ಟು 126 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮೊದಲನೇ ಹಂತದಲ್ಲಿ 1203 ಕೋಟಿ ರೂ. ವೆಚ್ಚದಲ್ಲಿ 70 ತಾಲ್ಲೂಕುಗಳ 12,689 ಹಳ್ಳಿಗಳಿಗೆ ನಿರಂತರ ವಿದ್ಯುತ್ ಒದಗಿಸಲಾಗುವುದು. ಈ ಪ್ರಥಮ ಹಂತದ ಕಾಮಗಾರಿಗಳು ಮಾರ್ಚ್ 2011ರ ವೇಳೆಗೆ ಪೂರ್ಣಗೊಳ್ಳಲಿದೆ. ಈ ಯೋಜನೆಯಿಂದ ಗ್ರಾಮೀಣ ಭಾಗದ ಹಳ್ಳಿಗಳು ಮತ್ತು ಗುಡಿ ಕೈಗಾರಿಕೆಗಳಿಗೆ ಸಮರ್ಪಕ ವಿದ್ಯುತ್ತನ್ನು ಪೂರೈಸಬಹುದು ಮತ್ತು ಕೃಷಿ ಪಂಪ್‌ಸೆಟ್‌ಗಳಿಗೆ ಗುಣಮಟ್ಟದ ಹಾಗೂ ನಿರ್ಧಿಷ್ಟ ಅವಧಿಯ ವಿದ್ಯುತ್ ಪೂರೈಕೆ ಮಾಡಬಹುದು. ಈ ಯೋಜನೆಗಾಗಿಯೇ ಪ್ರತ್ಯೇಕವಾಗಿ 500 ಕೋಟಿ ರೂ.ಗಳ ವೆಚ್ಚವನ್ನು ಈ ಆಯವ್ಯಯದಲ್ಲಿ ಮಾಡಲಾಗುತ್ತಿದೆ.

65.2) ಅಕ್ರಮವಾಗಿ ಅಳವಡಿಸಲಾಗಿರುವ ಸುಮಾರು ಒಂದು ಲಕ್ಷ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಲು 100 ಕೋಟಿ ರೂ. ಗಳನ್ನು ನೀಡಲಾಗಿದೆ.

65.3) ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆಯ ಉಳಿತಾಯ: ಬಹುತೇಕ ಎಲ್ಲಾ ಕೃಷಿ ಪಂಪ್‌ಸೆಟ್‌ಗಳ ಕಾರ್ಯಕ್ಷಮತೆಯು ವಿದ್ಯುಚ್ಛಕ್ತಿ ಬಳಕೆಯಲ್ಲಿ ಕುಂಠಿತಗೊಂಡಿದ್ದು, ಇದರಿಂದ ಅಧಿಕ ವಿದ್ಯುತ್ ನಷ್ಟಕ್ಕೆ ಕಾರಣವಾಗಿರುತ್ತದೆ. ನೀರು ಮತ್ತು ವಿದ್ಯುಚ್ಛಕ್ತಿ ಬಳಕೆಯಲ್ಲಿನ ಉತ್ತಮ ವ್ಯವಸ್ಥೆಗೆ ಒಂದು ಮಾದರಿ ಯೋಜನೆಯನ್ನು ಬೆಸ್ಕಾಂ ವ್ಯಾಪ್ತಿಯ ದೊಡ್ಡಬಳ್ಳಾಪುರದಲ್ಲಿ ಹಾಗೂ ಮೆಸ್ಕಾಂ ವ್ಯಾಪ್ತಿಯಲ್ಲಿ ಮಂಗಳೂರು ಮತ್ತು ಉಡುಪಿಯಲ್ಲಿ ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದು ಹೆಚ್ಚು ವಿದ್ಯುತ್ ಬಳಸುವುದನ್ನು ಕಡಿಮೆ ಮಾಡಿ ಪಂಪ್‌ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಪ್ರಯೋಗವಾಗಿದೆ. ಈ ಯೋಜನೆಯಡಿ ವಿದ್ಯುತ್ ಬಳಕೆಯಲ್ಲಿ ಹೆಚ್ಚು ಕ್ಷಮತೆ ಹೊಂದಿರುವ ಪಂಪ್‌ಗಳನ್ನು ಹಾಲಿ ಇರುವ ಕಡಿಮೆ ಕ್ಷಮತೆಯುಳ್ಳ ಪಂಪ್‌ಗಳ ಜಾಗದಲ್ಲಿ ಒದಗಿಸಲಾಗುತ್ತದೆ. ಇದರಿಂದ ವಿದ್ಯುಚ್ಛಕ್ತಿ ಬಳಕೆಯಲ್ಲಿ ಶೇಕಡಾ 35ರಷ್ಟು ಉಳಿತಾಯವಾಗಲಿದೆಯೆಂದು ಅಂದಾಜಿಸಲಾಗಿದೆ.

65.4) ಈ ಮಾದರಿ ಯೋಜನೆಯ ಅನುಷ್ಠಾನವನ್ನು ಎಲ್ಲಾ ವಿತರಣಾ ಕಂಪನಿಗಳಲ್ಲಿ ಕೈಗೆತ್ತಿಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಮುಂದಿದೆ. ಪ್ರಾಯೋಗಿಕವಾಗಿ ಕೆಲವು ತಾಲ್ಲೂಕುಗಳಲ್ಲಿ ಹಳೆಯ ಪಂಪ್‌ಸೆಟ್‌ಗಳನ್ನು ತೆಗೆದು, ಹೊಸ ಪಂಪ್‌ಸೆಟ್‌ಗಳನ್ನು ಕೇಂದ್ರ ಸರ್ಕಾರ ಹಾಗೂ ಪರಿಣಿತ ಕಂಪನಿಗಳ ಸಹಯೋಗದೊಂದಿಗೆ ಬದಲಿಸಲು ಉದ್ದೇಶಿಸಲಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ರೈತರು ಭರಿಸಬೇಕಾಗಿಲ್ಲ.

ಕೃಷಿ ಮಾರುಕಟ್ಟೆಗಳು

66) ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಯಡಿಯಲ್ಲಿ ಚಿಂತಾಮಣಿ, ಶ್ರೀನಿವಾಸಪುರ, ಅಥಣಿ, ಚನ್ನಪಟ್ಟಣ, ನಾಗಮಂಗಲ ಮತ್ತು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಕೃಷಿ ಮಾರುಕಟ್ಟೆ ಸಮಿತಿಗಳನ್ನು ಅಭಿವೃದ್ಧಿಪಡಿಸಲು 10 ಕೋಟಿ ರೂ. ಗಳನ್ನು ಒದಗಿಸಲಾಗಿದೆ. ರಾಜ್ಯದ ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಪಾರದರ್ಶಕತೆ ತರುವ ಸಂಬಂಧ ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಇ–ಟೆಂಡರಿಂಗ್ ಪದ್ಧತಿ ಅಳವಡಿಕೆ ಹಾಗೂ ಮಾರುಕಟ್ಟೆ ಸಮಿತಿಗಳಲ್ಲಿ ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ಗಣಕೀಕರಣಗೊಳಿಸಲು ನಿರ್ವಹಣಾ ತಂತ್ರಾಂಶವನ್ನು ಅಳವಡಿಸಲು 5 ಕೋಟಿ ರೂ. ಗಳನ್ನು ಒದಗಿಸಲಾಗುವುದು.

67) ಚಾಮರಾಜನಗರ ಮತ್ತು ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ತೆಂಗಿನಕಾಯಿ ಮತ್ತು ಕೊಬ್ಬರಿ ಉತ್ಪನ್ನದ ಸಂಸ್ಕರಣಾ ಘಟಕ ಸ್ಥಾಪಿಸಲು ತಲಾ 4 ಕೋಟಿ ರೂ. ಗಳಂತೆ ಒಟ್ಟು 8 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

68) ಸುಸಜ್ಜಿತ ಬೃಹತ್ ಆಧುನಿಕ ತರಕಾರಿ ಸಗಟು ಮಾರುಕಟ್ಟೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರು–ಬಳ್ಳಾರಿ ರಸ್ತೆಯಲ್ಲಿ ಇರುವ ಬ್ಯಾಟರಾಯನಪುರದಲ್ಲಿ ಅಭಿವೃದ್ಧಿಪಡಿಸಲಾಗುವುದು.

69) ರಾಜ್ಯಾದ್ಯಂತ ಸಾಕಷ್ಟು ಪ್ರಮಾಣದಲ್ಲಿ ಉಗ್ರಾಣಗಳು ಇಲ್ಲದೆ ಇರುವುದು ಒಂದು ಪ್ರಮುಖ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಪ್ರಾರಂಭಿಕವಾಗಿ ಮೊದಲ ಹಂತದಲ್ಲಿ, 100 ತಾಲ್ಲೂಕುಗಳಲ್ಲಿ ತಾಲ್ಲೂಕಿಗೆ ಒಂದರಂತೆ ಉಗ್ರಾಣಗಳನ್ನು

ನಬಾರ್ಡ್ ಸಾಲ ಒಳಗೊಂಡಂತೆ 100 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ರಾಜ್ಯ ಉಗ್ರಾಣ ನಿಗಮಕ್ಕೆ ಸೂಚಿಸಲಾಗುವುದು. ಸಣ್ಣ ಮತ್ತು ಅತಿ ಸಣ್ಣ ರೈತರ ಉತ್ಪನ್ನಗಳಿಗೆ ಸರ್ಕಾರಿ ಉಗ್ರಾಣಗಳನ್ನು ಉಪಯೋಗಿಸಲು ಸಹಾಯಧನ ನೀಡಲಾಗುವುದು.

ಕಬ್ಬು ಅಭಿವೃದ್ಧಿಗೆ ವಿಶೇಷ ಪ್ರೋತ್ಸಾಹ

70) ಮಂಡ್ಯ ಮತ್ತು ಬೆಳಗಾವಿಯಲ್ಲಿ ಸಕ್ಕರೆ ಸಂಶೋಧನಾ ಸಂಸ್ಥೆಗಳ ಅಭಿವೃದ್ಧಿಗೆ 2.5 ಕೋಟಿ ರೂ. ಗಳನ್ನು ನೀಡಲಾಗುವುದು.

71) ಸಂಕಷ್ಟದಲ್ಲಿರುವ ಮೈಶುಗರ್ ಸಂಸ್ಥೆಯನ್ನು ಅಭಿವೃದ್ಧಿಪಡಿಸಲು 15 ಕೋಟಿ ರೂ. ಗಳನ್ನು ಒದಗಿಸಲಾಗುವುದು.

ಪಶುಸಂಗೋಪನೆ

72) ರೋಗ ನಿಯಂತ್ರಣ ಕಾರ್ಯಕ್ರಮ: ಕೇಂದ್ರ ಸರ್ಕಾರದ ನೆರವಿನೊಂದಿಗೆ 30 ಜಿಲ್ಲೆಗಳಲ್ಲಿ ಎಲ್ಲಾ ಪಶುಗಳಿಗೆ ಮುಂಜಾಗ್ರತೆಯಾಗಿ ವರ್ಷಕ್ಕೆ 2 ಬಾರಿ (ಆರು ತಿಂಗಳಿಗೊಮ್ಮೆ) ಪಲ್ಸ್-ಪೋಲಿಯೋ ಮಾದರಿಯಲ್ಲಿ ಚುಚ್ಚುಮದ್ದು ಹಾಕಲು 5 ಕೋಟಿ ರೂ. ಹಾಗೂ ಕುರಿ ಮತ್ತು ಮೇಕೆಗಳಿಗೆ ತಗಲುವ ಪಿ.ಪಿ.ಆರ್. ರೋಗ ನಿಯಂತ್ರಣಕ್ಕೆ 2.5 ಕೋಟಿ ರೂ. ನೀಡಲಾಗಿದೆ.

73) ಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳ ಬಲವರ್ಧನೆ: ರಾಜ್ಯದಲ್ಲಿ 339 ಪಶು ಆಸ್ಪತ್ರೆ ಮತ್ತು 1941 ಪಶುಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಬಲವರ್ಧನೆ, ವಿಸ್ತರಣೆ ಹಾಗೂ ನವೀಕರಣಕ್ಕೆ 18.70 ಕೋಟಿ ರೂ. (2 ವರ್ಷ ಅವಧಿಗಾಗಿ) ನೀಡಲಾಗಿದೆ.

74) ಪಶುಸಂಗೋಪನೆಗೆ ಧನ್ವಂತರಿ: ಆರೋಗ್ಯ ಇಲಾಖೆಯ 108 ವಾಹನದ ಮಾದರಿಯಲ್ಲಿ, ಪರಿಣಿತ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ, ಪಶುಗಳ ತುರ್ತುಚಿಕಿತ್ಸೆ ಹಾಗೂ ಔಷಧಿ ವಿತರಣೆಗೆ, ತಾಲ್ಲೂಕಿಗೆ ಒಂದರಂತೆ, ಸುಸಜ್ಜಿತ 174 ವಾಹನಗಳನ್ನು ಒದಗಿಸಲು, 20 ಕೋಟಿ ರೂ. ಗಳನ್ನು ನೀಡಲಾಗಿದೆ.

75) ಪಶು ಆಹಾರ ತಯಾರಿಕಾ ಘಟಕ: ಹೆಚ್ಚುತ್ತಿರುವ ಪಶು ಆಹಾರದ ಬೇಡಿಕೆ ಪೂರೈಸಲು ಶಿವಮೊಗ್ಗ ಜಿಲ್ಲೆಯಲ್ಲಿ 45 ಕೋಟಿ ರೂ. ವೆಚ್ಚದಲ್ಲಿ ಪಶು

ಆಹಾರ ತಯಾರಿಕಾ ಘಟಕ ಸ್ಥಾಪಿಸಲು ಈ ವರ್ಷ 25 ಕೋಟಿ ರೂ. ಒದಗಿಸಲಾಗುವುದು.

76) ಮೈಸೂರಿನಲ್ಲಿ ಮೆಗಾ ಡೈರಿ ಸ್ಥಾಪಿಸಲು ಕೆಎಂಎಫ್ ಸಂಸ್ಥೆ ಮೂಲಕ ಬಂಡವಾಳ ಕ್ರೋಢೀಕರಿಸಲು ಸರ್ಕಾರವು ಸಹಾಯ ಒದಗಿಸುವುದು.

77) ಮಲ್ನಾಡ್‌ಗಿಡ್ಡ ಜಾನುವಾರು ಅಭಿವೃದ್ಧಿ: ಮಲ್ನಾಡ್‌ಗಿಡ್ಡ ಆಕಳು ತಳಿ ಅಭಿವೃದ್ಧಿಪಡಿಸಲು ಪಶು ವೈದ್ಯಕೀಯ ವಿಶ್ವವಿದ್ಯಾನಿಲಯದಿಂದ ಮಲ್ನಾಡ್‌ಗಿಡ್ಡ ಆಕಳುಗಳ ಒಂದು ಜಾನುವಾರು ಕ್ಷೇತ್ರವನ್ನು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಉಪ್ಪಳ್ಳಿಯಲ್ಲಿ ಕಂದಾಯ ಇಲಾಖೆಯ ವಶದಲ್ಲಿರುವ ಸರ್ಕಾರಿ ಜಮೀನಿನಲ್ಲಿ ಪ್ರಾರಂಭಿಸಲು 1 ಕೋಟಿ ರೂ. ಒದಗಿಸಿದೆ.

78) ರಾಜ್ಯದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪುನರ್‌ರಚನಾ ವ್ಯವಸ್ಥೆಯ ವರದಿ ಈಗಾಗಲೇ ಸಿದ್ಧವಾಗಿದ್ದು, ಇದರ ಅನುಷ್ಠಾನಕ್ಕೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ರಚಿಸಿ, ಈ ಸಮಿತಿಯ ಸಲಹೆಗಳನ್ನು ಮೇ 2011ರ ಅಂತ್ಯದೊಳಗೆ ಅನುಷ್ಠಾನಕ್ಕೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

79) ರಾಜ್ಯದ ಗೋ ಸಂಪತ್ತು ಸಂರಕ್ಷಿಸಲು ಒಂದು ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗುವುದು.

ಮೀನುಗಾರಿಕೆ

80) ಮೀನು ಕೃಷಿ ಕೊಳಕ್ಕೆ ಪ್ರೋತ್ಸಾಹ: ರಾಜ್ಯದಲ್ಲಿ 9.90 ಲಕ್ಷ ಹೆಕ್ಟೇರ್ ಜೌಗು / ಚೌಳು ಪ್ರದೇಶವಿದ್ದು, ಈ ಭೂಮಿಯಲ್ಲಿ ಕೃಷಿ ಕೈಗೊಳ್ಳದೆ ಪಾಳು ಬಿದ್ದಿರುತ್ತದೆ. ಈ ಪ್ರದೇಶಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಸಾಕಷ್ಟು ಅವಕಾಶವಿದೆ. ಕೃಷಿಕರಿಗೆ ಶೇಕಡ 50ರಷ್ಟು ಸಹಾಯಧನ ಲಭ್ಯವಾಗುವಂತೆ, ರಾಜ್ಯ ಸರ್ಕಾರ ಶೇಕಡ 30ರಷ್ಟು ಮತ್ತು ಶೇಕಡ 20ರಷ್ಟು ಸಹಾಯಧನವನ್ನು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯಿಂದ ಪಡೆಯಲು ಉದ್ದೇಶಿಸಿದ್ದು, ಪ್ರತಿ ಹೆಕ್ಟೇರ್‌ಗೆ 50,000 ರೂ. ಸಹಾಯಧನ ಮೂಲಕ ಈ ಸಾಲಿನಲ್ಲಿ 10 ಕೋಟಿ ರೂ. ಅನುದಾನದಿಂದ 2000 ಹೆಕ್ಟೇರ್ ಮೀನು ಕೃಷಿ ಕೊಳಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

81) ಮೀನು ಮಾರುಕಟ್ಟೆಗಳ ನಿರ್ಮಾಣ: ರಾಜ್ಯದ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮೀನು ಮಾರಾಟವನ್ನು ಸುಸಜ್ಜಿತ ಹಾಗೂ ವ್ಯವಸ್ಥಿತ ಮಾರುಕಟ್ಟೆ ಮೂಲಕ ನಿರ್ವಹಿಸಲು ಯೋಜನೆ ರೂಪಿಸಲಾಗಿದೆ. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ರಾಜ್ಯ ಸರ್ಕಾರದ ಈ ಯೋಜನೆಗೆ ಈ ಸಾಲಿನಲ್ಲಿ 5 ಕೋಟಿ ರೂ. ಅನುದಾನ ಪ್ರಸ್ತಾಪಿಸಿದ್ದು, ರಾಜ್ಯದಲ್ಲಿ 50 ನೂತನ ಮೀನು ಮಾರುಕಟ್ಟೆಗಳನ್ನು (ಪ್ರತಿ ಮಾರುಕಟ್ಟೆಗೆ 10 ಲಕ್ಷ ರೂ. ಸಹಾಯ ಧನದಂತೆ) ಪರಿಣಿತ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು.

82) ಯಾಂತ್ರೀಕೃತ ಮೀನುಗಾರಿಕೆಗೆ ರಾಜ್ಯ ಮಾರಾಟ ಕರರಹಿತ ಡೀಸಲ್ ಪೂರೈಸುವ ಯೋಜನೆಯಡಿ ನೀಡಲಾಗುತ್ತಿರುವ ಡೀಸಲ್ ಪ್ರಮಾಣವನ್ನು 85,000 ಕಿಲೋ ಲೀಟರ್‌ನಿಂದ ಒಂದು ಲಕ್ಷ ಕಿಲೋ ಲೀಟರ್‌ಗೆ ಹೆಚ್ಚಿಸಲಾಗುವುದು. ಮೀನುಗಾರರು ಬಳಸುವ ಮಂಜುಗಡ್ಡೆ ಮಾರಾಟದ ಮೇಲೆ ನೀಡುತ್ತಿರುವ ವ್ಯಾಟ್ ತೆರಿಗೆ ವಿನಾಯಿತಿಯನ್ನು ಮುಂದುವರೆಸಲು ಪ್ರಸ್ತಾಪಿಸಲಾಗಿದೆ.

83) ಮತ್ಸ್ಯಾಶ್ರಯ ಯೋಜನೆ: ಈವರೆಗೆ 25,000 ಮೀನುಗಾರರಿಗೆ ಮನೆಗಳನ್ನು ನಿರ್ಮಿಸಲು ನೆರವು ನೀಡಿದ್ದು, ಸದರಿ ಯೋಜನೆಯಡಿ ವಸತಿ ರಹಿತ ಮೀನುಗಾರರಿಗೆ 40,000 ರೂ. ವೆಚ್ಚದಲ್ಲಿ ಮನೆ ನಿರ್ಮಿಸಲಾಗುತ್ತಿತ್ತು. ಈ ಸಾಲಿನಲ್ಲಿ ಈ ಮೊತ್ತವನ್ನು 60,000 ರೂ.ಗಳಿಗೆ ಹೆಚ್ಚಿಸಲಾಗಿದೆ. ಇದಕ್ಕಾಗಿ ಈ ಆಯವ್ಯಯದಲ್ಲಿ 9 ಕೋಟಿ ರೂ. ಅನುದಾನ ಒದಗಿಸಲಾಗಿದ್ದು, 2,000 ಮನೆಗಳನ್ನು ನಿರ್ಮಿಸುವ ಗುರಿ ಹೊಂದಿದೆ.

84) ಸಣ್ಣ ಬಂದರುಗಳ ನಿರ್ಮಾಣ: ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಮೀನುಗಾರರಿಗಾಗಿ ಸೂಕ್ತ ಬಂದರುಗಳಿಲ್ಲದೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ, ಸಣ್ಣ ಬಂದರುಗಳನ್ನು ಪರಿಣಿತ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಿರ್ಮಿಸಲು 100 ಕೋಟಿ ರೂ. ಗಳನ್ನು ಮೀಸಲಿಡಲಾಗುವುದು.

ಸಹಕಾರ

85) ಪ್ರೊ.ಎ.ವೈದ್ಯನಾಥನ್ ಸಮಿತಿಯ ಸಲಹೆ ಮೇರೆಗೆ, ಸಹಕಾರ ಸಂಸ್ಥೆಗಳ ಪುನಶ್ಚೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. ಇದರಿಂದಾಗಿ ಜಿಲ್ಲಾ ಪತ್ತಿನ ಸಹಕಾರ ಬ್ಯಾಂಕ್ ಮತ್ತು ಇತರೆ ಸಹಕಾರಿ ಬ್ಯಾಂಕುಗಳನ್ನು ಬಲಪಡಿಸಿದಂತಾಗುವುದು. ಪುನರ್ ಬಂಡವಾಳೀಕರಣ ಕಾರ್ಯಕ್ರಮದಡಿ 770 ಕೋಟಿ ರೂ.ಗಳ ನೆರವನ್ನು ನೀಡಲಾಗುವುದು. ರಾಜ್ಯಾದ್ಯಂತ 21 ಜಿಲ್ಲಾ ಪತ್ತಿನ ಸಹಕಾರ ಬ್ಯಾಂಕ್‌ಗಳಿಗೆ ಮತ್ತು 4474 ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಗೆ ರಾಜ್ಯದ ಪಾಲಾಗಿ 92 ಕೋಟಿ ರೂ.ಗಳ ನೆರವನ್ನು ಒದಗಿಸಿದೆ.

86) ಕಾಫಿ ಬೆಳೆಗಾರರು ಎದುರಿಸಿದ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ರಾಜ್ಯದಲ್ಲಿ ಕಾಫಿ ಋಣ ಪರಿಹಾರ ಕಾರ್ಯಕ್ರಮ 2010ನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರವು ಈ ಪ್ಯಾಕೇಜ್ ನಡಿ ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ಸಹಕಾರ ಬ್ಯಾಂಕುಗಳು ಅನುಭವಿಸುವ ಆರ್ಥಿಕ ಹೊರೆಯ ಪೈಕಿ ಶೇ.50 ರಿಂದ 75ರಷ್ಟನ್ನು ಭರಿಸಲು 20 ಕೋಟಿ ರೂ. ಗಳ ಹಣಕಾಸು ನೆರವನ್ನು ಮಂಜೂರು ಮಾಡಿದೆ.

87) ರಾಜ್ಯ ಸರ್ಕಾರವು ಸಹಕಾರಿ ಸಂಸ್ಥೆಗಳ ಮೂಲಕ ಸ್ವಸಹಾಯ ಗುಂಪುಗಳಿಗೆ ರಿಯಾಯಿತಿ ದರದಲ್ಲಿ ಸಾಲವನ್ನು ನೀಡುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ 20,000ಕ್ಕೂ ಹೆಚ್ಚಿನ ಸ್ವಸಹಾಯ ಗುಂಪುಗಳು ಶೇ.4ರ ಬಡ್ಡಿ ದರದಲ್ಲಿ ಒಟ್ಟು 212 ಕೋಟಿ ರೂ.ಗಳ ಸಾಲವನ್ನು ಪಡೆದಿವೆ. ಈ ಯೋಜನೆಯನ್ನು ಮುಂದುವರೆಸಲು 2011-12ನೇ ಸಾಲಿನಲ್ಲಿ 15 ಕೋಟಿ ರೂ. ಗಳನ್ನು ನಿಗದಿಪಡಿಸಲಾಗಿದೆ.

88) ಗ್ರಾಮೀಣ ಸಹಕಾರಿ ಸದಸ್ಯರುಗಳಿಗೆ 2002-03ನೇ ಸಾಲಿನಿಂದ ಯಶಸ್ವಿನಿ ಆರೋಗ್ಯ ಸೇವೆ ಯೋಜನೆಯಡಿ ಗುಣಮಟ್ಟದ ಉಚಿತ ಆರೋಗ್ಯ ತಪಾಸಣೆಯನ್ನು ಒದಗಿಸಲಾಗುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ 40,000ಕ್ಕೂ ಹೆಚ್ಚಿನ ಫಲಾನುಭವಿಗಳು 33 ಕೋಟಿ ರೂ.ಗಳಷ್ಟು ಶಸ್ತ್ರಚಿಕಿತ್ಸಾ ಸೌಲಭ್ಯವನ್ನು

ಪಡೆದುಕೊಂಡಿರುತ್ತಾರೆ. 2011–12ನೇ ಸಾಲಿನಲ್ಲಿ ಈ ಯೋಜನೆಯನ್ನು ಮುಂದುವರೆಸಲು 40 ಕೋಟಿ ರೂ. ಗಳನ್ನು ಒದಗಿಸಲಾಗುವುದು.

89) ರೈತ ಮಹಿಳೆಯರು ಎದುರಿಸುತ್ತಿರುವ ಗರ್ಭಕೋಶದ ಸಮಸ್ಯೆಗಳಿಗೆ ತಗಲುವ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಲಿದೆ.

90) ಕಾಡು ಪ್ರಾಣಿಗಳ ದಾಳಿಗೊಳಗಾಗಿ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ 2 ಲಕ್ಷ ರೂ. ಪರಿಹಾರ ವಿತರಿಸಲಾಗುವುದು. ಹಾಗೂ ಕಾಡು ಪ್ರಾಣಿಗಳ ಹಾವಳಿಯಿಂದ ಆಗುವ ಬೆಳೆ ನಷ್ಟಕ್ಕೆ ನೀಡುವ ಪರಿಹಾರ ಮೊತ್ತವನ್ನು 25,000 ರೂ.ವರೆಗೆ ಹೆಚ್ಚಿಸಲಾಗುವುದು.

ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿ ಕೌಶಲ್ಯ ಮತ್ತು ಗುಡಿ ಕೈಗಾರಿಕೆಗೆ ಆದ್ಯತೆ

91) ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಸೂಕ್ತ ತರಬೇತಿ, ಮಾರ್ಗದರ್ಶನ ಮತ್ತು ಸಹಾಯ ಧನದ ಅವಶ್ಯಕತೆಯಿದೆ. ಈ ದಿಕ್ಕಿನಲ್ಲಿ, ಪ್ರಾರಂಭಿಕವಾಗಿ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಮಾರುಕಟ್ಟೆ ಅಭಿವೃದ್ಧಿ ಮತ್ತು ಘಟಕ ಸ್ಥಾಪನೆಗೆ 4 ಕೋಟಿ ರೂ. ಗಳ ಸಹಾಯಧನವನ್ನು ನೀಡಲಾಗುವುದು. ಇದರಿಂದ ಈ ಸಂಸ್ಥೆಯವರು ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಸಿದ್ಧ ಉಡುಪುಗಳ ಘಟಕ ಸ್ಥಾಪನೆ, ರಾಜ್ಯದ 10 ನಗರಗಳಲ್ಲಿ ಗ್ರಾಮೀಣ ಪ್ರದೇಶಗಳ ಉತ್ಪಾದನೆಗಳಿಗೆ ಮಾರುಕಟ್ಟೆ ವಿಸ್ತರಣೆ, ಮತ್ತು ಗ್ರಾಮೀಣ ಉದ್ಯೋಗಗಳಿಗೆ ಕಚ್ಚಾ ಸಾಮಗ್ರಿ ಮತ್ತು ಸಿದ್ಧ ಮಾಲುಗಳನ್ನು ಪೂರೈಸಲು ಸಹಾಯವಾಗುವುದು.

92) ಗ್ರಾಮೀಣ ಪ್ರದೇಶಗಳ ಯುವಕ/ಯುವತಿಯರಿಗೆ ವೃತ್ತಿ ಕೌಶಲ್ಯದ ತರಬೇತಿ, ಹಾಗೂ ಅವರು ಉದ್ಯಮಿಗಳಾಗಿ ಬೆಳೆಯಲು ಅಗತ್ಯವಿರುವ ಸೌಲಭ್ಯಗಳನ್ನು ನೀಡುವ ಅಗತ್ಯವಿದ್ದು, ರಾಷ್ಟ್ರ ಮಟ್ಟದಲ್ಲಿ ಈ ದಿಕ್ಕಿನಲ್ಲಿ ಹಲವಾರು ದಶಕಗಳು ಶ್ರಮವಹಿಸಿದ ದೀನದಯಾಳ್ ಉಪಾಧ್ಯಾಯರ ಹೆಸರಿನಲ್ಲಿ ಒಂದು ಸಂಶೋಧನೆ ಮತ್ತು ತರಬೇತಿ ನೈಪುಣ್ಯತೆ ಕೇಂದ್ರವನ್ನು ಸ್ಥಾಪಿಸಲು 5 ಕೋಟಿ ರೂ. ಗಳನ್ನು ನೀಡಲಾಗುವುದು.

93) ಇತ್ತೀಚಿನ ವರ್ಷಗಳಲ್ಲಿ ನಮ್ಮ ಬಡ ರೈತ ಕುಟುಂಬಗಳ ಮಕ್ಕಳು, ತಮ್ಮ ಎಲ್ಲಾ ಸಂಕಷ್ಟಗಳ ಮಧ್ಯೆಯೂ ಕಷ್ಟಪಟ್ಟು ಓದಿ, ಹೆಚ್ಚಿನ ಅಂಕಗಳನ್ನು

ಗಳಿಸಿದರೂ ಸಹ ವಾಣಿಜ್ಯ ಬ್ಯಾಂಕುಗಳಲ್ಲಿ ಉನ್ನತ ಶಿಕ್ಷಣಕ್ಕೆ ಅಗತ್ಯವಾದ ಸಾಲ ದೊರೆಯದೆ, ಅಂತಹ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿಲ್ಲ. ಇದನ್ನು ಮನಗಂಡ ನಮ್ಮ ಸರ್ಕಾರವು, ಈ ವರ್ಷದಿಂದ ಬಡ ರೈತರ ಮಕ್ಕಳಿಗೆ ಅವರ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಬಡ್ಡಿ ರಹಿತ ಸಾಲದ ಯೋಜನೆಗೆ 20 ಕೋಟಿ ರೂ. ಗಳನ್ನು ವಿನಿಯೋಗಿಸಲಾಗುವುದು.

ವಸತಿ ಯೋಜನೆಗಳಿಗೆ ಭೂಸ್ವಾಧೀನ

94) ಬೆಂಗಳೂರು ನಗರ ಹಾಗೂ ರಾಜ್ಯದ ಇತರ ನಗರ ಪ್ರದೇಶಗಳಲ್ಲಿ ಬಡಾವಣೆಗಳ ಅಭಿವೃದ್ಧಿ ಹಾಗೂ ವಸತಿ ಯೋಜನೆಗಳಿಗೆ ಆದ್ಯತೆ ನೀಡಲಾಗುವುದು. ರಾಜ್ಯದೆಲ್ಲೆಡೆ ನಗರ ವಸತಿ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಕ್ಲಿಷ್ಟಕರವಾಗಿರುವುದರಿಂದ ಹಾಗೂ ರಾಜ್ಯದ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ ಮತ್ತು ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಹಾಗೂ ರೈತರಿಗೆ ಅನುಕೂಲವಾಗುವಂತೆ ವಶಪಡಿಸಿಕೊಳ್ಳಲಾಗುವ ಜಮೀನಿಗೆ ಪರಿಹಾರವಾಗಿ 60:40 ಅನುಪಾತದಲ್ಲಿ ವಸತಿಗಾಗಿ ಲಭ್ಯವಿರುವ ಅಭಿವೃದ್ಧಿಪಡಿಸಿದ್ದ ಜಾಗದಲ್ಲಿ ಶೇಕಡಾ 40ರಷ್ಟು ಜಮೀನನ್ನು ರೈತರಿಗೆ ನೀಡಲಾಗುವುದು. ಇದರಿಂದ ಅವರಿಗೆ ಹೆಚ್ಚು ಆದಾಯ ಹಾಗೂ ಪಾಲುದಾರಿಕೆಗೆ ಅವಕಾಶವಿರುತ್ತದೆ.

ಸನ್ಮಾನ್ಯ ಸಭಾಧ್ಯಕ್ಷರೇ,

ಭೂದಾಖಲೆಗಳ ನವೀಕರಣ

95) ಸಾರ್ವಜನಿಕರು ತಮ್ಮ ಭೂದಾಖಲೆಗಳನ್ನು ಕಾಲಕಾಲಕ್ಕೆ ನವೀಕರಿಸಿ ಕೊಳ್ಳುವಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಭೂಮಿ–ಯೋಜನೆಯ ಅನುಷ್ಠಾನದ ನಂತರ, ಈ ಸಮಸ್ಯೆಗಳನ್ನು ಸಾಕಷ್ಟು ನಿವಾರಿಸಲಾಗಿದೆ. ಆದರೆ ಇದಿಷ್ಟೇ ಸಾಲದು. ಭೂದಾಖಲೆಗಳ ಸುಲಭ ಲಭ್ಯತೆ ಮತ್ತು ಸುಲಭ ನವೀಕರಣಕ್ಕೆ ಅನುಕೂಲವಾಗುವಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ:

95.1) ಭೂದಾಖಲೆಗಳ ಗಣಕೀಕರಣದ ವೇಗವನ್ನು ಹೆಚ್ಚಿಸುವುದು.

95.2) ಭೂಸ್ವಾಧೀನ, ಭೂಮಂಜೂರಾತಿ, ವಿವಾದಾತ್ಮಕ ಖಾತೆಗಳ ಬದಲಾವಣೆ ಪ್ರಕರಣಗಳು, ಭೂಸುಧಾರಣೆ ಮತ್ತು ಇನಾಂತಿ ರದ್ದತಿ, ಇತ್ಯಾದಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಖಾಯಂ ಆಗಿ ಲಭಿಸುವಂತೆ ನೋಡಿಕೊಳ್ಳುವುದು. ಈ ದಿಶೆಯಲ್ಲಿ ಮೇಲೆ ನಮೂದಿಸಿದ ಎಲ್ಲಾ ದಾಖಲೆಗಳ ಸ್ಕ್ಯಾನಿಂಗ್ ಮಾಡಿ ಪರಿವಿಡಿ ಸಿದ್ಧಪಡಿಸುವಂತೆ ಸೂಚಿಸಲಾಗುವುದು. ಈ ಕಾರ್ಯ 2011ರ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ.

95.3) ಭೂಸ್ವಾಧೀನದ ನಂತರ ಭೂಮಿ ಯೋಜನೆಯಡಿ ಸ್ವಯಂ ಖಾತೆ ಬದಲಾವಣೆ ಸಾಧ್ಯಗೊಳಿಸಲು ಅಗತ್ಯವಾದ ತಂತ್ರಾಂಶ ಸಂಪರ್ಕ ಏರ್ಪಡಿಸಲು ಬೇಕಾದ ಕ್ರಮ ಕೈಗೊಳ್ಳಲಾಗುವುದು.

95.4) ಭೂದಾಖಲೆಗಳ ಆನ್‌ಲೈನ್ ದಾಖಲೀಕರಣಕ್ಕೆ ಅಗತ್ಯವಾದ ತಂತ್ರಾಂಶವನ್ನು ರೂಪಿಸಿ, ಭೂಮಿ, ಕಾವೇರಿ ಮತ್ತು ಮೋಜಣಿ ಯೋಜನೆಗಳ ನಡುವೆ ಪೂರ್ಣವಾಗಿ ಸಂಯೋಜನೆ ಏರ್ಪಡಿಸಲಾಗುವುದು.

96) ಪ್ರಸಕ್ತ ನಿಯಮಾವಳಿಗಳಡಿ ಭೂ ಲಭ್ಯತೆ, ಮಾರಾಟ, ಪರಿವರ್ತನೆ ಮತ್ತಿತರ ಪ್ರಕ್ರಿಯೆಗಳು ಸಂಕೀರ್ಣ ಸ್ವರೂಪದಲ್ಲಿದ್ದು, ಮಧ್ಯವರ್ತಿಗಳ ಹಾವಳಿಗೆ ಅವಕಾಶವಾಗಿದೆ. ಇದನ್ನು ಸರಳೀಕರಿಸಿ, ಸಾರ್ವಜನಿಕರಿಗೆ ಭೂಲಭ್ಯತೆ ಹೆಚ್ಚಿಸಲು ಭೂಸುಧಾರಣಾ ಕಾಯ್ದೆ 1961ರ ಸೆಕ್ಷನ್ 79–ಎ, 79–ಬಿ ಮತ್ತು 109ಕ್ಕೆ ಸೂಕ್ತ ತಿದ್ದುಪಡಿಗಳನ್ನು ತರಲಾಗುವುದು. ಎಲ್ಲಾ ಉದ್ದೇಶಗಳಿಗೆ ಸುಲಭವಾಗಿ ಭೂಮಿ ದೊರಕುವಂತೆ ಮಾಡಲು, ಭೂಕಂದಾಯ ಕಾಯ್ದೆ, 1964 ಅನ್ನು ತಿದ್ದುಪಡಿ ಮಾಡಲಾಗುವುದು. ಇದರಿಂದಾಗಿ 3 ತಿಂಗಳ ಒಳಗಡೆ ವಿವಿಧ ಚಟುವಟಿಕೆಗಳಿಗೆ ಭೂಮಿಯನ್ನು ಪರಿವರ್ತಿಸಲು ಸಾಧ್ಯವಾಗುವುದು.

97) ಸರ್ಕಾರಿ ಭೂಮಿಗಳು ಬಹುಮುಖ್ಯ ಸ್ವತ್ತುಗಳಾಗಿವೆ. ಈ ಭೂಮಿಗಳ ಒತ್ತುವರಿಯನ್ನು ಪತ್ತೆ ಮಾಡಿ, ಅಳತೆ ಕೈಗೊಂಡು ಒತ್ತುವರಿಯನ್ನು ನಿವಾರಿಸಲು ಕಾರ್ಯಪಡೆ ಮೂಲಕ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ನೀರಿನ ಸ್ವಾಭಾವಿಕ ಹರಿವು ಮತ್ತಿತರ ಉದ್ದೇಶಗಳಿಗೆ ಮೀಸಲಾದ ಭೂಮಿಗಳನ್ನು ರಕ್ಷಿಸುವುದು ಬಹುಮುಖ್ಯ. ಇಂತಹ ಸರ್ಕಾರಿ ಭೂಮಿಗಳನ್ನು ಕಂದಾಯ ದಾಖಲೆಗಳಲ್ಲಿ ಖರಾಬ್ ಎಂದು ಕರೆಯಲಾಗಿದೆ. ಈ ಎಲ್ಲಾ

ಭೂಮಿಗಳನ್ನು ಗುರುತಿಸಿ, ಅಳತೆ ಮಾಡಿ ರಕ್ಷಿಸುವುದಲ್ಲದೆ ವಿಶೇಷ ಪ್ರಕರಣಗಳಲ್ಲಿ ಮಾತ್ರ ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗುವುದು.

98) ಕೆರೆ ಕಟ್ಟೆಗಳಂತಹ ಜಲ ಮೂಲಗಳು ಸ್ವಾಭಾವಿಕ ರಚನೆಗಳಾಗಿದ್ದು, ನೀರಿನ ಸಂಗ್ರಹಣೆ ಮತ್ತು ಪ್ರವಾಹ ನಿಯಂತ್ರಣಕ್ಕೆ ಸಹಕಾರಿಯಾಗಿವೆ. ಈ ಎಲ್ಲಾ ಕೆರೆ ಕಟ್ಟೆಗಳನ್ನು ರಕ್ಷಿಸುವ ಸಲುವಾಗಿ ಅಳತೆ ಕಾರ್ಯ ಕೈಗೊಂಡು, ಅಗತ್ಯವಿದ್ದೆಡೆ ಪುನಶ್ಚೇತನಗೊಳಿಸಲಾಗುವುದು.

99) ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ನಿವಾರಿಸಲು ನಮ್ಮ ಸರ್ಕಾರ ದಿಟ್ಟ ಕ್ರಮ ಕೈಗೊಳ್ಳಲು ನಿರ್ಧರಿಸಿದೆ. ಮುಂದಿನ ಮೂರು ವರ್ಷಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಾಕಿ ಉಳಿದಿರುವ ಎಲ್ಲಾ ಪೋಡಿ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು.

100) ಆಧುನಿಕ ಮತ್ತು ಜಿಐಎಸ್ ತಂತ್ರಜ್ಞಾನದ ಮೂಲಕ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ, ರಾಜ್ಯದ ಎರಡು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಹಿಡುವಳಿಗಳ ಭೂ ಮರುಮಾಪನ ಕಾರ್ಯವನ್ನು ಕೈಗೊಳ್ಳಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಜಲ ಸಂಪನ್ಮೂಲ ಅಭಿವೃದ್ಧಿ

101) ಜಲಕ್ರಾಂತಿ: ರಾಷ್ಟ್ರದ ಕೃಷಿ, ತೋಟಗಾರಿಕೆ ಹಾಗೂ ಗ್ರಾಮೀಣಾಭಿವೃದ್ಧಿಯು ಜಲಸಂಪನ್ಮೂಲದ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಅವಲಂಬಿಸಿದೆ. ರಾಜ್ಯದ ನಿಸರ್ಗದತ್ತ ಜಲ ಸಂಪನ್ಮೂಲಗಳನ್ನು ಸಮರ್ಪಕವಾಗಿ ಹಾಗೂ ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಂಡು ಬರಪೀಡಿತ ಪ್ರದೇಶಗಳಲ್ಲಿ ನೀರಿನ ಬವಣೆಯನ್ನು ನೀಗಿಸುವ ಮೂಲಕ "ಜಲಕ್ರಾಂತಿ" ಮಾಡುವ ಸದುದ್ದೇಶದ ಬಜೆಟ್ ಇದಾಗಿದೆ. ಈ ಹಿನ್ನೆಲೆಯಲ್ಲಿ 2011ರಿಂದ 2020ರವರೆಗೆ "ನೀರಾವರಿ ದಶಕ" ಎಂದು ನಮ್ಮ ಸರ್ಕಾರ ಘೋಷಿಸಿದೆ. ಮುಂದಿನ ಹತ್ತು ವರ್ಷಗಳಲ್ಲಿ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಿ ನೀರು ನಿರ್ವಹಣೆಯಲ್ಲಿ ಹೆಚ್ಚಿನ ಕ್ಷಮತೆಯನ್ನು ಸಾಧಿಸಿ ಕರ್ನಾಟಕದ ಕೃಷಿ ಆದಾಯವನ್ನು ಹೆಚ್ಚಿಸಿ, ಆಹಾರ ಭದ್ರತೆಯನ್ನು ಸಾಧಿಸುವ ವಿಶ್ವಾಸವನ್ನು ಜನತೆಗೆ ನೀಡುತ್ತೇನೆ.

ಮುಂದಿನ ದಿನಗಳಲ್ಲಿ ರಾಜ್ಯದ ಆರ್ಥಿಕ ಬೆಳವಣಿಗೆಗೆ ನೀರಾವರಿಯ ಪಾತ್ರ ಪ್ರಮುಖವಾಗಿರುತ್ತದೆ ಎಂದು ಹೇಳಬಯಸುತ್ತೇನೆ.

102) ಕೃಷ್ಣಾ ಐತೀರ್ಪು: ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ರ ಐತೀರ್ಪು ಬಂದಿದ್ದು, ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524.25 ಮೀಟರ್‌ಗೆ ಹೆಚ್ಚಿಸಲು ಅನುಮತಿಯನ್ನು ನೀಡಿದೆ. ನ್ಯಾಯಾಧಿಕರಣವು ಕರ್ನಾಟಕ ರಾಜ್ಯಕ್ಕೆ 911 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿದೆ. ಹೆಚ್ಚುವರಿ ನೀರಿನಲ್ಲಿ ನಮ್ಮ ಬೇಡಿಕೆ 278 ಟಿ.ಎಂ.ಸಿ.ಯಷ್ಟು ಇದ್ದರೂ, ನ್ಯಾಯಾಧಿಕರಣವು ನಮಗೆ 177 ಟಿ.ಎಂ.ಸಿ.ಯಷ್ಟು ನೀರನ್ನು ನೀಡಿದೆ. ರಾಜ್ಯದ ಪಾಲಿನ ಪೂರ್ಣ ನೀರನ್ನು ಸಮರ್ಪಕವಾಗಿ ಬಳಸಿಕೊಂಡು ರೈತರಿಗೆ ಅನುಕೂಲಗಳನ್ನು ಕಲ್ಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ.

103) ಜಲ ಸಂಗ್ರಹಣಾ ಸಾಮರ್ಥ್ಯದಿಂದ ಜಲ ನಿರ್ವಹಣೆ ಮತ್ತು ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಕಡೆಗೆ ಇನ್ನು ಮುಂದೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು. ನದಿ ಕಣಿವೆ ಮಟ್ಟದಲ್ಲಿ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆ ತತ್ವಗಳನ್ನು ಆಧರಿಸಿದ ಪ್ರಸ್ತಾವನೆಗಳನ್ನು ತಯಾರಿಸುವ ಪ್ರಕ್ರಿಯೆಯನ್ನು ದೇಶದಲ್ಲಿ ಪ್ರಥಮ ಬಾರಿಗೆ ನಮ್ಮ ರಾಜ್ಯ ಸರ್ಕಾರವು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸಹಯೋಗದೊಂದಿಗೆ ಆರಂಭಿಸಿದೆ. ಈ ವರ್ಷದಲ್ಲಿ ಅದರ ಅನುಷ್ಠಾನ ವರದಿಗಳು ಸಿದ್ಧಗೊಳ್ಳಲಿವೆ. ಜೊತೆಗೆ, ವಿಶ್ವ ಆರ್ಥಿಕ ವೇದಿಕೆಯ ಜಲ ಸಂಪನ್ಮೂಲ ತಂಡ–2030 ಕೂಡ ಕರ್ನಾಟಕದ ನೀರಾವರಿ ವಲಯದ ಸುಧಾರಣೆಗಳಿಗಾಗಿ ನೀತಿ ನಿರೂಪಕ ಆಯ್ಕೆಗಳನ್ನು ನಿರ್ಧರಿಸುವ ಉದ್ದೇಶದಿಂದ ಮುಂಬರುವ ದಿನಗಳಲ್ಲಿ ಖಾಸಗಿ ಬಂಡವಾಳವನ್ನು ಆಕರ್ಷಿಸಲು ಒಂದು ಒಡಂಬಡಿಕೆಗೆ ಸಹಿ ಹಾಕಲಾಗಿದೆ.

104) ಆಧುನಿಕ ತಂತ್ರಾಂಶಗಳು ಮತ್ತು ತಂತ್ರಜ್ಞಾನಗಳನ್ನು ಒಳಗೊಂಡ ಅತ್ಯಾಧುನಿಕ ವಿನ್ಯಾಸ ಕೇಂದ್ರವನ್ನು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಲ್ಲಿ ಸ್ಥಾಪಿಸುವ ಅಗತ್ಯವಿದ್ದು, ಇದಕ್ಕಾಗಿ 10 ಕೋಟಿ ರೂ. ಗಳನ್ನು ವಿನಿಯೋಗಿಸಲಾಗುವುದು. ನೀರಾವರಿ ಯೋಜನೆಗಳ ಸಮೀಕ್ಷೆ ಕಾರ್ಯವನ್ನು ತುರ್ತಾಗಿ, ಶೀಘ್ರವಾಗಿ ಹಾಗೂ ನಿಖರವಾಗಿ ಮಾಡಲು ಮತ್ತು ಕಾಲುವೆ–

ಜಲಾಶಯಗಳ ನಿರ್ವಹಣೆಗಾಗಿ ಹೂಳಿನ ಪ್ರಮಾಣವನ್ನು ಸಮೀಕ್ಷೆ ಮಾಡಲು ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ **LiDAR (Light Detection And Ranging) 3D** ಸರ್ವೆ ತಾಂತ್ರಿಕತೆಯನ್ನು ಬಳಸಲಾಗುವುದು.

105) ಟೆಲಿಮೆಟ್ರಿ: ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಘಟಪ್ರಭಾ ಬಲದಂಡೆ ಕಾಲುವೆಯಲ್ಲಿ ದೂರ ಅಳೆಯುವ ಉಪಕರಣವನ್ನು **(Telemetry)** ಅಳವಡಿಸಿ ಯಶಸ್ಸು ಸಾಧಿಸಲಾಗಿದೆ. ಇದನ್ನು ಉಳಿದ ಕಾಲುವೆಗಳಿಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು 45 ಕೋಟಿ ರೂ. ವೆಚ್ಚದಲ್ಲಿ ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅನುಷ್ಠಾನ ಗೊಳಿಸಲಾಗುವುದು.

106) ಸವಳು ಮತ್ತು ಜವಳು ಪ್ರದೇಶಗಳ ಪುನರುತ್ಥಾನ: ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ಸವಳು ಮತ್ತು ಜವಳು ಪೀಡಿತ ಪ್ರದೇಶದ ಪುನರುತ್ಥಾನ ಕಾರ್ಯಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. 1,12,000 ಹೆಕ್ಟೇರ್ ಪ್ರದೇಶವನ್ನು ಪುನರುತ್ಥಾನಗೊಳಿಸಲು ನಬಾರ್ಡ್‌ನಿಂದ 80 ಕೋಟಿ ರೂ.ಗಳ ಸಾಲದ ಅನುದಾನ ಕೋರಲಾಗಿದ್ದು, ರಾಜ್ಯ ಸರ್ಕಾರದ 20 ಕೋಟಿ ರೂ. ಗಳ ಅನುದಾನದ ಮೂಲಕ ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುವುದು.

107) ಬೆಂಗಳೂರು ನಗರ ಮತ್ತು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಕುಡಿಯುವ ನೀರು ಪೂರೈಕೆ ಮಾಡಲು ಪಶ್ಚಿಮವಾಹಿನಿಗಳ ಮೂಲಕ ನೀರನ್ನು ತಿರುಗಿಸಲು ವಿವರವಾದ ಯೋಜನಾ ವರದಿಗಳ ಸಮೀಕ್ಷಾ ಕಾರ್ಯವು ಎನ್.ಆರ್.ಎಸ್.ಎ. ಮೂಲಕ ಈಗಾಗಲೇ ಪೂರ್ಣಗೊಂಡಿದೆ. ಪರಿಸರಕ್ಕೆ ಹಾನಿಯಾಗದಂತೆ ಹಂತ ಹಂತವಾಗಿ ಕುಡಿಯುವ ನೀರನ್ನು ಕೊಳವೆಗಳ ಮೂಲಕ ಪೂರೈಸಲು ಕ್ರಮ ಕೈಗೊಳ್ಳಲಾಗುವುದು. ಮೊದಲ ಹಂತದಲ್ಲಿ ಇದಕ್ಕಾಗಿ ಎತ್ತಿನ ಹೊಳೆ ನಾಲೆಯಿಂದ ನೀರನ್ನು ಪಡೆಯಲಾಗುವುದು. ಈ ಯೋಜನೆಯನ್ನು ಪರಿಣಿತ ಸಂಸ್ಥೆಗಳ ಮೂಲಕ ಅನುಷ್ಠಾನ ಮಾಡಲು ಈ ವರ್ಷದಲ್ಲಿ ಪ್ರಾರಂಭಿಕವಾಗಿ 200 ಕೋಟಿ ರೂ. ಗಳನ್ನು ನೀಡಲಾಗಿದೆ.

108) 2011–12ನೇ ಸಾಲಿನಲ್ಲಿ 30 ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು (ಹರಿಹರದ ಬೈರನಪಾದ ಏತ ನೀರಾವರಿ ಯೋಜನೆ ಮತ್ತು ಸೊರಬ ತಾಲ್ಲೂಕಿನ ಕಚವಿ ಸೇರಿದಂತೆ) ಪೂರ್ಣಗೊಳಿಸುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ 674 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

109) ಸಾಗರ ತಾಲ್ಲೂಕಿನಲ್ಲಿ ಬೆಕ್ಕೋಡಿ ಕಾಲುವೆ ನಿರ್ಮಿಸಲು 25 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

110) ಸೊರಬ ತಾಲ್ಲೂಕಿನ ದಂಡಾವತಿ ನೀರಾವರಿ ಯೋಜನೆಯ ಎಲ್ಲಾ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು, ಅದರಂತೆ ಕಾರ್ಯಾರಂಭ ಮಾಡಲಾಗುವುದು.

111) ರಾಜ್ಯಾದ್ಯಂತ ನೀರು ಬಳಕೆದಾರರ ಸಹಕಾರ ಸಂಘಗಳ ಸಾಮರ್ಥ್ಯ ಹೆಚ್ಚಿಸುವ ಅಗತ್ಯವಿದೆ. ನೀರಾವರಿ ದರ ಸಂಗ್ರಹಣೆ ಮತ್ತು ಕಾರ್ಯಕ್ಷಮತೆ ಆಧರಿಸಿ ಪ್ರೋತ್ಸಾಹ ರೂಪದಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಸಹಾಯಧನ ನೀಡಲಾಗುವುದು. ಇದಕ್ಕಾಗಿ 20 ಕೋಟಿ ರೂ. ಗಳನ್ನು ಎ.ಡಿ.ಬಿ. ವರದಿ ಸೂಚಿಸಿದ ಮಾದರಿಯಲ್ಲಿ ವಿನಿಯೋಗಿಸಲಾಗುವುದು.

112) ಜಲ ಸಂಪನ್ಮೂಲದ ಸಮಗ್ರ ನಿರ್ವಹಣೆಗೆ ನೈಪುಣ್ಯತೆ ಕೇಂದ್ರ: ಜಲ ಸಂಪನ್ಮೂಲ ವಲಯದಲ್ಲಿ ಸಮಗ್ರ ಜಲ ಸಂಪನ್ಮೂಲ ನಿರ್ವಹಣೆಯ ತತ್ವಗಳನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳಲು ವಿಶೇಷ ಘಟಕವೊಂದನ್ನು ಸ್ಥಾಪಿಸುವ ಅಗತ್ಯವಿದ್ದು, ಇದಕ್ಕೆ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವು ದೊರೆಯಲಿದೆ. ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿರುವ ಧಾರವಾಡದ ಜಲ ಮತ್ತು ನೆಲ ನಿರ್ವಹಣಾ ಸಂಸ್ಥೆ (ವಾಲ್ಮಿ), ಮೈಸೂರಿನಲ್ಲಿರುವ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಮತ್ತು ಬೆಂಗಳೂರಿನಲ್ಲಿರುವ ಕೇಂದ್ರ ಯಾಂತ್ರಿಕ ಸಂಸ್ಥೆಗಳನ್ನು ಪುನರ್‌ರಚಿಸಿ ಹಾಗೂ ಸಮನ್ವಯಗೊಳಿಸಿ, ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ನೈಪುಣ್ಯತೆ ಕೇಂದ್ರವನ್ನು ಸ್ಥಾಪಿಸಲಾಗುವುದು. ಈ ಸಂಸ್ಥೆಯನ್ನು ಮಾದರಿ ಸಂಸ್ಥೆಯನ್ನಾಗಿ ಅಭಿವೃದ್ಧಿಪಡಿಸಲು 50 ಕೋಟಿ ರೂ. ಗಳನ್ನು ನೀಡಲಾಗುವುದು.

113) ಕರಾವಳಿ ಜಿಲ್ಲೆಗಳಲ್ಲಿ (ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ) ಸಮುದ್ರಕ್ಕೆ ಹರಿದುಹೋಗುವ ನೀರನ್ನು ತಡೆದು, ರೈತರು ಉಪಯೋಗಿಸಲು ಕಿಂಡಿ ಅಣೆಕಟ್ಟು ಹಾಗೂ ಚೆಕ್‌ಡ್ಯಾಂಗಳ ನಿರ್ಮಾಣಕ್ಕೆ 30 ಕೋಟಿ ರೂ. ಗಳನ್ನು ಮತ್ತು ಕಾಲು ಸಂಕಗಳ ನಿರ್ಮಾಣಕ್ಕಾಗಿ 15 ಕೋಟಿ ರೂ.ಗಳನ್ನು ಒದಗಿಸಲಾಗುವುದು.

114) ಕರಾವಳಿ ಜಿಲ್ಲೆಗಳಲ್ಲಿ ಅಗತ್ಯವಾಗಿರುವ ಕಾಲು ಸಂಕಗಳ ರಚನೆಗೆ ಒಟ್ಟು ರೂ. 5 ಕೋಟಿ ಒದಗಿಸಲಾಗುವುದು.

115) ರಾಜ್ಯದಲ್ಲಿ ಸುಮಾರು 36,000 ಕೆರೆಗಳಿವೆ. ಇವುಗಳ ದುರಸ್ತಿ ಮತ್ತು ನಿರ್ವಹಣೆ ಜವಾಬ್ದಾರಿ ಹಲವಾರು ಇಲಾಖೆಗಳ ಮಧ್ಯೆ ಹಂಚಿಹೋಗಿದೆ. ಹೀಗಾಗಿ ಬಹಳಷ್ಟು ಕೆರೆಗಳ ಪುನಶ್ಚೇತನ ಕಷ್ಟಸಾಧ್ಯವಾಗಿದೆ. ಜಿಲ್ಲಾ ಪಂಚಾಯತ್ ಅಧೀನದಲ್ಲಿರುವ ಸುಮಾರು 23,000 ಕೆರೆಗಳ ಸ್ಥಿತಿ ಆಶಾದಾಯಕವಾಗಿಲ್ಲ. ಹಲವಾರು ದಶಕಗಳಿಂದ ಯಾವುದೇ ಪುನರುಜ್ಜೀವನವನ್ನು ಕಾಣದೆ ಹೂಳು ತುಂಬಿದ್ದು, ರಾಜ್ಯದ ಜಲ ಸಂಗ್ರಹದ ಸಾಮರ್ಥ್ಯ ಕಡಿಮೆ ಆಗಿದೆ. ಇದರ ಜೊತೆಗೆ, ಕೆರೆಯ ಅಚ್ಚುಕಟ್ಟು ಹಾಗೂ ಇತರೆ ಪ್ರದೇಶಗಳಲ್ಲಿರುವ ಲಕ್ಷಾಂತರ ಬಾವಿಗಳಲ್ಲಿ ಅಂತರ್ಜಲದ ಮಟ್ಟ ತೀವ್ರವಾಗಿ ಕುಸಿದಿದೆ. ಈ ದಿಕ್ಕಿನಲ್ಲಿ ರಾಜ್ಯಾದ್ಯಂತ ಹಲವು ಕೆರೆಗಳಲ್ಲಿ ಹೂಳು ತೆಗೆದು, ರಾಜ ಕಾಲುವೆಗಳು ಮತ್ತು ತೂಬುಗಳನ್ನು (ಸ್ಲೂಸ್ ಗೇಟುಗಳು) ದುರಸ್ತಿ ಮಾಡುವ ಅವಶ್ಯಕತೆ ಇದೆ. ಜೊತೆಗೆ, ಪೂರ್ಣವಾಗಿ ಬತ್ತಿ ಹೋಗಿರುವ ಕೆರೆಗಳನ್ನು ನದಿ ಮತ್ತು ಜಲಾಶಯಗಳ ಹೆಚ್ಚುವರಿ ನೀರಿನಿಂದ ಪುನರುಜ್ಜೀವನಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಈ ಯೋಜನೆಗಾಗಿ ಜಲ ಸಂವರ್ಧನೆ ಯೋಜನಾ ಸಂಘ ಸಣ್ಣ ನೀರಾವರಿ ಇಲಾಖೆ, ಜಲ ಸಂಪನ್ಮೂಲ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೇರಿದಂತೆ, ಈ ವರ್ಷ ಒಟ್ಟು 1,000 ಕೋಟಿ ರೂ. ಗಳನ್ನು ನೀಡಿ, ಏಪ್ರಿಲ್ 2011ರಿಂದಲೇ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲಾಗುವುದು.

116) ಚಾಮರಾಜನಗರ ಜಿಲ್ಲೆಯ ವಿವಿಧ ಕೆರೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಕಬಿನಿ ನದಿಯಿಂದ ನೀರು ತುಂಬುವ ಯೋಜನೆಯನ್ನು 100 ಕೋಟಿ ರೂ.ಗಳ ಬಂಡವಾಳದೊಂದಿಗೆ ಕೈಗೆತ್ತಿಕೊಳ್ಳಲಾಗುವುದು.

117) ನೀರಾವರಿ ವಲಯಕ್ಕೆ ಒಟ್ಟು 7,800 ಕೋಟಿ ರೂ. ಗಳನ್ನು ನಿಗದಿಪಡಿಸಲಾಗಿದೆ. ಈ ಹಂಚಿಕೆಯು 2010–11ನೇ ಸಾಲಿನಲ್ಲಿ ಒದಗಿಸಲಾದ ಅನುದಾನಕ್ಕಿಂತ ಶೇ.50ರಷ್ಟು ಹೆಚ್ಚಾಗಿದೆ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಆಧಾರದ ಮೇಲೆ ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ಒದಗಿಸಲಾಗುವುದು.

118) ಕೃಷಿ ಮತ್ತು ಕೃಷಿಯೇತರ, ನೀರಾವರಿ ಸೇರಿದಂತೆ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೃಷಿ ಆಯವ್ಯಯ 2011–12ರಲ್ಲಿ ಒಟ್ಟು 17,857 ಕೋಟಿ ರೂ. ಗಳನ್ನು ವೆಚ್ಚ ಮಾಡಲು ನಿರ್ಧರಿಸಲಾಗಿದೆ. ವಿವಿಧ ಯೋಜನೆಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರಗಳಿರುವ ಒಂದು ಪ್ರತ್ಯೇಕ ಕೃಷಿ ಆಯವ್ಯಯ ಸಂಪುಟವನ್ನು ವಾರ್ಷಿಕ ವಿತ್ತೀಯ ನಿರೂಪಣೆಯ ಜೊತೆಗೆ ಮಂಡಿಸಲಾಗಿದೆ.

ಬಿತ್ತಿದ ಹೊಲದಲ್ಲಿ ಮೊಳೆತಾವೊ ಬೀಜ
ಕಣ್ಣ ತೆರೆದಾವಣ್ಣ ಹಸುರಿನ ತೇಜ
ಹೊಲದ ಅಟ್ಟಣೆಯಲ್ಲಿ ನಾನೇ ರಾಜ
ಬಲ್ಲರು ಯಾರಣ್ಣ ಈ ಎಲ್ಲ ಮೋಜ ?

– ಡಾ: ಜಿ.ಎಸ್. ಶಿವರುದ್ರಪ್ಪ

119) ಹಸಿರು ತುಂಬಿದ ಹೊಲವನ್ನು ಕಂಡು ಹಿಗ್ಗಿದ ರೈತನ ಹರ್ಷವನ್ನು ರಾಷ್ಟ್ರಕವಿ ಡಾ: ಜಿ.ಎಸ್. ಶಿವರುದ್ರಪ್ಪ ಅವರು ಈ ಕವನದಲ್ಲಿ ಬಣ್ಣಿಸಿದ್ದಾರೆ. ಸಮೃದ್ಧ ಬೆಳೆ ಮತ್ತು ಲಾಭದಾಯಕ ಬೆಲೆಯ ನಿರೀಕ್ಷೆಯಲ್ಲಿರುವ ರೈತನ ಆತ್ಮವಿಶ್ವಾಸ ಮತ್ತು ಭರವಸೆಯನ್ನು ಕವನದ ಈ ಸಾಲುಗಳು ಪ್ರತಿಬಿಂಬಿಸುತ್ತವೆ. ರೈತನ ಪಾಲಿಗೆ ಅಂತಹ ದಿನಗಳು ಶೀಘ್ರ ದೊರಕುವಂತಾಗಲಿ ಎಂದು ಹಾರೈಸುತ್ತೇನೆ. ಪ್ರತ್ಯೇಕ ಕೃಷಿ ಮುಂಗಡ ಪತ್ರದ ಆಶಯವೂ ಕೂಡಾ ಇದೇ ಆಗಿದೆ.

ಮಾನ್ಯ ಸಭಾಧ್ಯಕ್ಷರೇ ಮತ್ತು ಶಾಸಕ ಮಿತ್ರರೇ,

120) ನಮ್ಮ ರಾಜ್ಯದ ರೈತ ಬಾಂಧವರ ಹಿತಕ್ಕಾಗಿ ಮತ್ತು ಅವರ ಸಮಗ್ರ ಅಭಿವೃದ್ಧಿಗಾಗಿ ನಡೆಸಿರುವ ಚಿಂತನೆ ಈ ಕೃಷಿ ಆಯವ್ಯಯದಲ್ಲಿ ಅಡಕಗೊಂಡಿದೆ. ದೇಶದಲ್ಲಿಯೇ ವಿನೂತನವಾದ ಈ ಪ್ರಯತ್ನಕ್ಕೆ ತಮ್ಮೆಲ್ಲರ ಸಹಕಾರ, ಸಹಭಾಗಿತ್ವ ಮತ್ತು ಬೆಂಬಲ ದೊರೆಯುವುದಾಗಿ ಆಶಿಸುತ್ತೇನೆ.

** – ** – **

ಆಯವ್ಯಯ 2011–2012

ಭಾಗ–2 ಸಾಮಾನ್ಯ

ಮಾನ್ಯ ಸಭಾಧ್ಯಕ್ಷರೇ,

1. ಈಗ ನಾನು ಇತರೆ ವಲಯಗಳು ಮತ್ತು ತೆರಿಗೆ ಪ್ರಸ್ತಾವನೆಗಳನ್ನೊಳಗೊಂಡ ಭಾಗ–2ನ್ನು ಮಂಡಿಸುತ್ತಿದ್ದೇನೆ.

ಆರ್ಥಿಕ ಸ್ಥಿತಿಗತಿ

2. ಜಾಗತಿಕ ಅರ್ಥವ್ಯವಸ್ಥೆಯ ಮಂದಗತಿ ಪರಿಣಾಮವಾಗಿ ಅತ್ಯಂತ ಗಂಭೀರ ಪರಿಸ್ಥಿತಿಯಿಂದ ಆಗತಾನೆ ಚೇತರಿಸಿಕೊಳ್ಳುತ್ತಿದ್ದ ಅರ್ಥಪರಿಸ್ಥಿತಿಯ ಕಾಲದಲ್ಲಿ 2010–11ನೇ ಸಾಲಿನ ಆಯವ್ಯಯವನ್ನು ಮಂಡಿಸಲಾಗಿತ್ತು. ಅರ್ಥವ್ಯವಸ್ಥೆಯ ಸೂಚಕಗಳಲ್ಲಿ ಸ್ವಲ್ಪ ಮಟ್ಟಿನ ಏರಿಕೆಯನ್ನು ಕಂಡರೂ ಸಹ, ಅರ್ಥವ್ಯವಸ್ಥೆಯ ಬೆಳವಣಿಗೆ ಇನ್ನೂ ಸರಿ ದಾರಿಗೆ ಬಂದಿರಲಿಲ್ಲ. ಅಲ್ಲದೆ, ಹೆಚ್ಚುತ್ತಿರುವ ನಿರುದ್ಯೋಗ, ವಿತ್ತೀಯ ಕೊರತೆ, ಉತ್ಪಾದಕ ವಲಯಗಳಿಗೆ ಸಾಲದ ಕೊರತೆ, ನಿರೀಕ್ಷಿತ ಬಂಡವಾಳ ಹರಿದು ಬಾರದಿರುವುದು ಪ್ರಮುಖ ಚಿಂತನೆಯ ಅಂಶಗಳಾಗಿದ್ದವು.

3. ಕಳೆದ ಒಂದು ವರ್ಷದಲ್ಲಿ ಅರ್ಥವ್ಯವಸ್ಥೆ ಪುಟಿದು ವಾರ್ಷಿಕ ಶೇಕಡ 9ರಷ್ಟು ಉತ್ತಮ ಬೆಳವಣಿಗೆಯ ಹಾದಿಯಲ್ಲಿದೆ. ಅರ್ಥವ್ಯವಸ್ಥೆ ಏರಿಕೆ ಹಾದಿಯಿಂದ ಜಾರುವ ಅಪಾಯ ಕ್ಷೀಣಿಸಿದೆ. ಖಾಸಗಿ ಬಳಕೆ ವೆಚ್ಚದಲ್ಲಿ ಹೆಚ್ಚಳವಾಗಿರುವುದು ಮತ್ತು ಒಟ್ಟು ಬಂಡವಾಳ ಹೂಡಿಕೆಯಲ್ಲಿ ವೇಗ ವೃದ್ಧಿಸಿರುವುದು ತೆರಿಗೆ ಸಂಗ್ರಹಣೆಯಲ್ಲಿನ ಬೆಳವಣಿಗೆಯಿಂದ ಕಂಡುಬರುತ್ತಿದೆ. ಅಲ್ಪಾವಧಿ ಮತ್ತು ಮಧ್ಯಮಾವಧಿಯಲ್ಲಿ ಅರ್ಥವ್ಯವಸ್ಥೆಯು ಸದೃಢವಾಗಿರಲಿದೆ.

4. ಆದರೂ, ಶೇ.8 ಕ್ಕಿಂತಲೂ ಹೆಚ್ಚಿನ ಹಣದುಬ್ಬರದ ಪ್ರಮಾಣ ಮತ್ತು ಶೇ.13 ಕ್ಕೂ ಹೆಚ್ಚಿನ ಆಹಾರ ಹಣದುಬ್ಬರದಿಂದಾಗಿ ಆದಾಯದಲ್ಲಿ ಗಣನೀಯವಾಗಿ ಇಳಿಮುಖವಾಗಿದ್ದು, ಅದರಿಂದ ಬೆಳವಣಿಗೆಯ ಪ್ರಯೋಜನಗಳನ್ನು ಕಸಿದು ಕೊಂಡಂತಾಗಿ ಸಾಮಾನ್ಯ ನಾಗರೀಕನು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಇಂದು ಏರುತ್ತಿರುವ ಹಣದುಬ್ಬರ ಅರ್ಥವ್ಯವಸ್ಥೆಗೆ ಅತಿ ದೊಡ್ಡ ಸವಾಲಾಗಿದೆ. ಹಣದುಬ್ಬರವನ್ನು ಹತೋಟಿಗೆ ತರಲು ಕೇಂದ್ರ ಆಯವ್ಯಯದಲ್ಲಿ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಈ ಮೂಲಕ ಆಗ್ರಹಿಸುತ್ತೇನೆ. ಜೊತೆಗೆ, ಹಣಕಾಸು ನೀತಿಗಳು ಬೆಲೆಗಳ ಮೇಲೆ ಮತ್ತು ರೈತರು ಹಾಗೂ ಸಮಾಜದ ದುರ್ಬಲ ವರ್ಗದವರು ಪಡೆಯುವ ಸಾಲದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕಾಗಿದೆ.

5. ಹಣದುಬ್ಬರದಿಂದ ಬಡವರ ಮೇಲೆ ಉಂಟಾಗುವ ಪರಿಣಾಮವನ್ನು ಶಮನ ಗೊಳಿಸಲು ರಾಷ್ಟ್ರೀಯ ಸಾಮಾಜಿಕ ನೆರವಿನ ಯೋಜನೆಯಡಿ ಸಾಮಾಜಿಕ ಭದ್ರತಾ ಪಿಂಚಣಿಯ ವ್ಯಾಪ್ತಿಯನ್ನು ವಿಸ್ತರಿಸುವಂತೆ ಹಾಗೂ ಮೊತ್ತವನ್ನು ಹೆಚ್ಚಿಸುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದೆ.

ರಾಜ್ಯದ ಆರ್ಥಿಕ ಸ್ಥಿತಿ

6. ರಾಜ್ಯದ ಆರ್ಥಿಕ ಸ್ಥಿತಿಯ ನೈಜ ಬೆಳವಣಿಗೆಯು ತೀವ್ರಗತಿಯಲ್ಲಿ ಮುನ್ನಡೆಯುತ್ತಿದೆ ಹಾಗೂ ಹಿಂದಿನ ವರ್ಷಕ್ಕೆ ಹೋಲಿಸಿದರೆ, 2010–11ನೇ ಸಾಲಿನಲ್ಲಿ ಒಟ್ಟು ರಾಜ್ಯ ಆಂತರಿಕ ಉತ್ಪನ್ನದಲ್ಲಿ ಶೇ.8.2ರಷ್ಟು ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. ಆರ್ಥಿಕ ಹಿಂಜರಿತದಿಂದಾಗಿ 2008–09ನೇ ಸಾಲಿನಲ್ಲಿ ಬೆಳವಣಿಗೆ ಶೇ.3.7ಕ್ಕೆ ಕುಂಠಿತಗೊಂಡು, 2009–10ನೇ ಸಾಲಿನ ಬೆಳವಣಿಗೆಯಲ್ಲಿ ಶೇ.5.2ರಷ್ಟು ಸುಧಾರಣೆಯನ್ನು ಕಂಡಿದೆ. ಈ ಪ್ರಕ್ರಿಯೆಯು 2010–11ನೇ ಸಾಲಿನಲ್ಲಿಯೂ ಮುಂದುವರೆದಿದೆ ಹಾಗೂ ಗಣನೀಯವಾದ ಚೇತರಿಕೆಯನ್ನು ಕಂಡಿದೆ. ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಹೆಚ್ಚಳ, ಉತ್ಪಾದಕತೆ ಮತ್ತು ಸೇವಾ ವಲಯಗಳ ಹೆಚ್ಚಿನ ಕೊಡುಗೆಯು ಈ ಸಾಧನೆಗೆ ಕಾರಣವಾಗಿದೆ. ಹನ್ನೊಂದನೇ

ಪಂಚವಾರ್ಷಿಕ ಯೋಜನೆಯ ಆಶೋತ್ತರಗಳನ್ನು ಬಹಳಷ್ಟು ಮಟ್ಟಿಗೆ ಈಡೇರಿಸಲು ರಾಜ್ಯ ಸರ್ಕಾರವು ತನ್ನ ಕೇಂದ್ರೀಕೃತ ಪ್ರಯತ್ನವನ್ನು ಮುಂದುವರೆಸಿದೆ.

7. ರಾಜ್ಯದ ಆಂತರಿಕ ಉತ್ಪನ್ನವು ಪ್ರಸ್ತುತ ದರದಲ್ಲಿ 2009–10ನೇ ಸಾಲಿನಲ್ಲಿದ್ದ 3,43,010 ಕೋಟಿ ರೂ.ಗಳಿಂದ 2010–11ನೇ ಸಾಲಿನಲ್ಲಿ ಶೇ.16ರಷ್ಟು ಬೆಳವಣಿಗೆಯೊಂದಿಗೆ 3,97,938 ಕೋಟಿ ರೂ.ಗಳಾಗುವುದೆಂದು ನಿರೀಕ್ಷಿಸಲಾಗಿದೆ. ಪ್ರಸ್ತುತ ದರದಲ್ಲಿ ಬೆಳವಣಿಗೆಯು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಲಯದಲ್ಲಿ ಶೇ.14.7ರಷ್ಟು, ಕೈಗಾರಿಕಾ ವಲಯದಲ್ಲಿ ಶೇ.10.9ರಷ್ಟು ಮತ್ತು ಸೇವಾ ವಲಯದಲ್ಲಿ ಶೇ.19.2ರಷ್ಟು ಆಗುವ ನಿರೀಕ್ಷೆಯಿದೆ. ಈ ವಲಯಗಳಲ್ಲಿ ನೈಜ ದರದ ರಾಜ್ಯದ ಆಂತರಿಕ ಉತ್ಪನ್ನವು ಕೃಷಿ ವಲಯದಲ್ಲಿ ಶೇ.5.9, ಕೈಗಾರಿಕಾ ವಲಯದಲ್ಲಿ ಶೇ.6.7 ಮತ್ತು ಸೇವಾ ವಲಯದಲ್ಲಿ ಶೇ.9.7ರಷ್ಟು ಬೆಳವಣಿಗೆಯಾಗಿ ಒಟ್ಟಾರೆ 8.2ರ ಬೆಳವಣಿಗೆ ಕಂಡಿದೆ.

8. ತಲಾದಾಯವು ಅಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ತಲಾದಾಯವು 2009–10ನೇ ಸಾಲಿನಲ್ಲಿ ಪ್ರಸಕ್ತ ಬೆಲೆಗಳಲ್ಲಿ 51,858 ರೂ.ಗಳಿದ್ದವು. 2010–11ನೇ ಸಾಲಿನಲ್ಲಿ ಶೇ.15.7ರಷ್ಟು ಬೆಳವಣಿಗೆಯೊಂದಿಗೆ 60,000 ರೂ.ಗಳಾಗುವ ನಿರೀಕ್ಷೆಯಿದೆಯೆಂದು ಅತ್ಯಂತ ಸಂತೋಷದಿಂದ ಘನ ಸದನಕ್ಕೆ ತಿಳಿಸಬಯಸುತ್ತೇನೆ.

ರಾಜ್ಯದ ವಿತ್ತೀಯ ಪರಿಸ್ಥಿತಿ

9. ರಾಜ್ಯ ಸರ್ಕಾರದ ವಿತ್ತೀಯ ಪರಿಸ್ಥಿತಿಯು ಸದೃಢವಾಗಿದೆಯೆಂದು ಈ ಘನಸದನಕ್ಕೆ ಭರವಸೆ ನೀಡುತ್ತಿದ್ದೇನೆ. ಸಾರ್ವಜನಿಕ ಋಣದ ಸ್ಥಿರತೆಯನ್ನು ಕಾಪಾಡಿಕೊಳ್ಳುತ್ತಾ, ತೆರಿಗೆ ಸಂಗ್ರಹಣೆಯನ್ನು ಉತ್ತಮಪಡಿಸಲು ಮತ್ತು ಅಭಿವೃದ್ಧಿ ವೆಚ್ಚಗಳನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ.

10. **ವಿತ್ತೀಯ ಪರಿಸ್ಥಿತಿಯ ಮಾಹಿತಿ:** ರಾಜ್ಯ ಸರ್ಕಾರದ ವಿತ್ತೀಯ ಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರುಗಳಿಗಿರುವ ಸಂಶಯಗಳನ್ನು ನಿವಾರಿಸಲು ನಾನು ಈ ಅವಕಾಶವನ್ನು ಬಳಸಿಕೊಳ್ಳುತ್ತೇನೆ. ಸರಿಯಾದ ಮಾಹಿತಿಯ ಕೊರತೆಯಿಂದ

ಮಾನ್ಯ ಸದಸ್ಯರುಗಳು ಈ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದುದರಿಂದ, ಮಾಹಿತಿಯ ಕೊರತೆಯನ್ನು ನಿವಾರಿಸಲು ರಾಜ್ಯದ ವಿತ್ತೀಯ ಪರಿಸ್ಥಿತಿಯನ್ನು ಇನ್ನು ಮುಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಆರ್ಥಿಕ ಇಲಾಖೆಯ ವೆಬ್‌ಸೈಟ್ **www.kar.nic.in/finance** ನಲ್ಲಿ ಪ್ರಕಟಿಸಲಾಗುವುದು.

11. ರಾಜ್ಯ ಸರ್ಕಾರದ ತೆರಿಗೆ ಸಂಗ್ರಹಣಾ ಕ್ರಮಗಳು ದೇಶದಲ್ಲೇ ಅತ್ಯುತ್ತಮವಾಗಿವೆ. ಭಾರತೀಯ ರಿಸರ್ವ್ ಬ್ಯಾಂಕ್ ಸೇರಿದಂತೆ ಇನ್ನಿತರೆ ವಿವಿಧ ಸಂಸ್ಥೆಗಳು ಈ ವಾಸ್ತವಾಂಶವನ್ನು ಒಪ್ಪಿಕೊಂಡಿವೆ. ಇತ್ತೀಚಿನ ಅಂದಾಜುಗಳ ಪ್ರಕಾರ, ತೆರಿಗೆ ಸಂಗ್ರಹಣೆಗೆ ಕೈಗೊಂಡಿರುವ ಕ್ರಮಗಳಿಂದ ಜಿಎಸ್‌ಡಿಪಿ ತೆರಿಗೆ ಸಂಗ್ರಹಣಾ ಸಾಮರ್ಥ್ಯದ ಶೇಕಡವಾರು ಪ್ರಮಾಣವು 2009–10ನೇ ಸಾಲಿನಲ್ಲಿ ಶೇ.8.9ರಷ್ಟಿದ್ದು, 2010–11ನೇ ಸಾಲಿನಲ್ಲಿ ಶೇ.9.6ರಷ್ಟು ಆಗಬಹುದೆಂದು ಅಂದಾಜಿಸಲಾಗಿದೆ. ಉತ್ತಮ ಜಾರಿ ಕ್ರಮಗಳಿಂದ, ಸಂಗ್ರಹಣಾ ಸಾಮರ್ಥ್ಯಕ್ಕೆ ಗಮನ ಕೇಂದ್ರೀಕರಿಸುವಿಕೆಯಿಂದ, ನಿರಂತರ ಪರಿಶೀಲನೆ ಮತ್ತು ಮೇಲ್ವಿಚಾರಣೆಯ ಪರಿಣಾಮವಾಗಿ ತೆರಿಗೆ ಸಂಗ್ರಹಣೆಯಲ್ಲಿ ಉತ್ತಮ ಸಾಧನೆಯನ್ನು ಮಾಡಲು ಸಾಧ್ಯವಾಗಿದೆ.

12. ಹದಿಮೂರನೇ ಹಣಕಾಸು ಆಯೋಗವು 2014–15ನೇ ಸಾಲಿನ ಅಂತ್ಯಕ್ಕೆ ಕರ್ನಾಟಕದ ಋಣ ಜಿಎಸ್‌ಡಿಪಿ ಅನುಪಾತವನ್ನು ಶೇ.25.2ಕ್ಕೆ ಇಳಿಸಲು ಅನುಷ್ಠಾನ ನಕ್ಷೆಯನ್ನು ನಿಗದಿಪಡಿಸಿದೆ. 2003–04ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಕ್ರೋಢೀಕೃತ ಋಣದ ಅನುಪಾತವು ಜಿಎಸ್‌ಡಿಪಿಯ ಶೇ.35.4 ರಷ್ಟಿತ್ತು ಎಂಬುದನ್ನು ಮಾನ್ಯ ಸದಸ್ಯರುಗಳಿಗೆ ನೆನಪಿಸಬಯಸುತ್ತೇನೆ. 2009–10ನೇ ಸಾಲಿನ ಅಂತ್ಯದಲ್ಲಿ ಕ್ರೋಢೀಕೃತ ಋಣದ ಅನುಪಾತವನ್ನು ಶೇ.25.8ಕ್ಕೆ ಇಳಿಸಲಾಗಿದೆ. ಹದಿಮೂರನೇ ಹಣಕಾಸು ಆಯೋಗವು ನಿಗದಿಪಡಿಸಿರುವ ಅನುಷ್ಠಾನ ನಕ್ಷೆಗಿಂತಲೂ ರಾಜ್ಯ ಸರ್ಕಾರವು ಮುಂದಿದೆ.

13. ರಾಜಸ್ವ ಸ್ವೀಕೃತಿ ಬಡ್ಡಿ ಪಾವತಿ ಅನುಪಾತವು ರಾಜ್ಯ ಸರ್ಕಾರದ ವಿತ್ತೀಯ ಪರಿಸ್ಥಿತಿಯ ಮತ್ತೊಂದು ಪ್ರಮುಖ ಸೂಚಕಾಂಶವಾಗಿದೆ. ಹನ್ನೆರಡನೇ ಹಣಕಾಸು ಆಯೋಗವು ಶೇಕಡ 15ರ ಪರಿಮಿತಿಯನ್ನು ನಿಗದಿಪಡಿಸಿದೆ. ರಾಜ್ಯದ

ವಿತ್ತೀಯ ಸ್ಥಿತಿಯ ಬಗ್ಗೆ ಭಾರತದ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರ ವರದಿಯ ಪ್ರಕಾರ 2009–10ನೇ ಸಾಲಿನಲ್ಲಿ ಶೇ.10.6ರಷ್ಟಿರುವ ಅನುಪಾತವು ಹಣಕಾಸು ಆಯೋಗವು ನಿಗದಿಪಡಿಸಿರುವ ಪರಿಮಿತಿಯೊಳಗಿದೆ. 2010–11ನೇ ಸಾಲಿನಲ್ಲಿ ಈ ಅನುಪಾತವು ಶೇ.9.6ರಷ್ಟು ಇರುವುದಾಗಿ ಅಂದಾಜು ಮಾಡಲಾಗಿದ್ದು, ಇದು ಸಹ ಪರಿಮಿತಿಯೊಳಗೆ ಇರಲಿದೆ.

14. ರಾಜ್ಯವು 2006–07ನೇ ಸಾಲಿನಿಂದ ಸತತವಾಗಿ ರಾಜಸ್ವ ಹೆಚ್ಚಳವನ್ನು ಕಾಪಾಡಿಕೊಂಡಿರುವ ದಾಖಲೆಯನ್ನು ಮುಂದುವರೆಸಿಕೊಂಡು ಬಂದಿದೆ. 2008–09 ಮತ್ತು 2009–10ನೇ ಸಂಕಷ್ಟ ವರ್ಷಗಳಲ್ಲೂ ಸಹ, ಕೇಂದ್ರ ಮತ್ತು ಇತರೆ ರಾಜ್ಯ ಸರ್ಕಾರಗಳಂತೆ ರಾಜ್ಯ ಸರ್ಕಾರದ ತೆರಿಗೆ ಸಂಗ್ರಹಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದರೂ ಸಹ ರಾಜಸ್ವ ಹೆಚ್ಚಳದ ಪರಿಸ್ಥಿತಿಯನ್ನು ಕಾಪಾಡಿಕೊಂಡು ಬರಲಾಗಿದೆ.

15. 2006–07ನೇ ಸಾಲಿನಿಂದಲೂ ವಿತ್ತೀಯ ಕೊರತೆ ಮಿತಿಯನ್ನು ಶೇ.3ರ ಮಿತಿಯೊಳಗಿರುವಂತೆ ನೋಡಿಕೊಳ್ಳಲಾಗಿದೆ. 2009–10ನೇ ಸಾಲಿನಲ್ಲಿ ಮಾತ್ರ ಆರ್ಥಿಕ ಉತ್ತೇಜನ ಕ್ರಮಗಳನ್ನು ಅನುಷ್ಠಾನಗೊಳಿಸುವ ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ ಶೇ.3.2ರ ಹೆಚ್ಚಿನ ವಿತ್ತೀಯ ಕೊರತೆಯನ್ನು ಎದುರಿಸಿದೆ. ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳವನ್ನು ಕಾಪಾಡಲು ಬದ್ಧವಾಗಿದ್ದು, ವಿತ್ತೀಯ ಕೊರತೆ ಮಿತಿಯನ್ನು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ನಿಗದಿಪಡಿಸಿರುವ ಮಿತಿಯೊಳಗಿರುವಂತೆ ಇನ್ನು ಮುಂದೆಯೂ ಸಹ ನೋಡಿಕೊಳ್ಳಲಾಗುವುದು.

16. ರಾಜ್ಯದ ವಿತ್ತೀಯ ಪರಿಸ್ಥಿತಿಯ ಸವಿವರ ವಿಶ್ಲೇಷಣೆಯನ್ನು ಮಧ್ಯಮಾವಧಿ ವಿತ್ತೀಯ ಯೋಜನೆ 2011–15 ರಲ್ಲಿ ಸದನದ ಮುಂದೆ ಮಂಡಿಸಲಾಗಿದೆ.

2010–11 ನೇ ಸಾಲಿನ ವಿತ್ತೀಯ ನಿರ್ವಹಣೆ

17. ಪ್ರಸಕ್ತ ಆರ್ಥಿಕ ವರ್ಷದ ಮೊದಲ ಹತ್ತು ತಿಂಗಳಿನಲ್ಲಿ ಒಟ್ಟು 30,474 ಕೋಟಿ ರೂ.ಗಳನ್ನು ಸಂಗ್ರಹಿಸಲಾಗಿದ್ದು, 2009–10ನೇ ಸಾಲಿನ ಇದೇ ಅವಧಿಯಲ್ಲಿ ಸಂಗ್ರಹಿಸಲಾದ 23,649 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ

ಶೇಕಡ 28.9ರಷ್ಟು ಹೆಚ್ಚಿನ ತೆರಿಗೆಯನ್ನು ಸಂಗ್ರಹಿಸಲಾಗಿದೆ. ಕೇಂದ್ರ ಸರ್ಕಾರದ ಅನುದಾನ, ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು ಮತ್ತು ಸಾಲಗಳು ಸೇರಿದಂತೆ ಒಟ್ಟು ಸ್ವೀಕೃತಿಯಲ್ಲಿ ಶೇಕಡ 19 ರಷ್ಟು ಹೆಚ್ಚಳವಾಗಿದೆ.

18. ಮೊದಲ ಹತ್ತು ತಿಂಗಳಿನಲ್ಲಿ ಯೋಜನೇತರ ವೆಚ್ಚವನ್ನು ನಿಯಂತ್ರಿಸಿರುವುದರಿಂದ ಕೇವಲ ಶೇ.7.7ರಷ್ಟು ಹೆಚ್ಚಳವಾಗಿದೆ. ಇದರ ಪರಿಣಾಮವಾಗಿ ಯೋಜನಾ ವೆಚ್ಚಕ್ಕೆ ಹೆಚ್ಚಿನ ಹಣವನ್ನು ಒದಗಿಸಲು ಸಾಧ್ಯವಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ಹತ್ತು ತಿಂಗಳಿನಲ್ಲಿ ಆಯವ್ಯಯದಿಂದ ಒಟ್ಟು 16,499 ಕೋಟಿ ರೂ.ಗಳ ಯೋಜನಾ ವೆಚ್ಚವನ್ನು ಮಾಡಲಾಗಿದ್ದು, 2009–10ನೇ ಸಾಲಿನ ಇದೇ ಅವಧಿಯಲ್ಲಿ ವೆಚ್ಚ ಮಾಡಲಾದ 14,211 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ ಶೇಕಡ 16.1ರಷ್ಟು ಹೆಚ್ಚಿನ ವೆಚ್ಚ ಮಾಡಲಾಗಿದೆ. ಈ ಸಾಲಿನಲ್ಲಿ ಒಟ್ಟಾರೆ ವಾರ್ಷಿಕ ಯೋಜನೆ ಗುರಿಯನ್ನು ಸಾಧಿಸುತ್ತೇನೆಂಬ ದೃಢ ವಿಶ್ವಾಸವನ್ನು ಹೊಂದಿರುತ್ತೇನೆ.

ಆಯವ್ಯಯ ಹಂಚಿಕೆ

19. ಸರ್ಕಾರದ ವಿವಿಧ ಅಭಿವೃದ್ಧಿ ಚಟುವಟಿಕೆಗಳಿಗೆ ಹಾಗೂ ನಿಯಂತ್ರಣಾ ಕಾರ್ಯಚಟುವಟಿಕೆಗಳಿಗಾಗಿ ಈ ಆಯವ್ಯಯದಲ್ಲಿ ಒಟ್ಟು 85,319 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ. 2010–11ನೇ ಸಾಲಿನ 70,063 ಕೋಟಿ ರೂ.ಗಳ ಆಯವ್ಯಯ ಗಾತ್ರಕ್ಕಿಂತ 2011–12ನೇ ಸಾಲಿನ ಆಯವ್ಯಯ ಗಾತ್ರವು ಶೇ.21.7ರಷ್ಟು ಹೆಚ್ಚಾಗಿದೆ. ವಲಯವಾರು ಹಂಚಿಕೆಯ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ರಾಜ್ಯ ಯೋಜನಾ ವೆಚ್ಚ

20. 2011–12ನೇ ಸಾಲಿನಲ್ಲಿ ರಾಜ್ಯ ಯೋಜನಾ ಹಂಚಿಕೆಗಾಗಿ 38,070 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ಮೊತ್ತವು ಪ್ರಸಕ್ತ ಆರ್ಥಿಕ ವರ್ಷದ ಹಂಚಿಕೆಗಿಂತಲೂ ಶೇ.23ರಷ್ಟು ಹೆಚ್ಚಿದೆ. ಉದ್ದೇಶಿತ ಯೋಜನಾ ಹಂಚಿಕೆಯಿಂದಾಗಿ, ಹನ್ನೊಂದನೇ ಪಂಚವಾರ್ಷಿಕ ಯೋಜನಾ ಅವಧಿಯ ಒಟ್ಟಾರೆ ಯೋಜನಾ ಸಾಧನೆಯು ವಾಸ್ತವಿಕವಾಗಿ ಮೂಲ ಅಂದಾಜು ಯೋಜನಾ ಗಾತ್ರದ ಸುಮಾರು ಶೇ.112ರಷ್ಟು ಆಗಲಿದೆ ಎಂದು ನಿರೀಕ್ಷಿಸಲಾಗಿದೆ.

21. ರಾಜ್ಯವು ಕಳೆದ ಮೂರು ವರ್ಷಗಳ ಅವಧಿಯಲ್ಲಿ, ರಾಜ್ಯ ಯೋಜನಾ ನಿರ್ವಹಣೆಯಲ್ಲಿ ವಾರ್ಷಿಕ ಶೇ.20ರಷ್ಟು ಸರಾಸರಿ ಬೆಳವಣಿಗೆ ದರವನ್ನು ಸಾಧಿಸಿಕೊಂಡು ಬಂದಿದೆ. ಈ ದಾಖಲೆಯನ್ನು ಇನ್ನು ಮುಂದೆಯೂ ಸಹ ಮುಂದುವರೆಸುತ್ತೇನೆಂದು ನನಗೆ ವಿಶ್ವಾಸವಿದೆ. ಕರ್ನಾಟಕದ ವಾರ್ಷಿಕ ರಾಜ್ಯ ಯೋಜನಾ ತಲಾ ವೆಚ್ಚವು 2004–05 ಸಾಲಿನಲ್ಲಿ 2,149 ರೂ.ಗಳಿದ್ದು, ಈಗ 2011–12ನೇ ಸಾಲಿನಲ್ಲಿ 6,362 ರೂ.ಗಳಗೆ ನಿಗದಿಪಡಿಸಲಾಗಿದೆ.

22. 2006–07ನೇ ಸಾಲಿನಲ್ಲಿ ನಾನು ಮೊದಲ ಆಯವ್ಯಯವನ್ನು ಮಂಡಿಸುವಾಗ ರಾಜ್ಯದ ಯೋಜನಾ ತಲಾ ವೆಚ್ಚವು 3,232 ರೂ.ಗಳಾಗಿದ್ದವು. ಐದು ವರ್ಷಗಳ ನಂತರ 2011–12ನೇ ಸಾಲಿಗೆ ನನ್ನ ಆರನೇ ಈ ಆಯವ್ಯಯ ಮಂಡಿಸುವಾಗ ರಾಜ್ಯ ಯೋಜನಾ ತಲಾ ವೆಚ್ಚವು ಎರಡು ಪಟ್ಟು ಆಗಿದೆ. ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಲಾಗುತ್ತಿರುವಂತೆ, ಇತರ ಎಲ್ಲಾ ರಾಜ್ಯಗಳ ಯೋಜನಾ ತಲಾ ವೆಚ್ಚಕ್ಕಿಂತ ನಮ್ಮ ರಾಜ್ಯ ಯೋಜನಾ ತಲಾ ವೆಚ್ಚವು ಅತ್ಯಧಿಕವಾಗಿದೆ ಎಂಬುದನ್ನು ಸಹ ಗಮನಿಸಬೇಕು. ದೇಶದ ಎಲ್ಲಾ ರಾಜ್ಯಗಳ 2009–10ನೇ ಸಾಲಿನ 3,186 ರೂ.ಗಳ ಯೋಜನಾ ತಲಾ ವೆಚ್ಚಕ್ಕೆ ಹೋಲಿಸಿದಲ್ಲಿ ನಮ್ಮ ರಾಜ್ಯದ ಸಾಧನೆಯು 4,602 ರೂ.ಗಳಾಗಿದೆ.

ಮೂಲಭೂತ ಸೌಕರ್ಯ

23. ರಾಜ್ಯವು ತನ್ನ ಬೆಳವಣಿಗೆ ಸಾಮರ್ಥ್ಯವನ್ನು ಸಾಧಿಸುವಲ್ಲಿ ಮೂಲಭೂತಸೌಕರ್ಯವು ನಿರ್ಣಾಯಕ ಪಾತ್ರವನ್ನು ವಹಿಸಲಿದೆ. ನಗರ ಸಾರಿಗೆ, ರೈಲ್ವೆ, ಬಂದರುಗಳು, ವಿಮಾನ ನಿಲ್ದಾಣಗಳು, ಇಂಧನ, ಕೃಷಿ, ಕೈಗಾರಿಕೆ ಮುಂತಾದ ವಿವಿಧ ವಲಯಗಳಲ್ಲಿ ಮೂಲಭೂತ ಸೌಕರ್ಯಗಳಲ್ಲಿನ ಕೊರತೆಗಳನ್ನು ಸರ್ಕಾರ ಗುರುತಿಸಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ ಒಟ್ಟು 67,792 ಕೋಟಿ ರೂ.ಗಳ ಹಣಹೂಡಿಕೆ ಮಾಡುವ ಮೂಲಕ 91 ಯೋಜನೆಗಳನ್ನು ರೂಪಿಸಲಾಗಿದೆ. ಮೂಲಭೂತಸೌಕರ್ಯ ಅಭಿವೃದ್ಧಿಗಾಗಿ ಸರ್ಕಾರವು ಪರಿಸರ ಸ್ನೇಹಿ ಮತ್ತು ಆರ್ಥಿಕತೆಯ ದೃಷ್ಟಿಯಿಂದ ನ್ಯಾಯಯುತವಾದ ಮತ್ತು ಸಮಗ್ರವಾದ ಸುಸ್ಥಿರವಾದ ಕಾರ್ಯತಂತ್ರವನ್ನು

ಅನುಸರಿಸುತ್ತಿದೆ. ಈ ರೀತಿ ಕೈಗೊಂಡಿರುವ ಕೆಲವು ಪ್ರಮುಖ ಯೋಜನೆಗಳು ಕೆಳಗಿನಂತಿದೆ.

24. ಹೊಸ ರೈಲು ಮಾರ್ಗ ನಿರ್ಮಾಣ ಅಥವಾ ಗೇಜ್ ಪರಿವರ್ತನೆಯ 16 ಯೋಜನೆಗಳ ಒಟ್ಟು ವೆಚ್ಚದ ಶೇ.50ರಷ್ಟು ಹಣವನ್ನು ರಾಜ್ಯ ಸರ್ಕಾರವು ಭರಿಸುತ್ತಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಈ ಕೆಳಕಂಡ ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸಲಾಗಿದ್ದು, ರಾಜ್ಯ ಸರ್ಕಾರವು ತನ್ನ ಪಾಲಾದ 487 ಕೋಟಿ ರೂ.ಗಳನ್ನು ಒದಗಿಸಿದೆ.

- ಶೋಲಾಪುರ್ – ಗದಗ
- ಕೊಟ್ಟೂರು – ಹರಿಹರ
- ಶಿವಮೊಗ್ಗ – ತಾಳಗುಪ್ಪ

25. ಈಗ ಪ್ರಗತಿಯಲ್ಲಿರುವ ಪ್ರಮುಖ ರೈಲ್ವೆ ಕಾಮಗಾರಿಗಳಿಗೆ ಹಾಗೂ ಇತ್ತೀಚೆಗೆ ಅನುಮೋದಿಸಲ್ಪಟ್ಟ ಹೊಸ ಯೋಜನೆಗಳಿಗೆ ರಾಜ್ಯ ಸರ್ಕಾರದ ಪಾಲನ್ನು ನೀಡಲು 2011–12ನೇ ಸಾಲಿನಲ್ಲಿ 478 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

26. ಅಲ್ಲದೇ, ರಾಜ್ಯ ಸರ್ಕಾರವು ರೈಲ್ವೆ ಕೆಳಸೇತುವೆ ಮತ್ತು ರೈಲ್ವೆ ಮೇಲ್ಸೇತುವೆ ಯೋಜನೆಗಳ ವೆಚ್ಚದ ಪಾಲನ್ನು ಸಹ ಭರಿಸಲಿದ್ದು, ಅದಕ್ಕಾಗಿ 30 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗಿದೆ.

27. ಬಳ್ಳಾರಿ, ಗುಲ್ಬರ್ಗಾ, ಶಿವಮೊಗ್ಗ, ಬಿಜಾಪುರ ಮತ್ತು ಹಾಸನ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ ಕೈಗೊಳ್ಳಲಾಗುತ್ತಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣದ ವಿಸ್ತರಣೆಗಾಗಿ ಭೂ ಸ್ವಾಧೀನ ಕಾರ್ಯವು ಪ್ರಗತಿಯಲ್ಲಿದೆ ಮತ್ತು 2011–12ರಲ್ಲಿ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ವಿವಿಧ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ 120 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

28. ಮಂಗಳೂರು ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ 2011–12ನೇ ಸಾಲಿನಲ್ಲಿ 15 ಕೋಟಿ ರೂ.ಗಳನ್ನು ಒದಗಿಸಲಾಗುವುದು.

29. ಸುಸ್ಥಿರ ಕರಾವಳಿ ರಕ್ಷಣಾ ಮತ್ತು ನಿರ್ವಹಣಾ ಯೋಜನೆಗೆ ಒಟ್ಟು 941 ಕೋಟಿ ರೂ.ಗಳ ಹಣಕಾಸು ನೆರವನ್ನು ಒದಗಿಸಲು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಅನುಮೋದನೆ ನೀಡಿದೆ. 2011–12ನೇ ಸಾಲಿನಲ್ಲಿ ಉಲ್ಲಾಳದಲ್ಲಿ ಮೊದಲನೇ ಹಂತದ ಸಮುದ್ರ ಕೊರೆತ ತಡೆ ಕಾಮಗಾರಿಯನ್ನು 350 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇಷ್ಟೊಂದು ಭಾರಿ ಮೊತ್ತದ ಕಾಮಗಾರಿಯನ್ನು ರಾಜ್ಯದಲ್ಲಿ ಹಿಂದೆಂದು ಕೈಗೆತ್ತಿಕೊಂಡಿರುವುದಿಲ್ಲ.

30. ಕುಂದಾಪುರ ತಾಲ್ಲೂಕಿನ ಮರವಂತೆಯಲ್ಲಿ ಕೇರಳ ಮಾದರಿಯಲ್ಲಿ ಹೊರ ಬಂದರು ನಿರ್ಮಿಸಲು 45 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

ಇಂಧನ

31. ರಾಜ್ಯದಲ್ಲಿ 2009–10ನೇ ಸಾಲಿನಲ್ಲಿ 36,118 ಮಿಲಿಯನ್ ಯೂನಿಟ್‌ಗಳಷ್ಟಿದ್ದ ವಿದ್ಯುತ್ ಬಳಕೆ ಪ್ರಮಾಣವು 2010–11ನೇ ಸಾಲಿನಲ್ಲಿ 39,774 ಮಿಲಿಯನ್ ಯೂನಿಟ್‌ಗಳಿಗೆ ಹೆಚ್ಚಿದೆ. 2010–11ನೇ ಸಾಲಿನಲ್ಲಿ ಪ್ರತಿ ದಿನದ ದಟ್ಟಣೆಯ ಅವಧಿಯಲ್ಲಿನ ವಿದ್ಯುಚ್ಛಕ್ತಿ ಬಳಕೆಯು 160 ಮಿಲಿಯನ್ ಯುನಿಟ್‌ಗಿಂತಲೂ ಹೆಚ್ಚಾಗಿದೆ. ಬಳಕೆದಾರರಿಗೆ ಅಗತ್ಯವಿರುವಷ್ಟು ವಿದ್ಯುತ್‌ನ್ನು ಲಭ್ಯಪಡಿಸುವುದನ್ನು ಖಚಿತಪಡಿಸಲು ವಿದ್ಯುತ್ ವಿತರಣಾ ಸಂಸ್ಥೆಗಳು 2010–11ನೇ ಸಾಲಿನಲ್ಲಿ 31.2 ಮಿಲಿಯನ್ ಯುನಿಟ್ ವಿದ್ಯುಚ್ಛಕ್ತಿಯನ್ನು ಅಲ್ಪಾವಧಿಗೆ ಖಾಸಗಿ ವಿದ್ಯುತ್ ಉತ್ಪಾದಕರಿಂದ ಖರೀದಿಸಿವೆ. 2011–12ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮೂರು ವರ್ಷಗಳ ಅವಧಿಯೊಳಗೆ ವಾರ್ಷಿಕ ತಲಾ ವಿದ್ಯುತ್ ಲಭ್ಯತೆಯನ್ನು 680 ಯೂನಿಟ್‌ಗಳಿಂದ 1000 ಯೂನಿಟ್‌ಗಳಿಗೆ ಹೆಚ್ಚಿಸಲು ಯೋಜಿಸಲಾಗಿದೆ.

32. ಉಡುಪಿ ವಿದ್ಯುತ್ ನಿಗಮ ನಿಯಮಿತದ 600 ಮೆಗಾ ವ್ಯಾಟ್ ಮೊದಲ ಘಟಕ 2010ರಲ್ಲಿ ಕಾರ್ಯಾರಂಭವಾಗಿದೆ. ಒಟ್ಟು 3150 ಮೆಗಾ ವ್ಯಾಟ್ ಸ್ಥಾಪಿತ ಸಾಮರ್ಥ್ಯದ ಎರಮರಸ್, ಎಡ್ಲಾಪುರ ಮತ್ತು ಬಳ್ಳಾರಿ ವಿದ್ಯುತ್ ಯೋಜನೆಗಳಿಗಾಗಿ ಕಾರ್ಯಾದೇಶಗಳನ್ನು ಹೊರಡಿಸಲಾಗಿದೆ. ಈ ಸ್ಥಾವರಗಳಿಗೆ ತ್ವರಿತವಾಗಿ ಕಲ್ಲಿದ್ದಲು ಪೂರೈಕೆ ಸೌಕರ್ಯವನ್ನು ಒದಗಿಸುವಂತೆ

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿವೆ. ಕೂಡ್ಗಿ, ಜೇವರ್ಗಿ ಮತ್ತು ಚತ್ತೀಸ್‌ಘಡದಲ್ಲಿ ಒಟ್ಟು 6900 ಮೆಗಾ ವ್ಯಾಟ್ ಸ್ಥಾಪಿತ ಸಾಮರ್ಥ್ಯದ ಯೋಜನೆಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿದ್ದು, ಕೂಡ್ಗಿ ಮತ್ತು ಜೇವರ್ಗಿಯೋಜನೆಗಳಿಗಾಗಿ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ. ವಿತರಣಾ ಸಂಸ್ಥೆಗಳು ಕೂಡ್ಗಿ ವಿದ್ಯುತ್ ಯೋಜನೆಯಿಂದ ವಿದ್ಯುಚ್ಛಕ್ತಿ ಖರೀದಿಸಲು ಒಪ್ಪಂದ ಮಾಡಿಕೊಂಡಿದೆ.

33. ಚತ್ತೀಸ್‌ಘಡದಲ್ಲಿ 1600 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ ನಿರ್ಮಾಣಕ್ಕಾಗಿ ಈಗಾಗಲೇ 1260 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಉದ್ದೇಶಕ್ಕಾಗಿ ರೂ.141 ಕೋಟಿ ರೂ. ಪಾವತಿಸಲಾಗಿದೆ.

34. ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಹೊಸ ಯೋಜನೆಗಳಿಗೆ ಕಲ್ಲಿದ್ದಲು ಪೂರೈಕೆ ಆಗುತ್ತಿಲ್ಲ. ಆದ್ದರಿಂದ, ನಾನು ಕರ್ನಾಟಕಕ್ಕೆ 7,340 ಮೆಗಾ ವ್ಯಾಟ್ ವಿದ್ಯುಚ್ಛಕ್ತಿ ಉತ್ಪತ್ತಿಗೆ ಕಲ್ಲಿದ್ದಲು ಸರಬರಾಜು ಮಾಡಲು ರಾಜ್ಯವು ಸಲ್ಲಿಸಿರುವ ಎಲ್ಲಾ ಕೋರಿಕೆಗಳನ್ನು ಪುರಸ್ಕರಿಸಲು ಮನವಿ ಮಾಡುತ್ತೇನೆ. ರಾಜ್ಯಕ್ಕೆ ಅಗತ್ಯವಿರುವ ವಿದ್ಯುಚ್ಛಕ್ತಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಹೊರ ರಾಜ್ಯ ಹಾಗೂ ಹೊರ ದೇಶಗಳಿಂದ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವ ಹಾಗೂ ಕಲ್ಲಿದ್ದಲು ಗಣಿಗಳನ್ನು ಈಕ್ವಿಟಿ ಪಾಲುದಾರಿಕೆಯಲ್ಲಿ ತೆಗೆದುಕೊಳ್ಳುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ. ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸಲು ಖಾಸಗಿ ಸರಬರಾಜುದಾರರಿಂದ ವಿದ್ಯುತ್ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

35. ದಾಬೋಲ್‌ನಿಂದ ಬೆಂಗಳೂರಿಗೆ ಅನಿಲ ಕೊಳವೆಗಳನ್ನು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಅಳವಡಿಸುತ್ತಿದ್ದು, ಇದಕ್ಕಾಗಿ ಸರ್ಕಾರವು ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಬೆಂಗಳೂರು ನಗರದಲ್ಲಿ ಅನಿಲ ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ಬಂಡವಾಳ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಗ್ಯಾಸ್ ಅಥಾರಿಟಿ

ಆಫ್ ಇಂಡಿಯಾ ಲಿಮಿಟೆಡ್ ಜಂಟಿ ಸಹಯೋಗದಲ್ಲಿ ಕಂಪನಿಯೊಂದನ್ನು ರಚಿಸಲು ಒಪ್ಪಿಕೊಂಡಿವೆ.

36. ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುಚ್ಛಕ್ತಿ ಫೀಡರ್‌ಗಳನ್ನು ಪ್ರತ್ಯೇಕಿಸಲು ವಿದ್ಯುತ್ ವಿತರಣಾ ಸಂಸ್ಥೆಗಳಿಗೆ ಈಕ್ವಿಟಿ ನೆರವಾಗಿ 500 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಈ ಯೋಜನೆಯು ಸೆಪ್ಟೆಂಬರ್ 2012ರ ವೇಳೆಗೆ ಪೂರ್ಣಗೊಳ್ಳುವಂತೆ ಕಾರ್ಯಕ್ರಮ ರೂಪಿಸಲಾಗಿದೆ.

37. ಇಂಧನ ವಲಯಕ್ಕೆ 2010–11ನೇ ಸಾಲಿನಲ್ಲಿ 6,245 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದ್ದು, 2011–12ನೇ ಸಾಲಿನಲ್ಲಿ ಈ ಹಂಚಿಕೆಯನ್ನು 8,523 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ರಸ್ತೆಗಳು

38. ಸಾಕಷ್ಟು ಸಾಮರ್ಥ್ಯ ಮತ್ತು ಗುಣಮಟ್ಟವುಳ್ಳ ರಸ್ತೆ ಸಂಪರ್ಕ ಜಾಲವನ್ನು ಅಭಿವೃದ್ಧಿಪಡಿಸಿ ನಿರ್ವಹಿಸುವ ಒಂದು ದೊಡ್ಡ ಸವಾಲನ್ನು ರಾಜ್ಯವು ಹೊಂದಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ 28,059 ಕಿ.ಮೀ. ರಸ್ತೆ ನವೀಕರಣ ಮತ್ತು 8,900 ಕಿ.ಮೀ. ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಅಗಲೀಕರಣಗೊಳಿಸುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 4,000 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸುವ ಯೋಜನೆಗಳು ಪ್ರಗತಿಯಲ್ಲಿವೆ.

39. ರಾಜ್ಯ ಸರ್ಕಾರವು ಇತ್ತೀಚೆಗೆ 1,330 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಮುಂದಿನ 9 ಪ್ಯಾಕೇಜುಗಳಲ್ಲಿ 600 ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಸಾಲದ ಅನುಮೋದನೆಯನ್ನು ಪಡೆದುಕೊಂಡಿದೆ.

- ಮಾಗಡಿ – ಕೊರಟಗೆರೆ
- ಪಾವಗಡ – ಆಂಧ್ರಪ್ರದೇಶದ ಗಡಿ
- ಗುಬ್ಬಿ – ಮಂಡ್ಯ
- ಜಗಳೂರು ರಾಷ್ಟ್ರೀಯ ಹೆದ್ದಾರಿ 13 – ರಾಜ್ಯ ಹೆದ್ದಾರಿ 19
- ಪಡುಬಿದ್ರೆ – ಕಾರ್ಕಳ
- ದಾವಣಗೆರೆ – ಬೀರೂರು

- ಶೇಲ್ವಾಡಿ -- ಮುಂಡರಗಿ
- ಮುದಗಲ್ – ಗಂಗಾವತಿ
- ಸವದತ್ತಿ -- ಕಮತಗಿ

40. ವಿಶ್ವಬ್ಯಾಂಕ್ ಸಹ 657 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಈ ಕೆಳಕಂಡ 5 ಪ್ಯಾಕೇಜುಗಳಲ್ಲಿ 269 ಕಿ.ಮೀ. ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಹಣಕಾಸು ನೆರವು ನೀಡಲು ಒಪ್ಪಿಗೆ ಸೂಚಿಸಿದೆ. ಈ ಎಲ್ಲಾ ಪ್ಯಾಕೇಜುಗಳ ಕಾಮಗಾರಿಯು 2011–12ನೇ ಸಾಲಿನಲ್ಲಿ ಪ್ರಾರಂಭವಾಗುವ ಸಂಭವವಿದೆ.

- ಹೊಸಕೋಟೆ – ಚಿಂತಾಮಣಿ ಬೈಪಾಸ್
- ಹಾವೇರಿ – ತಡಸ್
- ಧಾರವಾಡ -- ಸವದತ್ತಿ
- ತಿಂತಣಿ – ಕಲ್ಮಲ
- ಚೌಡಾಪುರ – ಗುಲ್ಬರ್ಗಾ

41. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ 1,523 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೆಳಕಂಡ ನಾಲ್ಕು ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

- ಮಳವಳ್ಳಿ – ಪಾವಗಡ
- ಮುಧೋಳ – ನಿಪ್ಪಾಣಿ
- ಶಿವಮೊಗ್ಗ -- ಹಾನಗಲ್
- ಮನಗುಳಿ -- ದೇವಪುರ

42. 1,692 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮುಖಾಂತರ 702 ಕಿ.ಮೀ. ಉದ್ದದ 17 ಹೊಸ ರಸ್ತೆ ಕಾಮಗಾರಿಗಳನ್ನು ಮತ್ತು 20 ಹೊಸ ಸೇತುವೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

43. ಶಿವಮೊಗ್ಗದಲ್ಲಿ ವರ್ತುಲ ರಸ್ತೆ ನಿರ್ಮಾಣ ಕಾಮಗಾರಿಗಳಿಗಾಗಿ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು.

44. ಶಿವಮೊಗ್ಗ ವಿಮಾನ ನಿಲ್ದಾಣದಿಂದ ಶೃಂಗೇರಿ ಹಾಗೂ ರಂಭಾಪುರಿಯವರೆಗೆ ರಸ್ತೆ ಅಭಿವೃದ್ಧಿಗಾಗಿ 35 ಕೋಟಿ ರೂ.ಗಳನ್ನು ಒದಗಿಸಲಾಗುವುದು.

45. ಕೊಡಗು ಜಿಲ್ಲೆ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ 50 ಕೋಟಿ ರೂ.ಗಳನ್ನು ಒದಗಿಸಲಾಗುವುದು.

46. ರಾಜ್ಯದಲ್ಲಿ ರಸ್ತೆಗಳ ಸಮಗ್ರ ಅಭಿವೃದ್ಧಿಗಾಗಿ ಮತ್ತು ಸಂಪನ್ಮೂಲ ಕ್ರೋಢೀಕರಣಕ್ಕೆ ವಿಶೇಷ ಸಂಸ್ಥೆಯನ್ನು ರೂಪಿಸಲಾಗುವುದು.

ನಗರ ಮೂಲ ಸೌಕರ್ಯ

47. ನಗರಗಳ ಜನಸಂಖ್ಯೆಯಲ್ಲಿ ಆಗುತ್ತಿರುವ ಕ್ಷಿಪ್ರಗತಿಯ ಹೆಚ್ಚಳವನ್ನು ದೃಷ್ಟಿಯಲ್ಲಿಟ್ಟುಕೊಂಡು, ನಗರ ಮೂಲ ಸೌಕರ್ಯದ ಅಭಿವೃದ್ಧಿ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ವಿಶೇಷ ಗಮನ ನೀಡುವ ಅಗತ್ಯವಿದೆ. ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಿರುವ ಸರ್ಕಾರದ ಅನುದಾನದ ಜೊತೆಗೆ ಖಾಸಗಿ ಬಂಡವಾಳ, ಬಳಕೆದಾರರ ಶುಲ್ಕಗಳು ಮತ್ತು ಹಣಕಾಸು ಸಂಸ್ಥೆಗಳ ನೆರವನ್ನು ಒದಗಿಸಿಕೊಳ್ಳಬೇಕಾಗಿದೆ. ಪ್ರಸ್ತುತ, 7,500 ಕೋಟಿ ರೂ.ಗಳ ಒಟ್ಟು ಬಂಡವಾಳ ಹೂಡಿಕೆಗೆ ಬಾಹ್ಯ ಏಜೆನ್ಸಿಗಳಿಂದ ಹಣಕಾಸು ನೆರವು ಪಡೆದು ನಾಲ್ಕು ಪ್ರಮುಖ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳಡಿ ಬೆಂಗಳೂರಿನಲ್ಲಿ ಸುಮಾರು 4,500 ಕೋಟಿ ರೂ.ಗಳ ಬಂಡವಾಳ ಮತ್ತು ಉತ್ತರ ಕರ್ನಾಟಕದ ನಗರ ಮತ್ತು ಪಟ್ಟಣಗಳಲ್ಲಿ 2,000 ಕೋಟಿ ರೂ.ಗಳ ಬಂಡವಾಳ ಹೂಡಿಕೆಯೂ ಸೇರಿದೆ. ತೆರಿಗೆ ರಹಿತ ಮುನ್ಸಿಪಲ್ ಬಾಂಡುಗಳು ಮತ್ತು ಮಾರುಕಟ್ಟೆಯಿಂದ ನೇರ ಸಾಲ ಎತ್ತುವ ಮುಖಾಂತರ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮವು ಸಹ ನಿಧಿಗಳನ್ನು ಸಂಗ್ರಹಿಸುವುದು.

48. **ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ:** ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ನಗರ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ನಗರ ಸ್ಥಳೀಯ ಸಂಸ್ಥೆಗಳು 1,013 ಕೋಟಿ ರೂ.ಗಳನ್ನು ಬಳಸಿಕೊಂಡಿವೆ. 2008–09ನೇ ಸಾಲಿನಲ್ಲಿ ಪ್ರತಿ ಮಹಾನಗರ ಪಾಲಿಕೆಗೆ ಮಂಜೂರು

ಮಾಡಲಾಗಿದ್ದ 100 ಕೋಟಿ ರೂ.ಗಳ ಅಭಿವೃದ್ಧಿ ಪ್ಯಾಕೇಜನ್ನು ಬಹುತೇಕ ಅನುಷ್ಠಾನಗೊಳಿಸಲಾಗಿದೆ. ತುಮಕೂರು ನಗರಕ್ಕೂ ಸಹ ಇದೇ ರೀತಿಯ ಪ್ಯಾಕೇಜನ್ನು 2010–11ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ. 2009–10ನೇ ಸಾಲಿನಲ್ಲಿ ಇತರ ನಗರ ಸ್ಥಳೀಯ ಸಂಸ್ಥೆಗಳು ಮೂರು ವರ್ಷಗಳ ಅವಧಿಯ ಪ್ಯಾಕೇಜ್‌ನಡಿ ಪ್ರಾರಂಭಿಸಲಾಗಿರುವ ಒಟ್ಟು 1,400 ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು 2011–12ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಈ ಯೋಜನೆಗೆ ಹಂಚಿಕೆಯನ್ನು 2011–12ನೇ ಸಾಲಿನಲ್ಲಿ 750 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

49. ಚಿಕ್ಕೋಡಿ ಮತ್ತು ಚನ್ನಪಟ್ಟಣ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

50. ನಾಗರೀಕರಿಗೆ ಸುಖಕರ, ಅನುಕೂಲಕರ, ತ್ವರಿತ ಮತ್ತು ಕೈಗೆಟಕುವ ದರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ದೃಷ್ಟಿಯಿಂದ ಹಲವು ರೀತಿಯ ಸಮೂಹ ಸಾರಿಗೆ ವ್ಯವಸ್ಥೆಗಳನ್ನು ಒದಗಿಸುವ ಅಗತ್ಯವಿದೆ. ಮೈಸೂರು ನಗರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಿಸ್ತೃತ ಸಾರಿಗೆ ವ್ಯವಸ್ಥೆಯನ್ನು ದಕ್ಷ ರೀತಿಯಲ್ಲಿ ನಿರ್ವಹಿಸುತ್ತಿದೆ. ಹುಬ್ಬಳ್ಳಿ–ಧಾರವಾಡ ಮತ್ತು ಮೈಸೂರು ನಗರಗಳಲ್ಲಿ ಒಟ್ಟು 500 ಕೋಟಿ ರೂ.ಗಿಂತ ಅಧಿಕ ಬಂಡವಾಳ ಹೂಡಿಕೆ ಮಾಡಿ ಬಸ್ ಕ್ಷಿಪ್ರಸಾರಿಗೆ ವ್ಯವಸ್ಥೆಯನ್ನು ರೂಪಿಸಲು ತಾಂತ್ರಿಕ ಮತ್ತು ಆರ್ಥಿಕ ಯೋಜನಾ ವರದಿಗಳನ್ನು ತಯಾರಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

51. **ನಗರ ಸಾರಿಗೆ ನಿಧಿ:** ನಗರ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ವಾರ್ಷಿಕ 60 ಕೋಟಿ ರೂ.ಗಳ ಸಹಾಯದೊಂದಿಗೆ ರಾಜ್ಯ ಮಟ್ಟದ ನಗರ ಸಾರಿಗೆ ನಿಧಿಯೊಂದನ್ನು ಸ್ಥಾಪಿಸಲಾಗುವುದು. ಈ ನಿಧಿಗೆ ತಲಾ 20 ಕೋಟಿ ರೂ.ಗಳನ್ನು ಕ್ರಮವಾಗಿ ಆಯವ್ಯಯದಿಂದ, ನಗರ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಸ್ಥಳೀಯ ತೆರಿಗೆಗಳ ಮೇಲೆ ಮೇಲುಕರದಿಂದ ಹಾಗೂ ಮೋಟಾರು ವಾಹನ ತೆರಿಗೆಗಳ ಮೇಲೆ ಮೇಲುಕರ ವಿಧಿಸುವ ಮೂಲಕ ಹಣವನ್ನು ಒದಗಿಸಲಾಗುವುದು.

ಬೆಂಗಳೂರು ನಗರದ ಅಭಿವೃದ್ಧಿ

52. ಸುಮಾರು 8 ದಶಲಕ್ಷ ಜನಸಂಖ್ಯೆ ಹೊಂದಿರುವ ಬೆಂಗಳೂರು ಏಷ್ಯಾದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಒಂದು ನಗರವಾಗಿದೆ. ನಗರೀಕರಣವು ಸಂಚಾರ ಮತ್ತು ದಟ್ಟಣೆಯಂತಹ ಸಮಸ್ಯೆಗಳನ್ನು ತಂದೊಡ್ಡಿದೆ. ಬೆಂಗಳೂರಿನಲ್ಲಿ ಸಾರಿಗೆ ಮೂಲ ಸೌಲಭ್ಯಗಳ ಸುಧಾರಣೆ ಮಾಡುವುದು ಮತ್ತು ಉತ್ತಮ ಮಟ್ಟದ ಜೀವನವನ್ನು ಒದಗಿಸುವುದು ಸರ್ಕಾರದ ಪ್ರಯತ್ನವಾಗಿರುತ್ತದೆ.

53. **ಬೆಂಗಳೂರು ಮೆಟ್ರೋ:** 42.3 ಕಿ.ಮೀ. ಒಳಗೊಂಡ ಪ್ರತಿಷ್ಠಿತ ಬೆಂಗಳೂರು ಮೆಟ್ರೋ ಯೋಜನೆಯ ಮೊದಲ ಹಂತ 2013ನೇ ಜೂನ್ ವೇಳೆಗೆ ಪೂರ್ಣಗೊಳ್ಳುವುದು. ಆಶ್ವಾಸನೆಯಂತೆ, ಬೈಯಪ್ಪನಹಳ್ಳಿಯಿಂದ ಮಹಾತ್ಮ ಗಾಂಧಿ ರಸ್ತೆವರೆಗಿನ ರೀಚ್–1ನ್ನು ಈ ವರ್ಷದ ಏಪ್ರಿಲ್ 4ರಂದು ವಾಣಿಜ್ಯ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು. ರಾಜ್ಯವು ಈ ಯೋಜನೆಗೆ ಆರ್ಥಿಕ ಸಹಾಯವಾಗಿ 2600 ಕೋಟಿ ರೂ.ಗಿಂತಲೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿದೆ. ಸುಮಾರು 71 ಕಿ.ಮೀ ದೂರದ 6 ಮಾರ್ಗಗಳ ಬೆಂಗಳೂರು ಮೆಟ್ರೋ ಎರಡನೇ ಹಂತಕ್ಕೆ ಸರ್ಕಾರವು ತಾತ್ವಿಕ ಅನುಮೋದನೆಯನ್ನು ನೀಡಿದೆ. ಮೆಟ್ರೋದ ಮೊದಲ ಹಂತವನ್ನು ಪೂರ್ಣಗೊಳಿಸಲು ಮುಂಗಡ ಪತ್ರದಲ್ಲಿ 683 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

54. ಬೆಂಗಳೂರು ನಗರದಲ್ಲಿ ಎರಡು ಕಾರಿಡಾರ್‌ಗಳಿಗೆ ಮೋನೋ ರೈಲು ಅಥವಾ ಹಗುರ ರೈಲು ಸಾರಿಗೆ ವ್ಯವಸ್ಥೆಗೆ ಸವಿವರ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಅವುಗಳೆಂದರೆ, ಹೆಬ್ಬಾಳದಿಂದ ಜೆಪಿ ನಗರದವರೆಗೆ 31 ಕಿ.ಮೀ. ಮತ್ತು ಪೆರಿಫೆರಲ್ ರಿಂಗ್‌ರೋಡ್‌ನಿಂದ ಮಾಗಡಿ ರಸ್ತೆಯ ಮೂಲಕ ಟೋಲ್‌ಗೇಟ್‌ವರೆಗೆ 9 ಕಿ.ಮೀ.

55. ಬೆಂಗಳೂರಿನ ಸಮಗ್ರ ಸಂಚಾರ ಮತ್ತು ಸಾಗಣೆ ಯೋಜನೆಯಡಿ ನಗರದಲ್ಲಿ ಪ್ರಯಾಣಿಕರ ರೈಲು ವ್ಯವಸ್ಥೆಯನ್ನು ರೂಪಿಸುವ ಅಗತ್ಯತೆಯನ್ನು ಗುರುತಿಸಲಾಗಿದೆ. ಹೊರವಲಯದಲ್ಲಿ ನೆಲೆಸಿರುವ ಜನರು ಬೆಂಗಳೂರಿನ

ವ್ಯಾಪಾರ ಕೇಂದ್ರಕ್ಕೆ ಶೀಘ್ರವಾಗಿ ಹೋಗಿಬರಲು ಅನುವಾಗುವಂತೆ ಬೆಂಗಳೂರಿನಿಂದ ದೇವನಹಳ್ಳಿ, ಆನೇಕಲ್, ಮಾಲೂರು, ರಾಮನಗರ, ನೆಲಮಂಗಲದವರೆಗೆ ರೈಲು ಸೇವೆ ಒದಗಿಸುವುದಕ್ಕಾಗಿ ಸರ್ಕಾರವು ರೈಲ್ವೇ ಸಚಿವಾಲಯದ ಅನುಮತಿಯನ್ನು ಕೋರಿದೆ. ಈ ಯೋಜನೆಗೆ ರಾಜ್ಯ ಸರ್ಕಾರವು ತನ್ನ ಪಾಲನ್ನು ಭರಿಸಲಿದೆ.

56. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಯಶಸ್ವಿಯಾಗಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದು ದೇಶದಲ್ಲಿ ಇದಕ್ಕೆ ಸಾದೃಶ್ಯವಾಗಿರುವಂಥವುಗಳು ಬಹಳ ಕಡಿಮೆ. ಆದಾಗ್ಯೂ, ಸೀಮಿತ ರಸ್ತೆ ಮೂಲ ಸೌಕರ್ಯಗಳಿಂದಾಗಿ ಪ್ರಯಾಣದ ವೇಗ ಒಂದು ಮುಖ್ಯ ಸವಾಲಾಗಿದೆ. ಬೆಂಗಳೂರಿನ ನಿವಾಸಿಗಳಿಗೆ ಸುಸ್ಥಿರ ಮತ್ತು ಪರ್ಯಾಯ ಸಾರಿಗೆ ಪರಿಹಾರವನ್ನು ಒದಗಿಸುವುದಕ್ಕಾಗಿ, ಹೆಬ್ಬಾಳದಿಂದ ಕೇಂದ್ರ ರೇಷ್ಮೆ ಮಂಡಳಿಯವರೆಗೆ ಒಟ್ಟು 550 ಕೋಟಿ ರೂ.ಗಳ ವೆಚ್ಚದಲ್ಲಿ ಬೆಂಗಳೂರು ಕ್ಷಿಪ್ರ ಬಸ್ ಸಾರಿಗೆ ವ್ಯವಸ್ಥೆಯನ್ನು ರೂಪಿಸಲಾಗಿದೆ. ಈ ಯೋಜನೆಗೆ ಸರ್ಕಾರವು 2011–12ನೇ ಸಾಲಿನಲ್ಲಿ 25 ಕೋಟಿ ರೂ.ಗಳನ್ನು ಒದಗಿಸಲಿದೆ.

57. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಟ್ಟು 3,384 ಕೋಟಿ ರೂ.ಗಳ ಯೋಜನಾ ವೆಚ್ಚದಲ್ಲಿ ಕಾವೇರಿ ನೀರು ಸರಬರಾಜು ಯೋಜನೆ ಹಂತ–4, ಘಟಕ–2ನ್ನು ಅನುಷ್ಠಾನಗೊಳಿಸುತ್ತಿದೆ. ಯೋಜನೆ ಪೂರ್ಣಗೊಂಡ ಮೇಲೆ ಮಾರ್ಚ್ 2012ರ ವೇಳೆಗೆ 500 ಎಂಎಲ್‌ಡಿ ನೀರು 12 ಲಕ್ಷಕ್ಕೂ ಹೆಚ್ಚು ಜನರಿಗೆ ಲಭ್ಯವಾಗಲಿದೆ. ಇದರಲ್ಲಿ ಹೊಸದಾಗಿ ಸೇರ್ಪಡೆಗೊಂಡಿರುವ 7 ನಗರಸಭೆಗಳು, 1 ಪುರಸಭೆ ಹಾಗೂ 110 ಗ್ರಾಮಗಳು ಒಳಗೊಳ್ಳುತ್ತವೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಆಯವ್ಯಯದಲ್ಲಿ 1,150 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

58. ನಮ್ಮ ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ಪ್ರಾರಂಭಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2011–12ನೇ ಸಾಲಿನಲ್ಲಿ 350 ಕೋಟಿ ರೂ.ಗಳನ್ನು ಒದಗಿಸಲಿದೆ.

- ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಜೆ.ಸಿ. ರಸ್ತೆ ಮೂಲಕ ಮೇಲಂತಸ್ತಿನ ರಸ್ತೆ ನಿರ್ಮಾಣ;
- ಕಾರ್ಡ್ ರಸ್ತೆ, ಫೌಂಟೇನ್ ವೃತ್ತ, ಕನಕಪುರ – ಹೊರ ವರ್ತುಲ ಕೂಡು ರಸ್ತೆ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತಗಳಲ್ಲಿ ಮೇಲು ರಸ್ತೆ ಮತ್ತು ಕೆಳ ರಸ್ತೆಗಳ ನಿರ್ಮಾಣ;
- 10 ವಾಹನ ನಿಲ್ದಾಣಗಳ ನಿರ್ಮಾಣ;
- ತ್ಯಾಜ್ಯವಸ್ತು ವಿಲೇಗಾಗಿ ಮೂಲಭೂತ ಸೌಕರ್ಯ ನಿರ್ಮಾಣ.

59. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2011–12ನೇ ಸಾಲಿನಲ್ಲಿ 750 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಿದೆ. ಕೆಂಪೇಗೌಡ ಬಡಾವಣೆ, ಅರ್ಕಾವತಿ ಬಡಾವಣೆ ಮತ್ತು ಡಾ: ಶಿವರಾಮ ಕಾರಂತ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳು ಹಾಗೂ ಮನೆಗಳನ್ನು ವಿತರಣೆ ಮಾಡಲಾಗುವುದು. ರಾಜ್ಯ ಸರ್ಕಾರವು ಶ್ರೀ ದೇವರಾಜ ಅರಸು ಬಡಾವಣೆ, ಶ್ರೀ ನಿಜಲಿಂಗಪ್ಪ ಬಡಾವಣೆ ಮತ್ತು ಶ್ರೀ ಕೆ.ಸಿ.ರೆಡ್ಡಿ ಬಡಾವಣೆ ರೂಪಿಸಲು ಅನುಮೋದನೆ ನೀಡಿದೆ. ಆರ್ಥಿಕ ದುರ್ಬಲ ವರ್ಗದವರಿಗಾಗಿ 30,000 ಮನೆಗಳನ್ನು ನಿರ್ಮಿಸಿ ವಿತರಿಸಲಾಗುವುದು. 29 ಕೆರೆಗಳನ್ನು ಪುನರುಜ್ಜೀವನಗೊಳಿಸಲಾಗುವುದು ಮತ್ತು ಅಭಿವೃದ್ಧಿ ಪಡಿಸಲಾಗುವುದು. ಇದರ ಜೊತೆಗೆ 12 ಉದ್ಯಾನವನಗಳು ಮತ್ತು ಮನೋರಂಜನಾ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುವುದು. 8 ಎಕರೆ ಪ್ರದೇಶದಲ್ಲಿ ಶಿಲ್ಪಕಲಾ ಉದ್ಯಾನವನವನ್ನು ನಿರ್ಮಿಸಲಾಗುತ್ತಿದ್ದು, ಇದು ದೇಶದಲ್ಲಿಯೇ ಮೊಟ್ಟಮೊದಲನೆಯದಾಗಿದೆ.

60. ಬೆಂಗಳೂರು ನಗರವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ರಾಜಧಾನಿಯಾಗಿದ್ದು, ಭಾರತದ ಸಿಲಿಕಾನ್ ವ್ಯಾಲಿಯೆಂದು ಪ್ರಸಿದ್ಧವಾಗಿದ್ದರೂ ಸಹ, ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳನ್ನು ಆಯೋಜಿಸಲು ಅಗತ್ಯ ಸೌಲಭ್ಯಗಳಿರುವುದಿಲ್ಲ. ಆದುದರಿಂದ ಬೆಂಗಳೂರು ವಿಮಾನ ನಿಲ್ದಾಣದ ಬಳಿ 150 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಲ್ಲಿ ಮುಂದಿನ 15 ತಿಂಗಳಿನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ಸಹಯೋಗದೊಂದಿಗೆ ಒಂದು ಅಂತರರಾಷ್ಟ್ರೀಯ ಸಮ್ಮೇಳನ ಕೇಂದ್ರವನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

61. ದೇವನಹಳ್ಳಿಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿ ಒಟ್ಟು 5,000 ಕೋಟಿ ರೂ.ಗಳಿಗೂ ಹೆಚ್ಚಿನ ಬಂಡವಾಳವನ್ನು ತೊಡಗಿಸಿ, 230 ಎಕರೆ ಪ್ರದೇಶದಲ್ಲಿ ಒಂದು ಬಿಸ್‌ನೆಸ್ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದೆ.

62. ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ವಸತಿಯಿಂದಾಗಿ, ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ 4 ಆಧುನಿಕ ಬೃಹತ್ ಆಸ್ಪತ್ರೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು.

63. ಬಿ.ಬಿ.ಎಂ.ಪಿ. ಕಛೇರಿಯಲ್ಲಿ ಯೋಜನಾ ಕಾಮಗಾರಿಗಳ, ವಿನ್ಯಾಸ ಮತ್ತು ಅನುಷ್ಠಾನಗಳಲ್ಲಿ ಕಾರ್ಯಕ್ಷಮತೆ ಮತ್ತು ಪಾರದರ್ಶಕತೆ ಹೆಚ್ಚಿಸಲು ಯೋಜನಾ ನಿರ್ವಹಣೆ ಘಟಕವನ್ನು ಸ್ಥಾಪಿಸಲಾಗುವುದು.

64. ಒಟ್ಟಾರೆ ಬೆಂಗಳೂರು ನಗರದ ಅಭಿವೃದ್ಧಿಗಾಗಿ ಎಲ್ಲಾ ಮೂಲಗಳಿಂದ ಸುಮಾರು 4,770 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ. ಇದರಿಂದಾಗಿ, ಬೆಂಗಳೂರು ನಗರದ ಬೆಳವಣಿಗೆಗೆ ಅವಶ್ಯವಿರುವ ಮೂಲಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

ಗ್ರಾಮೀಣ ಅಭಿವೃದ್ಧಿ

65. ಗ್ರಾಮೀಣ ಅಭಿವೃದ್ಧಿಗಾಗಿ ಈ ಆಯವ್ಯಯದಲ್ಲಿ ಅನುದಾನವನ್ನು 4,385 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುತ್ತಿದೆ. ಈ ಅನುದಾನವು ಕುಡಿಯುವ ನೀರು, ಉದ್ಯೋಗ ಸೃಜನೆ, ಇತ್ಯಾದಿ ಹಲವಾರು ಯೋಜನೆಗಳಿಗಾಗಿ ಭಾರತ ಸರ್ಕಾರದಿಂದ ಬರುವ ಅನುದಾನಗಳಿಗೆ ಪೂರಕವಾಗಿರುತ್ತದೆ. ಇದರಿಂದಾಗಿ ಗ್ರಾಮೀಣ ಅಭಿವೃದ್ಧಿಗಾಗಿ ಮುಂದಿನ ವರ್ಷದ ಹಂಚಿಕೆಯು 8,500 ಕೋಟಿ ರೂ. ಮೀರುವ ಸಾಧ್ಯತೆಯಿದೆ. 2011-12ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳಿಗಾಗಿ 1,000 ಕೋಟಿ ರೂ. ಮತ್ತು ಕುಡಿಯುವ ನೀರಿಗಾಗಿ 1,250 ಕೋಟಿ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

66. ಗ್ರಾಮಗಳಲ್ಲಿ ಮೂಲಸೌಕರ್ಯ ಸೌಲಭ್ಯಗಳನ್ನು ಉತ್ತಮಪಡಿಸಲು ಸುವರ್ಣ ಗ್ರಾಮೋದಯ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನ

ಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಈವರೆವಿಗೂ 1,061 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. 1,121 ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 2010–11ರಲ್ಲಿ 250 ಕೋಟಿ ರೂ.ಗಳನ್ನು ಈಗಾಗಲೇ ವೆಚ್ಚ ಮಾಡಲಾಗಿದ್ದು, 2011–12ನೇ ಸಾಲಿನಲ್ಲಿಯೂ ಸಹ ಮುಂದುವರೆಸಲಾಗುವುದು ಹಾಗೂ ಈ ಉದ್ದೇಶಕ್ಕಾಗಿ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು.

67. 2010–11ರಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 655 ಕೋಟಿ ರೂ.ಗಳನ್ನು ವಿನಿಯೋಗಿಸಿ 1,294 ಕಿ.ಮೀ. ರಸ್ತೆಯನ್ನು ಪೂರ್ಣಗೊಳಿಸಲಾಗಿದೆ.

68. ರಾಜ್ಯದ ಗ್ರಾಮೀಣ ರಸ್ತೆಗಳನ್ನು ಏಕರೂಪದಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ, ಸರ್ಕಾರವು 189 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 20 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿದೆ.

69. ಧಾರವಾಡದಲ್ಲಿರುವ ಸೆಂಟರ್ ಫಾರ್ ಮಲ್ಟಿ ಡಿಸಿಪ್ಲಿನರಿ ರೀಸರ್ಚ್ (CMDR) ಸಂಸ್ಥೆಯಲ್ಲಿ ಅಬ್ದುಲ್ ನಜೀರ್ ಸಾಬ್‌ರವರ ಹೆಸರಿನಲ್ಲಿ ಪಂಚಾಯತ್ ರಾಜ್ ಪೀಠ ಸ್ಥಾಪಿಸಲು ಏಕಕಾಲಿಕ ಅನುದಾನವಾಗಿ 1 ಕೋಟಿ ರೂ.ಗಳನ್ನು ನೀಡಲಾಗುವುದು.

70. **ಆಸರೆ:** ಪ್ರವಾಹ ಪೀಡಿತ ಗ್ರಾಮಗಳಿಗೆ ಪುನರ್ವಸತಿ ಕಲ್ಪಿಸುವ 'ಆಸರೆ' ಕಾರ್ಯಕ್ರಮದಡಿ ಸಾಧಿಸಲಾದ ಯಶಸ್ಸಿನ ಬಗ್ಗೆ ತಿಳಿಸುವುದು ನನಗೆ ಅತ್ಯಂತ ತೃಪ್ತಿಕರವಾದ ಸಂಗತಿಯಾಗಿದೆ. ಈ ಯೋಜನೆಯನ್ನು 297 ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದ್ದು, ಈ ಗ್ರಾಮಗಳ ಪುನರ್ವಸತಿಗಾಗಿ ಬೇಕಾಗಿರುವ ಒಟ್ಟು 5,610 ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ಒಟ್ಟು 57,675 ಮನೆಗಳ ಪೈಕಿ 47,626 ಮನೆಗಳ ಕೆಲಸ ಪ್ರಗತಿಯಲ್ಲಿದ್ದು, ಈ ಪೈಕಿ 15,800 ಮನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ ಮತ್ತು ಮಾರ್ಚ್ 2011ರ ವೇಳೆಗೆ 32,400 ಮನೆಗಳನ್ನು ಪೂರ್ಣಗೊಳಿಸಲಾಗುವುದು. ಬಾಕಿ ಮನೆಗಳನ್ನು ಮೇ 2011ರ ವೇಳೆಗೆ ಪೂರ್ಣಗೊಳಿಸಲಾಗುವುದು. ಗ್ರಾಮಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಸಲುವಾಗಿ 170 ಕೋಟಿ ರೂ.ಗಳ ಹಣವನ್ನು ಖರ್ಚು

ಮಾಡಲಾಗುವುದು. ಈ ಪೈಕಿ 50 ಕೋಟಿ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

71. ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ.50ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಿರುವ ಕಾರಣದಿಂದ ಮುಂಬರುವ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸಬಹುದು. ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಗೌರವಧನವನ್ನು ಕ್ರಮವಾಗಿ 3000, 2250 ಮತ್ತು 1500 ರೂ.ಗಳಿಗೆ ಹೆಚ್ಚಿಸಲಾಗುವುದು. ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರಿಗೆ ಗೌರವ ಧನವನ್ನು ಕ್ರಮವಾಗಿ 2250, 1500 ಮತ್ತು 750 ರೂ.ಗಳಿಗೆ ಹೆಚ್ಚಿಸಲಾಗುವುದು.

ಮೂರನೇ ರಾಜ್ಯ ಹಣಕಾಸು ಆಯೋಗ

72. ಮೂರನೇ ರಾಜ್ಯ ಹಣಕಾಸು ಆಯೋಗದ ಆರ್ಥಿಕ ಶಿಫಾರಸ್ಸುಗಳನ್ನು ಈ ಮುಂಗಡ ಪತ್ರ ರೂಪಿಸುವ ಸಂದರ್ಭದಲ್ಲಿ ಪರಿಗಣಿಸಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ನಿಧಿಗಳನ್ನು ಪ್ರಾಪ್ತಗೊಳಿಸುವ ಪ್ರಮಾಣವನ್ನು ರಾಜ್ಯದ ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯ (NLNORR) ಶೇ.42ಕ್ಕೆ ಹೆಚ್ಚಿಸಲಾಗುವುದೆಂಬುದನ್ನು ಪ್ರಕಟಿಸಲು ನನಗೆ ಸಂತೋಷವೆನಿಸುತ್ತದೆ. ಈ ಪ್ರಾಪ್ತಿಯು ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ವೇತನ ಹಾಗೂ ಇನ್ನಿತರೆ ಖರ್ಚುಗಳನ್ನು ಒಳಗೊಂಡಿರುತ್ತದೆ. ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಪರಿಗಣಿಸಿ, ಶೇ.42ರ ಪ್ರಾಪ್ತಿಯ ಗುರಿಯನ್ನು ನಿಗದಿತ ಅವಧಿಯಲ್ಲಿ ಹಂತ ಹಂತವಾಗಿ ಸಾಧಿಸಲಾಗುವುದು.

73. ಸ್ಥಳೀಯ ನಗರ ಸಂಸ್ಥೆಗಳ ಪಾಲನ್ನು, 2011–12ನೇ ಸಾಲಿನಲ್ಲಿ ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಯ ಪ್ರಸ್ತುತ ಶೇ.8 ರಿಂದ ಶೇ.8.5 ರವರೆಗೆ ಹೆಚ್ಚಿಸಲಾಗುತ್ತದೆ. ಗ್ರಾಮ ಪಂಚಾಯತಿಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು 6 ಲಕ್ಷದಿಂದ 8 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗುತ್ತಿದೆ. ಪ್ರತಿ ತಾಲ್ಲೂಕು ಪಂಚಾಯಿತಿಗೆ ವಾರ್ಷಿಕ 1 ಕೋಟಿ ರೂ.ಗಳ ಅನಿರ್ಬಂಧಿತ ಅನುದಾನವನ್ನು ಒದಗಿಸಲಾಗುವುದು.

ಪ್ರದೇಶಾಭಿವೃದ್ಧಿ

74. ಡಾ: ನಂಜುಂಡಪ್ಪ ವರದಿಯ ಆಧಾರದ ಮೇಲೆ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಆಯವ್ಯಯದಿಂದ ಅನುದಾನವನ್ನು ಮೀಸಲಿರಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 4,605 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. 2011–12ನೇ ಸಾಲಿನಲ್ಲಿ 2,975 ಕೋಟಿ ರೂ.ಗಳನ್ನು ಒದಗಿಸಲಾಗುವುದು.

75. ರಾಜ್ಯದ ಪ್ರಾದೇಶಿಕ ಅಸಮಾನತೆಗಳನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರವು ನಿರ್ದಿಷ್ಟ ಪ್ರದೇಶಗಳ ಅಭಿವೃದ್ಧಿಗೂ ಸಹ ವಿಶೇಷ ಒತ್ತು ನೀಡುತ್ತಿದೆ. 2010–11ನೇ ಸಾಲಿನಲ್ಲಿ ಒಟ್ಟು 63 ಕೋಟಿ ರೂ.ಗಳನ್ನು ಒದಗಿಸಿದ್ದು, 2011–12ನೇ ಸಾಲಿನಲ್ಲಿ ಇದನ್ನು 114 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಇವುಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 45 ಕೋಟಿ ರೂ.ಗಳನ್ನು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 34 ಕೋಟಿ ರೂ.ಗಳನ್ನು, ಗಡಿ ಪ್ರದೇಶಾಭಿವೃದ್ಧಿ ಮಂಡಳಿಗೆ 15 ಕೋಟಿ ರೂ.ಗಳನ್ನು, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 10 ಕೋಟಿ ರೂ.ಗಳನ್ನು ಮತ್ತು ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ 10 ಕೋಟಿ ರೂ.ಗಳನ್ನು ನೀಡಲಾಗುವುದು.

76. ಸರ್ಕಾರವು ಶಾಸಕರ ಕ್ಷೇತ್ರಾಭಿವೃದ್ಧಿ ಯೋಜನೆಗಾಗಿ 794 ಕೋಟಿ ರೂ.ಗಳನ್ನು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿದ್ದು, 2011–12ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.300 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.

77. ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗಾಗಿ ಹೊಸದಾಗಿ ರಚಿಸಿರುವ ಯಾದಗಿರಿ ಜಿಲ್ಲೆಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ತಲಾ 50 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಒದಗಿಸಲಾಗುವುದು.

78. ಶಿವಮೊಗ್ಗ ಜಿಲ್ಲೆಯ ಅಂಜನಾಪುರ ಜಲಾಶಯಕ್ಕೆ ಹೋಗುವ ರಸ್ತೆ, ಉದ್ಯಾನವನದ ಅಭಿವೃದ್ಧಿ ಮತ್ತು ದೋಣಿ ವಿಹಾರ ಸೌಲಭ್ಯ ಒದಗಿಸಲು 10 ಕೋಟಿ ರೂ. ಅನುದಾನವನ್ನು ನೀಡಲಾಗುವುದು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

79. ಸರ್ವ ಶಿಕ್ಷಣ ಅಭಿಯಾನಕ್ಕಾಗಿ 2011–12ನೇ ಸಾಲಿನಲ್ಲಿ ಒಟ್ಟು ವೆಚ್ಚವಾಗಿ 900 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಅನುದಾನಕ್ಕೆ ಪೂರಕವಾಗಿ 394 ಕೋಟಿ ರೂ.ಗಳನ್ನು ಒದಗಿಸಿದೆ.

80. "ನಲಿ-ಕಲಿ" ಕಾರ್ಯಕ್ರಮವು ಜನಪ್ರಿಯವಾಗಿದ್ದು, ಉತ್ತಮ ಫಲಿತಾಂಶ ಬರುತ್ತಿರುವುದರಿಂದ ಈ ಯೋಜನೆಯನ್ನು 3ನೇ ತರಗತಿಯ ವಿದ್ಯಾರ್ಥಿಗಳಿಗೂ ಸಹ ವಿಸ್ತರಿಸಲಾಗಿದೆ. ರಾಜ್ಯದಲ್ಲಿ 7 ಲಕ್ಷ ಮಕ್ಕಳು ಈ ಯೋಜನೆಯ ಪ್ರಯೋಜನ ಪಡೆಯಲಿದ್ದಾರೆ. ಈ ಕಾರ್ಯಕ್ರಮದಡಿ 2.65 ಲಕ್ಷ ಶಿಕ್ಷಕರಿಗೆ ವಸತಿ ಸಹಿತ ತರಬೇತಿಯನ್ನು ನೀಡಲಾಗಿದೆ.

81. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆಯು 2010–11ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಇದರಡಿ 74 ಮಾದರಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಯೋಜನೆಗೆ ರಾಜ್ಯ ಸರ್ಕಾರವು ಶೇ.25 ರಷ್ಟು ತನ್ನ ಪಾಲಿನ ಹಣವನ್ನು ಒದಗಿಸುವುದು. 2011–12ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಒದಗಿಸಲಾಗುವುದು.

82. ಜನಪ್ರಿಯ, ಪರಿಣಾಮಕಾರಿ ಮತ್ತು ಪ್ರಯೋಜನಕಾರಿ ಬೈಸಿಕಲ್ ಯೋಜನೆಯಡಿ 2009–10ನೇ ಸಾಲಿನಲ್ಲಿ 5.32 ಲಕ್ಷ ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ಒದಗಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ 2010–11 ಮತ್ತು 2011–12ನೇ ಸಾಲಿನ ಸುಮಾರು 12 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟಿಗೆ ಬೈಸಿಕಲ್‌ಗಳನ್ನು ಒದಗಿಸಲಾಗುವುದು. ಇದಕ್ಕಾಗಿ 2011–12ನೇ ಸಾಲಿನಲ್ಲಿ 250 ಕೋಟಿ ರೂ.ಗಳನ್ನು ಒದಗಿಸಲಾಗುವುದು.

83. ಪ್ರಸ್ತುತ, ಸರ್ಕಾರಿ ಶಾಲೆಗಳಲ್ಲಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯುತ್ತಿರುವ 1 ರಿಂದ 8 ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ, ಉಚಿತವಾಗಿ ಪಠ್ಯಪುಸ್ತಕಗಳನ್ನು ಒದಗಿಸಲಾಗುತ್ತಿದೆ. ಈ ವರ್ಷ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೂ ಸಹ ಪಠ್ಯ ಪುಸ್ತಕಗಳನ್ನು ಉಚಿತವಾಗಿ ವಿತರಿಸಲಾಗುವುದು.

84. ಗ್ರಾಮೀಣ ಭಾಗದ ಜನರು ತಮ್ಮ ಮಕ್ಕಳನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸೇರಿಸುವಾಗ ಆದಾಯ ಪ್ರಮಾಣ ಪತ್ರವನ್ನು ಒದಗಿಸಲು ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, 2011–12ನೇ ಸಾಲಿನಿಂದ ಆದಾಯ ಪ್ರಮಾಣ ಪತ್ರ ಒದಗಿಸುವ ನಿಬಂಧನೆಯನ್ನು ಕೈಬಿಡಲಾಗುವುದು.

85. ವಯಸ್ಕರಲ್ಲಿ ಸಾಕ್ಷರತೆ ಉಂಟುಮಾಡುವುದಕ್ಕಾಗಿ 'ಸಾಕ್ಷರ ಭಾರತ' ಎಂಬ ಒಂದು ಹೊಸ ಯೋಜನೆಯನ್ನು, ವಿಶೇಷವಾಗಿ ಉತ್ತರ ಕರ್ನಾಟಕದ 11 ಜಿಲ್ಲೆಗಳನ್ನು ಒಳಗೊಳ್ಳುವಂತೆ ರಾಜ್ಯದ 20 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯಡಿ ಮುಖ್ಯವಾಗಿ 15 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ಗ್ರಾಮೀಣ ಅನಕ್ಷರಸ್ಥ ಮಹಿಳೆಯರನ್ನು ಸೇರಿಸಿ ಸುಮಾರು 40 ಲಕ್ಷ ಅನಕ್ಷರಸ್ಥರು ಪ್ರಯೋಜನ ಪಡೆಯಲಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತರು ಹಾಗೂ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಆದ್ಯತೆಗಳನ್ನು ನೀಡಲಾಗುವುದು. 2011–12ನೇ ಸಾಲಿನಲ್ಲಿ 5 ಕೋಟಿ ರೂ. ರಾಜ್ಯದ ಪಾಲನ್ನು ನೀಡಲು ಉಪಬಂಧ ಕಲ್ಪಿಸಲಾಗಿದೆ.

86. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಪ್ರೌಢಶಾಲಾ ಹಂತದಲ್ಲಿರುವುದರಿಂದ, ಈ ವಿಷಯವನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗುವುದು. ಬಡ ವಿದ್ಯಾರ್ಥಿಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಸಮವಸ್ತ್ರಕ್ಕೆ 50 ಲಕ್ಷ ರೂ. ಮತ್ತು ಬೆಂಗಳೂರಿನಲ್ಲಿ ಸ್ಕೌಟ್ಸ್ ಭವನದ ನಿರ್ಮಾಣ ಸೇರಿದಂತೆ ಒಟ್ಟು 4 ಕೋಟಿ ರೂ.ಗಳನ್ನು ನೀಡಲಾಗುವುದು.

87. 2010–11ನೇ ಸಾಲಿನಲ್ಲಿ 8,830 ಕೋಟಿ ರೂ.ಗಳಿದ್ದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಲಯದ ಹಂಚಿಕೆಯನ್ನು 2011–12ನೇ ಸಾಲಿನಲ್ಲಿ 10,281 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಉನ್ನತ ಶಿಕ್ಷಣ

88. ಮಂಗಳೂರು ವಿಶ್ವ ವಿದ್ಯಾಲಯದ ವ್ಯಾಪ್ತಿಯಲ್ಲಿ ಕುಶಾಲನಗರದಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು 2011–12ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು. ಇದಕ್ಕಾಗಿ 2011–12ನೇ ಸಾಲಿನಲ್ಲಿ 5 ಕೋಟಿ

ರೂ.ಗಳನ್ನು ಒದಗಿಸಲಾಗಿದೆ. ಸಂಗೀತ ಮತ್ತು ಕಲೆ ಪಠ್ಯಕ್ರಮಗಳಿಗಾಗಿ ಸಂಗೀತ ವಿಶ್ವ ವಿದ್ಯಾಲಯ, ಜಾನಪದ ವಿಶ್ವ ವಿದ್ಯಾಲಯ, ಲಲಿತಕಲಾ ವಿಶ್ವ ವಿದ್ಯಾಲಯಗಳನ್ನು ಸಹ ಸ್ಥಾಪಿಸಲಾಗಿದೆ. ಅವುಗಳ ಅಭಿವೃದ್ಧಿಗಾಗಿ 2011-12ನೇ ಸಾಲಿನಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

89. **ಕರ್ನಾಟಕ ಜ್ಞಾನ ಆಯೋಗ:** ಯೋಜನಾ ಆಯೋಗದ ಸದಸ್ಯರೂ ಆಗಿರುವ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿಯಾದ ಡಾ: ಕೆ.ಕಸ್ತೂರಿ ರಂಗನ್ ಅವರ ಮುಖಂಡತ್ವ ಹೊಂದಿರುವ ಕರ್ನಾಟಕ ಜ್ಞಾನ ಆಯೋಗವು ಕರ್ನಾಟಕವನ್ನು ಒಂದು ಸ್ಪಂದನಶೀಲ ಜ್ಞಾನಭರಿತ ಸಮಾಜವನ್ನಾಗಿ ಪರಿವರ್ತಿಸುವ ಉದ್ದೇಶದಿಂದ ಉತ್ತಮ ಕಾರ್ಯ ನಿರ್ವಹಿಸುತ್ತಿದೆ. ಈ ಆಯೋಗವು ಸಾಕ್ಷರತೆ ಮತ್ತು ಶಾಲಾ ಶಿಕ್ಷಣ, ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ಮಾನವ ಶಾಸ್ತ್ರ ಮತ್ತು ಮ್ಯಾನೇಜ್‌ಮೆಂಟ್, ಆರೋಗ್ಯ ಸೇವೆಗಳು ಮತ್ತು ಜ್ಞಾನ ಜಾಲಗಳು ಮುಂತಾದ ಪ್ರಮುಖ ಕ್ಷೇತ್ರಗಳ ಬಗ್ಗೆ ಹಲವಾರು ಶಿಫಾರಸ್ಸುಗಳನ್ನು ಸಲ್ಲಿಸಿದೆ. ಜ್ಞಾನ ಆಯೋಗವು ಶಿಫಾರಸ್ಸು ಮಾಡಿರುವ ಯೋಜನೆಗಳ ಅನುಷ್ಠಾನಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

90. 2010-11ನೇ ಸಾಲಿನಲ್ಲಿ ಉನ್ನತ ಶಿಕ್ಷಣಕ್ಕಾಗಿ 1,676 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದ್ದು, 2011-12ನೇ ಸಾಲಿನಲ್ಲಿ 2,002 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

91. ಎಲ್ಲರಿಗೂ ಕೈಗೆಟಕುವಂತಹ ಮತ್ತು ಗುಣಮಟ್ಟದ ಆರೋಗ್ಯ ಸೇವೆ ದೊರೆಯುವಂತೆ ಮಾಡಲು ಸರ್ಕಾರ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ. ಪ್ರಸೂತಿ ಆರೈಕೆ ಮತ್ತು ತಾಯಿ ಭಾಗ್ಯದಂತಹ ಹೊಸ ಯೋಜನೆಗಳಿಂದಾಗಿ ಪ್ರಸೂತಿ ಕೇಂದ್ರಗಳಲ್ಲಿ 2007-08ರಲ್ಲಿ ಶೇ.73ರಷ್ಟಿದ್ದ ಹೆರಿಗೆ ಪ್ರಮಾಣವು 2010-11ನೇ ಸಾಲಿನಲ್ಲಿ ಶೇ.93.3ಕ್ಕೆ ಹೆಚ್ಚಿದೆ. 2010-11ನೇ ಸಾಲಿನಲ್ಲಿ ಬಿಪಿಎಲ್ ಕುಟುಂಬದ ಗರ್ಭಿಣಿಯರಿಗೆ 2 ಲಕ್ಷಕ್ಕೂ ಹೆಚ್ಚಿನ ಮಡಿಲು ಕಿಟ್‌ಗಳನ್ನು ವಿತರಿಸಿದ್ದೇವೆ. 27,945ಕ್ಕೂ ಹೆಚ್ಚಿನ ಬಿಪಿಎಲ್ ಕುಟುಂಬದ ಮಹಿಳೆಯವರು ತಾಯಿ ಭಾಗ್ಯ ಯೋಜನೆಯ ಅಡಿಯಲ್ಲಿ ಉಚಿತ

ಚಿಕಿತ್ಸೆ ಪಡೆದಿದ್ದಾರೆ. ಶಾಲಾ ಆರೋಗ್ಯ ಕಾರ್ಯಕ್ರಮದಡಿ 2010–11ನೇ ಸಾಲಿನ ಮೊದಲ ಮೂರು ತ್ರೈಮಾಸಿಕದಲ್ಲಿ ಒಟ್ಟು 84.54 ಲಕ್ಷ ವಿದ್ಯಾರ್ಥಿಗಳು ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ಪಡೆದಿದ್ದಾರೆ.

92. ನಮ್ಮ ಕಾರ್ಯಕ್ರಮಗಳ ಪ್ರತಿಫಲವಾಗಿ, ರಾಜ್ಯದಲ್ಲಿ 2008ರಲ್ಲಿ 1000ಕ್ಕೆ 45ರಷ್ಟಿದ್ದ ಶಿಶು ಮರಣ ಪ್ರಮಾಣವು 2009ರಲ್ಲಿ 41ಕ್ಕೆ ಇಳಿದಿರುವ ಸಂಗತಿಯನ್ನು ತಮ್ಮಲ್ಲಿ ಹಂಚಿಕೊಳ್ಳಲು ಹರ್ಷಿಸುತ್ತೇನೆ. ಇದೇ ಅವಧಿಯಲ್ಲಿ ಪ್ರಸೂತಿ ಸಮಯದಲ್ಲಿ ಒಂದು ಲಕ್ಷಕ್ಕೆ 228 ತಾಯಂದಿರ ಮರಣ ಪ್ರಮಾಣವು ಸಹ 213ಕ್ಕೆ ಇಳಿದಿದೆ. 2011–12ನೇ ಸಾಲಿನಲ್ಲಿ, ತಾಯಿ ಮತ್ತು ಮಗುವಿನ ಆರೈಕೆಯ ಯೋಜನೆಗಳನ್ನು ಮುಂದುವರಿಸುವುದಕ್ಕಾಗಿ 86 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗುವುದು.

93. ಕಳೆದ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾದಂತೆ, ಬಿಪಿಎಲ್ ಕುಟುಂಬಗಳಿಗೆ ವೈದ್ಯಕೀಯ ಚಿಕಿತ್ಸೆ ಸೌಲಭ್ಯವನ್ನು ಒದಗಿಸಲು ಗುಲ್ಬರ್ಗಾ ವಿಭಾಗದಲ್ಲಿ ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯನ್ನು ಈಗಾಗಲೇ ಬೆಳಗಾವಿ ವಿಭಾಗಕ್ಕೂ ವಿಸ್ತರಿಸಲಾಗಿದೆ. ಗುಲ್ಬರ್ಗಾ ಮತ್ತು ಬೆಳಗಾವಿ ವಿಭಾಗಗಳ 13 ಜಿಲ್ಲೆಗಳಲ್ಲಿ 33.49 ಕೋಟಿ ರೂ.ಗಳ ವೆಚ್ಚದಲ್ಲಿ ಈವರೆಗೆ 5,690 ಫಲಾನುಭವಿಗಳು ಚಿಕಿತ್ಸೆಯನ್ನು ಪಡೆದಿದ್ದಾರೆ. 2011–12ನೇ ಸಾಲಿನಲ್ಲಿ ಈ ಯೋಜನೆಗಾಗಿ 40 ಕೋಟಿ ರೂ.ಗಳ ಉಪಬಂಧವನ್ನು ಕಲ್ಪಿಸಲಾಗಿದೆ.

94. ವರ್ಷದಿಂದ ವರ್ಷಕ್ಕೆ ನಾವು ರಾಜ್ಯದಲ್ಲಿ ಆರೋಗ್ಯ ಮೂಲ ಸೌಕರ್ಯವನ್ನು ಸುಧಾರಿಸುವ ಕಡೆಗೆ ಗಮನ ಹರಿಸಿದ್ದೇವೆ. 2,310 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 988 ಕೇಂದ್ರಗಳು 24/7 ನಿರಂತರ ಸೇವೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿವೆ. 149 ಮೊದಲ ರೆಫರಲ್ ಘಟಕಗಳು, 95 ಸಂಚಾರಿ ಆರೋಗ್ಯ ಘಟಕಗಳು, ಆಸ್ಪತ್ರೆಗಳಲ್ಲಿ 37 ನಾಗರೀಕ ಸಹಾಯ ಕೇಂದ್ರಗಳು (ಸಿಟಿಜ಼ನ್ ಹೆಲ್ಪ್ ಡೆಸ್ಕ್‌ಗಳು) ಕಾರ್ಯನಿರ್ವಹಿಸುತ್ತಿವೆ.

95. ಆರೋಗ್ಯ ಕವಚ (108) ಯೋಜನೆಯು ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕದ ದೂರದ ಪ್ರದೇಶಗಳಲ್ಲಿ ಕೂಡ ಜೀವ ರಕ್ಷಕ ಸೇವೆಯನ್ನು

ಒದಗಿಸುವಲ್ಲಿ ಅತ್ಯಂತ ಯಶಸ್ವಿಯಾಗಿದೆ. 9.35 ಲಕ್ಷದಷ್ಟು ಹೆಚ್ಚು ಸಂಖ್ಯೆಯ ರೋಗಿಗಳಿಗೆ ಸಕಾಲಿಕ ಆರೋಗ್ಯ ಪಾಲನೆ ಮತ್ತು ಚಿಕಿತ್ಸೆಯನ್ನು ನೀಡಲಾಗಿದೆ. ಈ ಪೈಕಿ, ಶೇ.42ರಷ್ಟು ಪ್ರಕರಣಗಳು ಹೆರಿಗೆ ಸಂಬಂಧಿ ಪ್ರಕರಣಗಳಾಗಿವೆ.

96. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಈಗಾಗಲೇ ಆರೋಗ್ಯಬಂಧು ಯೋಜನೆಯನ್ನು 56 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿಯಲ್ಲಿ ಜಾರಿಗೊಳಿಸುತ್ತಿದೆ. ಇದರ ಪರಿಷ್ಕೃತ ಯೋಜನೆಯನ್ನು ರಾಜ್ಯದ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಿ ಆರೋಗ್ಯ ಕ್ಷೇತ್ರದಲ್ಲಿ ಅನುಭವ ಮತ್ತು ಪರಿಣಿತಿ ಇರುವ ಸಂಸ್ಥೆಗಳಿಗೆ ಆದ್ಯತೆ ಕೊಟ್ಟು ನೆರವನ್ನು ನೀಡಲಾಗುವುದು.

97. ಹೆಚ್.ಐ.ವಿ. ಸೋಂಕು ಅತಿ ಹೆಚ್ಚಿನ ಪ್ರಮಾಣದಲ್ಲಿರುವ ಬಾಗಲಕೋಟೆ, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಯಲ್ಲಿನ ಎಲ್ಲಾ ಸೋಂಕಿತ ಸಮುದಾಯಕ್ಕೆ ಮತ್ತು ರಾಜ್ಯಾದ್ಯಂತ ಇರುವ ಹೆಚ್.ಐ.ವಿ. ಸೋಂಕಿತ ಮಕ್ಕಳ ಅವಕಾಶವಾದಿ ಖಾಯಿಲೆಗಳ ಚಿಕಿತ್ಸೆಗಾಗಿ 2 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಈ ಬಗ್ಗೆ ಅವಶ್ಯ ಯೋಜನೆ ರೂಪಿಸಲಿದೆ.

98. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ ಮಾಡುವ ವೆಚ್ಚವನ್ನು 2010–11ನೇ ಸಾಲಿನಲ್ಲಿದ್ದ 1935 ಕೋಟಿ ರೂ.ಗಳಿಂದ 2011–12ನೇ ಸಾಲಿನಲ್ಲಿ 2,428 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ವೈದ್ಯಕೀಯ ಶಿಕ್ಷಣ

99. ಬೆಂಗಳೂರು, ಮೈಸೂರು, ಬಳ್ಳಾರಿ ಮತ್ತು ಹುಬ್ಬಳ್ಳಿಯ ನಾಲ್ಕು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕ ಕೋರ್ಸಿನ ಒಟ್ಟು ವಾರ್ಷಿಕ ಪ್ರವೇಶ ಸಾಮರ್ಥ್ಯವನ್ನು 500 ರಿಂದ 800 ಸೀಟುಗಳಿಗೆ ಹೆಚ್ಚಿಸಲಾಗಿದೆ. ಸ್ನಾತಕೋತ್ತರ ಕೋರ್ಸುಗಳ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ ಭಾರತೀಯ ವೈದ್ಯಕೀಯ ಪರಿಷತ್ತಿಗೆ ಏಕಕಾಲಕ್ಕೆ ಪ್ರಸ್ತಾವನೆಯನ್ನು ಕೂಡ ಸಲ್ಲಿಸಲಾಗುತ್ತಿದೆ. ಈ ಹೆಚ್ಚುವರಿ ಸೀಟುಗಳೊಂದಿಗೆ ಹೊಸದಾಗಿ

ಪ್ರಾರಂಭಿಸಲಾದ ಆರು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 600 ಎಂ.ಬಿ.ಬಿ.ಎಸ್. ಸೀಟುಗಳ ಜೊತೆಗೆ ಅರ್ಹ ವೈದ್ಯಕೀಯ ವೈದ್ಯರುಗಳ ಲಭ್ಯತೆಯನ್ನು ಗಣನೀಯವಾಗಿ ಹೆಚ್ಚಿಸಲಾಗುವುದು.

100. ರಾಜೀವ್ ಗಾಂಧಿ ಎದೆರೋಗ ಸಂಸ್ಥೆಯನ್ನು ಒಂದು ರಾಷ್ಟ್ರೀಯ ಸಂಸ್ಥೆಯಾಗಿ ಮೇಲ್ದರ್ಜೆಗೇರಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಹಿರಿಯನಾಗರಿಕರಿಗೆ ವಿಶಿಷ್ಟ ಆರೋಗ್ಯ ಸೇವೆ ಒದಗಿಸಲು ಹಾಗೂ ಸಂಶೋಧನೆ ನಡೆಸುವ ಉದ್ದೇಶದಿಂದ ರಾಜೀವ್‌ಗಾಂಧಿ ಎದೆರೋಗ ಸಂಸ್ಥೆಯ ಆವರಣದಲ್ಲಿ ಈಗಾಗಲೇ ಇರುವ ಕಟ್ಟಡದಲ್ಲಿ 'ಜೆರಿಯಾಟ್ರಿಕ್ ಸಂಸ್ಥೆ'ಯನ್ನು ಪ್ರಾರಂಭಿಸಲು 5 ಕೋಟಿ ರೂ. ಅನುದಾನವನ್ನು ಒದಗಿಸಲಾಗುವುದು. ಕರ್ನಾಟಕ ಮಧುಮೇಹ ಸಂಸ್ಥೆಯನ್ನು ಸಮಗ್ರ ಚಿಕಿತ್ಸೆಗಾಗಿ ಮತ್ತು ಮಧುಮೇಹ ರೋಗಿಗಳ ಪಾಲನೆಗಾಗಿ ಒಂದು ವಿಶಿಷ್ಟ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಸಂಸ್ಥೆಯನ್ನು ಬಲಪಡಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಧಾರವಾಡ ಮಾನಸಿಕ ಆರೋಗ್ಯ ಮತ್ತು ನರರೋಗ ವಿಜ್ಞಾನ ಸಂಸ್ಥೆಯನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

101. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಹೃದಯ ಸಂಜೀವಿನಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ 992 ಬಡರೋಗಿಗಳಿಗೆ ಈಗಾಗಲೇ ಚಿಕಿತ್ಸೆ ನೀಡಲಾಗಿದೆ. ಈ ಯೋಜನೆಯನ್ನು ಮುಂದುವರೆಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

102. ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

103. **ಆಯುಷ್:** ಈ ವರ್ಷ ಬೆಂಗಳೂರಿನಲ್ಲಿ ಜಾಗತಿಕ ಆಯುರ್ವೇದ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲಾಯಿತು. ರಾಜ್ಯದಲ್ಲಿ ಆಯುರ್ವೇದ ಅಧ್ಯಯನಕ್ಕೆ ಉತ್ತೇಜನ ನೀಡಲು 2011-12ನೇ ಸಾಲಿನಲ್ಲಿ ಶಿವಮೊಗ್ಗದಲ್ಲಿ ಆಯುರ್ವೇದ ಕಾಲೇಜನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

104. 2010–11ನೇ ಸಾಲಿನಲ್ಲಿ ಆಯುಷ್ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಲ್ಲಿ 45,000 ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಆಯುಷ್ ಘಟಕಗಳನ್ನು ಪ್ರಾರಂಭಿಸಲಾಗುವುದು. ಇದಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಆಯುಷ್ ಆಸ್ಪತ್ರೆಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮೂಲಕ ಆಯುರ್ವೇದ ಸ್ವಾಸ್ಥ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

105. ರೋಗ ನಿರೋಧಕ, ಸಮಗ್ರ ಮತ್ತು ಜೀವಶೈಲಿ ನಿರ್ವಹಣಾ ಪದ್ಧತಿಗಳನ್ನು ಒದಗಿಸುವ ಸಲುವಾಗಿ, ಪ್ರಾಯೋಗಿಕ ಆಧಾರದ ಮೇಲೆ 10 ತಾಲ್ಲೂಕುಗಳಲ್ಲಿನ ತಲಾ ಒಂದು ಗ್ರಾಮ ಪಂಚಾಯತಿಯಲ್ಲಿ ಆಯುಷ್ ಗ್ರಾಮ ಎಂಬ ಹೆಸರಿನ ಹೊಸ ಯೋಜನೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು.

106. ವೈದ್ಯಕೀಯ ಶಿಕ್ಷಣಕ್ಕಾಗಿ ಮಾಡುವ ವೆಚ್ಚವನ್ನು 2010–11ನೇ ಸಾಲಿನಲ್ಲಿದ್ದ 723 ಕೋಟಿ ರೂ.ಗಳಿಂದ 2011–12ನೇ ಸಾಲಿನಲ್ಲಿ 826 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ಸಮಾಜ ಕಲ್ಯಾಣ

107. ಸಮಗ್ರ ಅಭಿವೃದ್ಧಿ ಸಾಧಿಸಬೇಕಾದರೆ ರಾಜ್ಯವು ಒದಗಿಸುವ ಸೇವೆಗಳ ಫಲವು ಸಮಾಜದ ಎಲ್ಲಾ ಗುಂಪುಗಳಿಗೆ ಸಮಾನವಾಗಿ ದೊರೆಯಬೇಕು ಮತ್ತು ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಸಾಕಷ್ಟು ಅವಕಾಶ ಇರಬೇಕಾಗುತ್ತದೆ. ಫಲಾನುಭವಿ ಉದ್ದೇಶಿತ ಯೋಜನೆಗಳ ಮುಖಾಂತರ ನನ್ನ ಸರ್ಕಾರ ಸಮಗ್ರ ಬೆಳವಣಿಗೆಯ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತಿದೆ.

108. ಕಳೆದ ಎರಡು ವರ್ಷಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. 2009–10ರಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಕ್ರಮವಾಗಿ 2,917 ಕೋಟಿ ರೂ. ಮತ್ತು 1,144 ಕೋಟಿ ರೂ.ಗಳನ್ನು ಮತ್ತು 2010–11ನೇ ಸಾಲಿನಲ್ಲಿ 3,359 ಮತ್ತು 1,344 ಕೋಟಿ ರೂ.ಗಳನ್ನು

ಒದಗಿಸಲಾಗಿತ್ತು. 2011-12ರಲ್ಲಿ ಈ ಮೊತ್ತವನ್ನು 4,633 ಕೋಟಿ ರೂ. ಮತ್ತು 1,867 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

109. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಿಗೆ 2009-10ನೇ ಸಾಲಿನಲ್ಲಿ 600 ಕೋಟಿ ರೂ.ಗಳನ್ನು ಮತ್ತು 2010-11ನೇ ಸಾಲಿನಲ್ಲಿ 800 ಕೋಟಿ ರೂ.ಗಳ ಕ್ರೋಢೀಕೃತ ಅನುದಾನವನ್ನು ಒದಗಿಸಲಾಗಿತ್ತು. 2010-11ಕ್ಕೆ ಹೋಲಿಸಿದರೆ 2011-12ನೇ ಸಾಲಿನಲ್ಲಿ ಕ್ರೋಢೀಕೃತ ಅನುದಾನವನ್ನು 1,000 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

110. ಕಿರು ಸಾಲ ಯೋಜನೆಯ ಅಡಿಯಲ್ಲಿ, ಪ್ರಸ್ತುತ, 5,000 ರೂ.ಗಳ ಸಾಲ ಮತ್ತು ಸಬ್ಸಿಡಿಯನ್ನು ನೀಡಲಾಗುತ್ತಿದೆ. ಇದನ್ನು 10,000 ರೂ.ಗಳಿಗೆ ಹೆಚ್ಚಿಸಲಾಗುವುದು. (5,000 ರೂ.ಗಳ ಸಾಲ ಮತ್ತು 5,000 ರೂ.ಗಳ ಸಬ್ಸಿಡಿ) ಈ ಯೋಜನೆಯ ಅಡಿಯಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

111. ಸ್ವಯಂ ಉದ್ಯೋಗಕ್ಕಾಗಿ ಪ್ರಸ್ತುತ ನೀಡಲಾಗುತ್ತಿರುವ 10,000 ರೂ.ಗಳ ಹಣಕಾಸು ನೆರವನ್ನು 25,000 ರೂ.ಗಳಿಗೆ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕಾಗಿ 12 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

112. ಬಹಳ ವರ್ಷಗಳಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಅವಶ್ಯಕವಾದ ಮೂಲಭೂತ ಸೌಕರ್ಯಗಳಿಲ್ಲದೆ ಅಲ್ಲಿಯ ಜನ ತೊಂದರೆ ಅನುಭವಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ ಪ್ರಾರಂಭಿಕವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ 300 ಕಾಲೋನಿಗಳ ಅಭಿವೃದ್ಧಿಗಾಗಿ ಪ್ರತಿ ಕಾಲೋನಿಗೆ 1 ಕೋಟಿ ರೂ.ನಂತೆ ಒಟ್ಟು 300 ಕೋಟಿ ರೂ. ನೀಡಲಾಗುವುದು.

113. ಪರಿಶಿಷ್ಟ ಜಾತಿಗಳ ವಿದ್ಯಾರ್ಥಿವೇತನ ಇತ್ಯಾದಿಗಳನ್ನು ಸೇರಿಸಿ 2009-10ನೇ ಸಾಲಿನಲ್ಲಿ 24.26 ಲಕ್ಷ ಫಲಾನುಭವಿಗಳಿಗೆ ಸಹಾಯ ಒದಗಿಸಲಾಗಿದೆ. 2010-11ನೇ ಸಾಲಿನಲ್ಲಿ 28.02 ಲಕ್ಷ ಫಲಾನುಭವಿಗಳಿಗೆ ಸಹಾಯ ಮಾಡಲಾಗಿದೆ. ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿವೇತನ ಇತ್ಯಾದಿಗಳನ್ನು ಸೇರಿಸಿ 2009-10ನೇ ಸಾಲಿನಲ್ಲಿ 10.78 ಲಕ್ಷ ಫಲಾನುಭವಿಗಳಿಗೆ ಸಹಾಯ ಒದಗಿಸಲಾಗಿದೆ. 2010-11ನೇ ಸಾಲಿನಲ್ಲಿ 9.09 ಲಕ್ಷ ಫಲಾನುಭವಿಗಳಿಗೆ ಸಹಾಯ ಮಾಡಲಾಗಿದೆ.

114. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 1763 ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಅದರಿಂದ 1.61 ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗಿದೆ. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 308 ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಅದರಿಂದ 27,000 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗಿದೆ.

115. 2010–11ನೇ ಸಾಲಿನಲ್ಲಿ, ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು 650 ರೂ.ಗಳಿಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 750 ರೂ.ಗಳಿಗೆ ಹೆಚ್ಚಿಸಲಾಗಿತ್ತು. 2011–12ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು 650 ರೂ.ಗಳಿಂದ 750 ರೂ.ಗಳಿಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 750 ರೂ.ಗಳಿಂದ 850 ರೂ.ಗಳಿಗೆ ಹೆಚ್ಚಿಸಲಾಗುವುದು.

116. ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದ ಒಂದರಿಂದ ಏಳನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು 75 ರೂ.ಗಳಿಂದ 250 ರೂ.ಗಳಿಗೆ ಹೆಚ್ಚಿಸಲಾಗುವುದು ಮತ್ತು 8 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 100 ರೂ.ಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗುವುದು. ಈ ಕಾರ್ಯಕ್ರಮದಡಿ ಸುಮಾರು 25 ಲಕ್ಷ ವಿದ್ಯಾರ್ಥಿಗಳು ಪ್ರಯೋಜನ ಪಡೆಯಲಿದ್ದಾರೆ.

117. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಬಾಲಕ ಮತ್ತು ಬಾಲಕಿಯರಿಗೆ ನರ್ಸಿಂಗ್, ಪ್ಯಾರಾ ಮೆಡಿಕಲ್, ಐಟಿಐ ಮತ್ತು ಇತರ ತಾಂತ್ರಿಕ ಕುಶಲತೆಯ ತರಬೇತಿ ನೀಡಲು 30 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇದರಿಂದಾಗಿ 30,000 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ.

118. ಕಳೆದ ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ 15 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 50 ಹಾಸ್ಟೆಲ್‌ಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮತ್ತು ಹಾಸ್ಟೆಲ್‌ಗಳನ್ನು ನಿರ್ಮಿಸಲು ಈವರೆವಿಗೂ

142 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. 2011–12ರಲ್ಲಿ ಈಗಾಗಲೇ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ಹಾಸ್ಟೆಲ್‌ಗಳನ್ನು ನಿರ್ಮಿಸಲು 150 ಕೋಟಿ ರೂ.ಗಳನ್ನು ಒದಗಿಸಲಾಗುವುದು.

119. **ಹಿಂದುಳಿದ ವರ್ಗಗಳ ಅಭಿವೃದ್ಧಿ:** ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ 2010–11ನೇ ಸಾಲಿನಲ್ಲಿ 606 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, 2011–12ನೇ ಸಾಲಿನಲ್ಲಿ ಈ ಹಂಚಿಕೆಯನ್ನು 760 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

120. ಗಾಣಿಗರ ಜನಾಂಗದ ಗುರುಪೀಠ ಸ್ಥಾಪಿಸಲು 5 ಕೋಟಿ ರೂ.ಗಳನ್ನು ನೀಡಲಾಗುವುದು. ವಾಲ್ಮೀಕಿ ಭವನ ನಿರ್ಮಾಣಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು. ತಿಗಳರ ಸಮಾಜಕ್ಕೆ 1 ಕೋಟಿ ರೂ. ನೀಡಲಾಗುವುದು, ಇದಲ್ಲದೆ ವಿವಿಧ ಸಮುದಾಯದವರ ಅಭಿವೃದ್ಧಿಗೋಸ್ಕರ 25 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.

121. ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಜನರಿಗಾಗಿ ಒಂದು ಹೊಸ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ 5 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.

122. 2010–11ನೇ ಸಾಲಿನಲ್ಲಿ 11 ಜಿಲ್ಲೆಗಳಲ್ಲಿ 11 ಮಾದರಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಯಿತು. ಉಳಿದ 19 ಜಿಲ್ಲೆಗಳಲ್ಲಿ ಇನ್ನೂ 19 ಮಾದರಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 38 ಕೋಟಿ ರೂ.ಗಳನ್ನು ಒದಗಿಸಲಾಗುವುದು.

123. ನರ್ಸಿಂಗ್, ಅರೆವೈದ್ಯಕೀಯ ಮತ್ತು ಇತರೆ ಕೋರ್ಸುಗಳಲ್ಲಿ ಹಿಂದುಳಿದ ವರ್ಗದವರಿಗೆ ತರಬೇತಿ ನೀಡಲು 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

124. **ಅಲ್ಪಸಂಖ್ಯಾತ ಕಲ್ಯಾಣ:** ರಾಜ್ಯದಲ್ಲಿರುವ ಅಲ್ಪಸಂಖ್ಯಾತ ಜನರ ಕಲ್ಯಾಣಕ್ಕೆ ಸರ್ಕಾರವು ಬದ್ಧವಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ 2007–08ನೇ ಸಾಲಿನಲ್ಲಿ 97 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಈ ಅನುದಾನವನ್ನು ಕ್ರಮೇಣ ಹೆಚ್ಚಿಸಲು ಕ್ರಮ

ಕೈಗೊಳ್ಳಲಾಗಿದೆ. 2010-11ನೇ ಸಾಲಿನಲ್ಲಿ 207 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು,

2011-12ನೇ ಸಾಲಿನಲ್ಲಿ 326 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.

125. ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದು ಮತ್ತು ವಿದ್ಯಾರ್ಥಿನಿಲಯ ಸೌಲಭ್ಯಗಳನ್ನು ಒದಗಿಸುತ್ತಿರುವುದಲ್ಲದೆ, ಭೂಮಿಯ ಖರೀದಿ, ನೀರಾವರಿ ಸೌಲಭ್ಯ ಕಲ್ಪಿಸುವುದು, ಸುಸ್ಥಿರವಾದ ವ್ಯಾಪಾರ ಪ್ರಾರಂಭಿಸುವುದು, ಮೊದಲಾದಂಥಹ ಅಭಿವೃದ್ಧಿ ಯೋಜನೆಗಳಿಗಾಗಿ ಸಾಲ ಮತ್ತು ಸಹಾಯಧನವನ್ನು ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 32,000ಕ್ಕೂ ಅಧಿಕ ಫಲಾನುಭವಿಗಳಿಗೆ ನೆರವು ನೀಡಲು 60 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ.

126. ಸರ್ಕಾರವು ವಕ್ಫ್ ಸಂಸ್ಥೆಗಳ ನಿರ್ಮಾಣ ಮತ್ತು ನವೀಕರಣಕ್ಕಾಗಿ 16 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಬಿಡುಗಡೆ ಮಾಡಿದೆ. ಬೆಂಗಳೂರಿನಲ್ಲಿ ಹಜ್‌ಮಹಲ್‌ನ ನಿರ್ಮಾಣಕ್ಕಾಗಿ ಈಗಾಗಲೇ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಕಟ್ಟಡದ ನಿರ್ಮಾಣಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

127. ಕ್ರಿಶ್ಚಿಯನ್ ಪಂಗಡಕ್ಕೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಆಯವ್ಯಯದಲ್ಲಿ 50 ಕೋಟಿ ರೂ. ಮೀಸಲಿರಿಸಲಾಗಿದೆ. ರಾಜ್ಯ ಆಯವ್ಯಯದಿಂದ ಈ ರೀತಿಯ ವಿಶೇಷ ಹಂಚಿಕೆಯನ್ನು ಮೊದಲ ಬಾರಿಗೆ ಮಾಡಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ

128. ಭಾಗ್ಯಲಕ್ಷ್ಮಿ ಯೋಜನೆಯಡಿ ನಮ್ಮ ರಾಜ್ಯದ 11,39,697 ಹೆಣ್ಣು ಮಕ್ಕಳನ್ನು ಗುರುತಿಸಲಾಗಿದ್ದು, ಈವರೆಗೆ 8,95,133 ಬಾಂಡುಗಳನ್ನು 1,140 ಕೋಟಿ ರೂ.ಗಳ ವೆಚ್ಚದಲ್ಲಿ ವಿತರಿಸಲಾಗಿದೆ. ಬಾಕಿ ಉಳಿದಿರುವ 2,44,564 ಫಲಾನುಭವಿಗಳಿಗೆ ಬಾಂಡುಗಳನ್ನು ವಿತರಿಸಲು 2011-12ನೇ ಸಾಲಿನಲ್ಲಿ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು.

129. ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಫಲಾನುಭವಿಗಳ ತಾಯಂದಿರಿಗೆ ಸೀರೆಗಳನ್ನು ವಿತರಿಸಲಾಗಿದೆ. ಹೆಣ್ಣುಮಕ್ಕಳಿಗೆ ಉಚಿತ ವೈದ್ಯಕೀಯ ತಪಾಸಣೆಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿರುವುದರಿಂದ 2011–12ನೇ ಸಾಲಿನಲ್ಲೂ ಮುಂದುವರೆಸಲು ಉದ್ದೇಶಿಸಿರುತ್ತೇನೆ.

130. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆ ಹಾಗೂ ಪೌಷ್ಠಿಕ ಆಹಾರ ಪೂರೈಕೆಯಂತಹ ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಬಹು ಮುಖ್ಯವಾದ ಪಾತ್ರ ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರುಗಳ ಈ ಕೊಡುಗೆಯನ್ನು ಪರಿಗಣಿಸಿ 2009–10ರಲ್ಲಿ ಗೌರವ ಧನವನ್ನು ಕ್ರಮವಾಗಿ 2,500 ರೂ. ಮತ್ತು 1,250 ರೂ.ಗಳಿಗೆ ಹೆಚ್ಚಿಸಲಾಗಿತ್ತು. 2010–11ರಲ್ಲಿ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು ಅವರಿಗೆ ಪ್ರಾರಂಭಿಸಲಾಗಿದೆ. 18 ವರ್ಷ ಮತ್ತು 55 ವರ್ಷಗಳ ನಡುವಿನ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಈ ವ್ಯವಸ್ಥೆಯಡಿ ತರಲಾಗುತ್ತದೆ. ಸರ್ಕಾರವು ಪ್ರತಿ ತಿಂಗಳು ಪ್ರತಿ ಅಂಗನವಾಡಿ ಕಾರ್ಯಕರ್ತೆಯರಿಗೆ 150 ರೂ.ಗಳು ಮತ್ತು ಪ್ರತಿ ಅಂಗನವಾಡಿ ಸಹಾಯಕರಿಗೆ 75 ರೂ.ಗಳ ಅನುರೂಪ ಅನುದಾನವನ್ನು ಒದಗಿಸುತ್ತದೆ. 55 ವರ್ಷಗಳ ಮೇಲ್ಪಟ್ಟ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಸರ್ಕಾರವು ನಿವೃತ್ತಿ ಸಮಯದಲ್ಲಿ ಅನುಕ್ರಮವಾಗಿ 50,000 ರೂ.ಗಳು ಮತ್ತು 30,000 ರೂ.ಗಳ ಒಟ್ಟು ಮೊತ್ತವನ್ನು ಒದಗಿಸುತ್ತದೆ.

131. ಅಂಗನವಾಡಿ ಕಾರ್ಯಕರ್ತೆಯವರ ಗೌರವಧನವನ್ನು 2,500 ರೂ.ಗಳಿಂದ 3,000 ರೂ.ಗಳಿಗೆ ಹಾಗೂ ಸಹಾಯಕಿಯರ ಗೌರವಧನವನ್ನು 1,250 ರೂ.ಗಳಿಂದ 1,500 ರೂ.ಗಳಿಗೆ ಪುನಃ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.

132. ಅಪೂರ್ಣ ಅಂಗನವಾಡಿ ಕಟ್ಟಡಗಳ ನಿರ್ಮಾಣ ಕೆಲಸ ಮತ್ತು ನಿರ್ವಹಣೆ ಕೆಲಸ ಕೈಗೊಳ್ಳಲು 100 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

133. ರಾಜ್ಯದ ಎಲ್ಲ 176 ತಾಲ್ಲೂಕುಗಳಲ್ಲಿ 12 ಲಕ್ಷ ಮಹಿಳಾ ಸದಸ್ಯರನ್ನು ಹೊಂದಿರುವ 60,000 ಹೊಸ ಸ್ತ್ರೀ ಶಕ್ತಿ ಸಮೂಹಗಳನ್ನು ರೂಪಿಸಲು ಮತ್ತು ಆವರ್ತಕ ನಿಧಿ ಕಿಟ್ ಸಾಮಗ್ರಿಗಳು ಮತ್ತು ತರಬೇತಿ ಒದಗಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

134. ಮಹಿಳಾ ಆಯೋಗಕ್ಕೆ 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

135. ನಗರ ಪ್ರದೇಶಗಳ ಬೀದಿಗಳಲ್ಲಿ ವ್ಯಾಪಾರ ಮಾಡುವ ವ್ಯಾಪಾರಸ್ಥ ಮಹಿಳೆಯರಿಗೆ, ದಿನ ನಿತ್ಯದ ಅಥವಾ ವಾರಕ್ಕೊಮ್ಮೆ ಅಲ್ಪಾವಧಿ ಸಾಲ ನೀಡುವ ವ್ಯವಸ್ಥೆಯನ್ನು ಪರಿಣಿತ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನ ಮಾಡಲು, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಈ ವರ್ಷ ರೂ. 2 ಕೋಟಿ ನೀಡಲಾಗುವುದು. ಮೊದಲ ಹಂತದಲ್ಲಿ ಈ ಯೋಜನೆಯನ್ನು ಮೈಸೂರು ಮತ್ತು ಶಿವಮೊಗ್ಗ ನಗರಗಳಲ್ಲಿ ಪ್ರಾರಂಭಿಸಲಾಗುವುದು.

136. ಅಂಗವಿಕಲರಿಗಾಗಿ ಮೀಸಲಿರುವ ಸಮರ್ಥನಂ ಸಂಸ್ಥೆಯ ಶಾಲೆ ಮತ್ತು ವಸತಿ ಕಟ್ಟಡಗಳಿಗೆ ಸಹಾಯಧನವಾಗಿ ರೂ.1 ಕೋಟಿ ನೀಡಲಾಗುವುದು.

ವಸತಿ

137. ಸಮಾಜದ ದುರ್ಬಲ ವರ್ಗದವರಿಗೆ ಮನೆಗಳನ್ನು ಒದಗಿಸುವುದು ನನ್ನ ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಕಳೆದ ಮೂರು ವರ್ಷಗಳಲ್ಲಿ ರಾಜೀವ್‌ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ನಿಗಮ ನಿಯಮಿತವು ಬಿಪಿಎಲ್ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕುಟುಂಬಗಳಿಗೆ 9,07,630 ಮನೆಗಳನ್ನು ನಿರ್ಮಾಣ ಮಾಡಿದೆ. 2009–10ನೇ ಸಾಲಿನ ಪ್ರಾರಂಭದಲ್ಲೇ 3,32,972 ಮನೆಗಳನ್ನು ನಿರ್ಮಾಣ ಮಾಡಲಾಯಿತು. 2011–12ಕ್ಕೆ ನಿಗಮವು 3 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹಾಕಿಕೊಂಡಿದ್ದು ಅವುಗಳಲ್ಲಿ 2 ಲಕ್ಷ ಮನೆಗಳು ಗ್ರಾಮೀಣ ಪ್ರದೇಶದಲ್ಲಿರುತ್ತವೆ.

138. ರಾಜ್ಯದಲ್ಲಿ ನಿವೇಶನ ರಹಿತ ಕುಟುಂಬಗಳನ್ನು ಗುರುತಿಸಲು ಒಂದು ವೈಜ್ಞಾನಿಕ ಸಮೀಕ್ಷೆ ನಡೆಸಲಾಗುವುದು. ಈ ಸಮೀಕ್ಷೆಯ ಆಧಾರದ ಮೇಲೆ ಎಲ್ಲಾ ನಿವೇಶನರಹಿತ ಕುಟುಂಬಗಳಿಗೆ ಕ್ರಮೇಣವಾಗಿ ನಿವೇಶನದ ವ್ಯವಸ್ಥೆ ಮಾಡಲಾಗುವುದು.

139. **ನನ್ನ ಮನೆ ನನ್ನ ಸ್ವತ್ತು:** ಲಕ್ಷಾಂತರ ಮನೆಗಳನ್ನು ನಿರ್ಮಿಸಿ ಬಡ ಜನರಿಗೆ ವಿತರಿಸಲಾಗಿದ್ದರೂ ಮಾಲೀಕತ್ವದ ಅವಶ್ಯಕ ಪತ್ರಗಳನ್ನು ಹಸ್ತಾಂತರಿಸಿರುವುದಿಲ್ಲ. ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಆರ್ಥಿಕ ಸಹಾಯ ಪಡೆದು ಈ ಮನೆಗಳನ್ನು ಮತ್ತಷ್ಟು ಮೇಲ್ದರ್ಜೆಗೇರಿಸುವ ಪ್ರಯತ್ನಕ್ಕೆ ಹಿನ್ನಡೆಯಾಗುತ್ತಿದೆ. ಆದುದರಿಂದ 'ನನ್ನ ಮನೆ ನನ್ನ ಸ್ವತ್ತು' ಎಂಬ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಲು ನಿರ್ಧರಿಸಿದ್ದು ಇದರಲ್ಲಿ ಅರ್ಹ ಫಲಾನುಭವಿಗಳಿಗೆ ಮಾಲೀಕತ್ವ ಪ್ರಮಾಣ ಪತ್ರಗಳನ್ನು ನೀಡಲಾಗುವುದು. ಇದರಿಂದ 20 ಲಕ್ಷ ಕುಟುಂಬಗಳು ಪ್ರಯೋಜನ ಪಡೆಯುವುವು ಎಂದು ನಿರೀಕ್ಷಿಸಲಾಗಿದೆ.

140. ವಸತಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಭೂಮಿಯ ಲಭ್ಯತೆ ಒಂದು ಪ್ರಮುಖ ಸಮಸ್ಯೆಯಾಗಿದೆ. ಆದುದರಿಂದ ವಸತಿ ಯೋಜನೆಗಳಿಗೆ ಭೂ ಸ್ವಾಧೀನಕ್ಕಾಗಿ 67 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ.

141. ಕರ್ನಾಟಕ ಗೃಹ ಮಂಡಳಿ ತನ್ನ ಸಂಪನ್ಮೂಲಗಳಿಂದ ಹಾಗೂ ಖಾಸಗಿ ಸಹಭಾಗಿತ್ವದಡಿ ಕೈಗೆಟುಕುವ ದರದಲ್ಲಿ ಹೆಚ್ಚು ಮನೆಗಳನ್ನು ನಿರ್ಮಿಸುವ ಯೋಜನೆಗಳನ್ನು ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲಾಗುವುದು. ಇಂತಹ ಯೋಜನೆಗಳಿಗೆ ಶೀಘ್ರವಾಗಿ ಅನುಮೋದನೆಗಳನ್ನು ನೀಡಿ, ಸರ್ಕಾರದ ಎಲ್ಲಾ ರೀತಿಯ ಸಹಕಾರವನ್ನು ಒದಗಿಸಲಾಗುವುದು.

142. **ಕೈಗಾರಿಕಾ ಪ್ರದೇಶ ವಸತಿ ಯೋಜನೆ:** ಕೈಗಾರಿಕಾ ಪ್ರದೇಶಗಳಲ್ಲಿ ವಿಶೇಷವಾಗಿ ದುರ್ಬಲ ವರ್ಗದ ಕಾರ್ಮಿಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ, ನುರಿತ ಕೆಲಸಗಾರರಿಗೆ, ಕುಶಲಕರ್ಮಿಗಳಿಗೆ 30,000 ವಾಸದ ಮನೆ ಮತ್ತು ಶೆಡ್‌ಗಳನ್ನು, ಹಾಗೂ ಕೃಷಿ ಮಾರುಕಟ್ಟೆಗಳಲ್ಲಿ ತೂಕ ಮಾಡುವವರಿಗೆ ಹಾಗೂ ಹಮಾಲಿಗಳಿಗೆ 10,000 ಮನೆಗಳನ್ನು ನಿರ್ಮಾಣ ಮಾಡಲಾಗುವುದು. ಇದನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ನಿರ್ಮಿಸಲಾಗುವುದು.

143. **ಕೊಳಚೆ ಪ್ರದೇಶ ಅಭಿವೃದ್ಧಿ:** ನಗರ ಬಡಜನರಿಗೆ ಮೂಲಭೂತ ಸೇವೆಗಳು (BSUP) ಕಾರ್ಯಕ್ರಮದಡಿಯಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ 198 ಕೋಟಿ ರೂ.ಗಳ ವೆಚ್ಚದಲ್ಲಿ ಒಟ್ಟು 7383 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 179 ಕೋಟಿ ರೂ.ಗಳ ವೆಚ್ಚದಲ್ಲಿ 7378 ಮನೆಗಳನ್ನು ಪೂರ್ಣಗೊಳಿಸಲಾಯಿತು. ರಾಜೀವ್ ಆವಾಸ್ ಯೋಜನೆ ಅಡಿಯಲ್ಲಿ ಕೊಳಚೆ ಪ್ರದೇಶದ ನಕ್ಷೆ ತಯಾರಿಕೆ ಕೆಲಸ ಈಗಾಗಲೇ ಪ್ರಾರಂಭಗೊಂಡಿದೆ. 2017ರ ವೇಳೆಗೆ ಕರ್ನಾಟಕವನ್ನು ಕೊಳಚೆ ಪ್ರದೇಶ ಮುಕ್ತ ರಾಜ್ಯವನ್ನಾಗಿ ಮಾಡುವ ಗುರಿ ಹೊಂದಲಾಗಿದೆ. 2011-12ರ ಅವಧಿಯಲ್ಲಿ ಕೊಳಚೆ ಪ್ರದೇಶಗಳ ಮೂಲಭೂತಸೌಕರ್ಯ ಒದಗಿಸಲು 50 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗುವುದು.

ಸಾರ್ವಜನಿಕ ವಿತರಣಾ ವ್ಯವಸ್ಥೆ

144. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ 86 ಲಕ್ಷಕ್ಕಿಂತಲೂ ಅಧಿಕ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ನೀಡಲಾಗಿದೆ ಮತ್ತು ಅವರಿಗೆ ಕೆ.ಜಿ.ಯೊಂದಕ್ಕೆ 3 ರೂ.ಗಳಂತೆ ಗೋಧಿ ಮತ್ತು ಅಕ್ಕಿಯನ್ನು ಒದಗಿಸಲಾಗುತ್ತಿದೆ. ಪ್ರತಿ ತಿಂಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ 1.36 ಲಕ್ಷ ಟನ್ ಅಕ್ಕಿ ಮತ್ತು 44,000 ಟನ್ ಗೋಧಿಯನ್ನು ಹಂಚಿಕೆ ಮಾಡಲಾಗುತ್ತಿದೆ. 2010-11 ರಲ್ಲಿ ಸಹಾಯಧನವಾಗಿ ರಾಜ್ಯ ಸರ್ಕಾರವು 950 ಕೋಟಿ ರೂ.ಗಳನ್ನು ಒದಗಿಸುತ್ತಿದೆ.

145. ಬಡತನ ರೇಖೆಗಿಂತ ಕೆಳಗಿರುವ ಕೆಲವು ಕುಟುಂಬಗಳು ಪಡಿತರ ಚೀಟಿಯನ್ನು ಪಡೆಯಲು ಸಾಧ್ಯವಾಗದೆ, ಅನರ್ಹ ಕುಟುಂಬಗಳು ಪಡಿತರ ಚೀಟಿಯನ್ನು ಪಡೆದಿರುತ್ತಾರೆ ಎಂದು ದೂರು ಕೇಳಿಬಂದಿರುತ್ತದೆ. ಬೋಗಸ್ ಪಡಿತರ ಕಾರ್ಡುಗಳನ್ನು ಗುರುತಿಸಿ ಅವುಗಳನ್ನು ಕೈಬಿಡಲು ಒಂದು ವಿಶೇಷ ಆಂದೋಲನವನ್ನು ಪ್ರಾರಂಭಿಸಲಾಗಿದೆ. ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

146. ಆಹಾರ ಧಾನ್ಯಗಳನ್ನು ತರುವ, ದಾಸ್ತಾನು ಮಾಡುವ ಮತ್ತು ಹಂಚಿಕೆ ಮಾಡುವ ವಿಚಾರಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರಗಳನ್ನು ಗಣಕೀಕರಣಗೊಳಿಸುವ ಮೂಲಕ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ. ಎಲ್ಲ ತಾಲ್ಲೂಕು ಮಟ್ಟದ ಕಛೇರಿಗಳು ಮತ್ತು ಮಳಿಗೆಗಳಿಗೆ ಕಂಪ್ಯೂಟರ್ ಮತ್ತು ಅಂತರ್ಜಾಲ ಸೌಲಭ್ಯಗಳನ್ನು ಒದಗಿಸಲಾಗುವುದು. ಆಹಾರ ಮತ್ತು ನಾಗರಿಕ ಸರಬರಾಜು ನಿಗಮವು ಈ ವರ್ಷ 193 ದಾಸ್ತಾನು ಮಳಿಗೆಗಳ ಪೈಕಿ 100 ಮಳಿಗೆಗಳಿಗೆ ಕಂಪ್ಯೂಟರ್ ಒದಗಿಸುತ್ತದೆ. 10 ದಾಸ್ತಾನು ಮಳಿಗೆಗಳಲ್ಲಿ ಈ ವರ್ಷ 10 ಕೋಟಿ ರೂ.ಗಳ ವೆಚ್ಚದಲ್ಲಿ ಎಲೆಕ್ಟ್ರಾನಿಕ್ ವೇಬ್ರಿಡ್ಜ್‌ಗಳನ್ನು ಅಳವಡಿಸಲಾಗುವುದು.

ವಾಣಿಜ್ಯ ಮತ್ತು ಕೈಗಾರಿಕೆ

147. ಇತ್ತೀಚೆಗೆ ಮುಕ್ತಾಯಗೊಂಡ ಜಾಗತಿಕ ಬಂಡವಾಳಹೂಡಿಕೆದಾರರ ಸಮಾವೇಶವು ಒಂದು ಅಭೂತಪೂರ್ವ ಯಶಸ್ಸನ್ನು ಕಂಡಿತು. 3.93 ಲಕ್ಷ ಕೋಟಿ ರೂ.ಗಳ ನಿರೀಕ್ಷಿತ ಬಂಡವಾಳ ಹೂಡಿಕೆ ಮತ್ತು 7.11 ಲಕ್ಷ ವ್ಯಕ್ತಿಗಳಿಗೆ ಉದ್ಯೋಗಾವಕಾಶದೊಂದಿಗೆ 12 ವಲಯಗಳಲ್ಲಿ ಅಭೂತಪೂರ್ವ 389 ಒಪ್ಪಂದ ಪತ್ರಗಳಿಗೆ ಸರ್ಕಾರವು ಸಹಿ ಹಾಕಿದೆ. ತರುವಾಯ ಕಳೆದ ಆರು ತಿಂಗಳಲ್ಲಿ 2 ಲಕ್ಷ ವ್ಯಕ್ತಿಗಳಿಗೆ ಉದ್ಯೋಗ ಸೃಜಿಸಲು 91,810 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ಇನ್ನೂ 368 ಹೊಸ ಪ್ರಸ್ತಾವನೆಗಳನ್ನು ಅನುಮೋದಿಸಲಾಯಿತು. 2.83 ಲಕ್ಷ ಕೋಟಿರೂಪಾಯಿಗಳ ಬಂಡವಾಳ ಹೂಡಿಕೆಯುಳ್ಳ 215 ಯೋಜನೆಗಳಲ್ಲಿ 187 ಸಿವಿಲ್ ಕಾಮಗಾರಿಗಳು ಈಗಾಗಲೇ ಪ್ರಾರಂಭಗೊಂಡಿದೆ. ಅಲ್ಲದೆ ಇತ್ತೀಚಿನ ಅಸೋಚಾಮ್ ಬಂಡವಾಳ ಹೂಡಿಕೆ ಅಂದಾಜು ವರದಿಯ ಪ್ರಕಾರ ಭಾರತದ 20 ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕವನ್ನು ಬಂಡವಾಳ ಹೂಡಿಕೆಗೆ ಅತ್ಯಂತ ನೆಚ್ಚಿನ ರಾಜ್ಯವೆಂಬುದಾಗಿ ಪರಿಗಣಿಸಲಾಗಿದೆ.

148. ಉದ್ಯಮಗಳ ಸ್ಥಾಪನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಹಾಗೂ ಹೆಚ್ಚು ಉದ್ಯೋಗಾವಕಾಶ ಒದಗಿಸಲು ಸಣ್ಣ ಪ್ರಮಾಣದ ಕೈಗಾರಿಕೆಗಳ

ಅಭಿವೃದ್ಧಿಗಾಗಿ ಪ್ರತಿಯೊಂದು ಕೈಗಾರಿಕಾ ಎಸ್ಟೇಟ್‌ಗಳಲ್ಲಿ ಕೆಲವು ಪ್ರದೇಶವನ್ನು ಮೀಸಲಿಡಲು ಉದ್ದೇಶಿಸಲಾಗಿದೆ.

149. ಹೊಸ ಕೈಗಾರಿಕಾ ಸಮುಚ್ಛಯಗಳನ್ನು ಸ್ಥಾಪಿಸಲು 62 ಕೋಟಿ ರೂ.ಗಳನ್ನು ಒದಗಿಸಲಾಗುವುದು.

150. ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟಗಳನ್ನು ಹೆಚ್ಚಿಸಲು ಈ ವರ್ಷ ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಲಾಗುವುದು. ಮೊದಲ ಹಂತದಲ್ಲಿ 1500 ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ತಲಾ 1 ಲಕ್ಷ ರೂ. ಬೆಲೆಯ ವಿದ್ಯುತ್‌ಚಾಲಿತ ಮಗ್ಗಗಳನ್ನು ಖರೀದಿಸಲು ಶೇ.50 ಅನುದಾನ ಒದಗಿಸಲಾಗುವುದು. ಈ ಉದ್ದೇಶಕ್ಕೆ 15 ಕೋಟಿ ರೂ.ಗಳನ್ನು ಒದಗಿಸಲಾಗುವುದು.

151. ಮೈಸೂರು ಪೇಪರ್ ಮಿಲ್ಸ್ ರಾಜ್ಯದ ಪ್ರತಿಷ್ಠಿತ ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಒಂದಾಗಿದೆ. ಕಳೆದ ಹಲವು ವರ್ಷಗಳಲ್ಲಿ ಕ್ರೋಢೀಕೃತ ನಷ್ಟಗಳ ಕಾರಣದಿಂದಾಗಿ ಈ ಘಟಕದ ಕೈಗಾರಿಕಾ ಆರೋಗ್ಯವು ಹದಗೆಡುತ್ತಿದೆ. ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯನ್ನು ಪುನಃಶ್ಚೇತನಗೊಳಿಸಲು ಮತ್ತು ಅದಕ್ಕೆ ಮರುಜೀವ ತುಂಬಲು ಒಂದು ಸಮಗ್ರ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಅವಶ್ಯವಿರುವ ಸುಮಾರು 100 ಕೋಟಿ ರೂ.ಗಳ ಸಂಪನ್ಮೂಲವನ್ನು ಕ್ರೋಢೀಕರಿಸಲಾಗುವುದು.

152. ರಾಜ್ಯದ ಉದ್ದಗಲಕ್ಕೆ 20 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳಿವೆ. ಈ ವರ್ಷ ಬಿಜಾಪುರ ಮತ್ತು ನೆಲಮಂಗಲದಲ್ಲಿ 2 ಹೊಸ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಗಣಿಗಾರಿಕೆ

153. ರಾಜ್ಯದ ಖನಿಜ ಸಂಪತ್ತು ಅಕ್ರಮವಾಗಿ ರಫ್ತಾಗದಂತೆ ತಡೆಯಲು ರಾಜ್ಯ ಸರ್ಕಾರವು, ರಾಜ್ಯದಿಂದ ಕಬ್ಬಿಣದ ಅದಿರನ್ನು ರಫ್ತು ಮಾಡುವುದನ್ನು ನಿಷೇಧಿಸಲು ಒಂದು ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿತು. ಸರ್ಕಾರವು ಎಲ್ಲ ರೀತಿಯ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಸಂಕಲ್ಪ ಮಾಡಿದೆ ಎನ್ನುವ

ಒಂದು ಸ್ಪಷ್ಟ ಸಂದೇಶವನ್ನು ನಿಯಂತ್ರಕ ವ್ಯವಸ್ಥೆಗೆ ಕಳುಹಿಸಲಾಗಿದೆ. ರಾಜ್ಯ ಸರ್ಕಾರವು ಮಾಡಿರುವ ಪ್ರಯತ್ನಗಳನ್ನು ನ್ಯಾಯಾಲಯಗಳು ಎತ್ತಿ ಹಿಡಿದಿರುವುದಷ್ಟೇ ಅಲ್ಲದೆ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸಂವಾದಗಳಲ್ಲಿ ಮೌಲ್ಯವರ್ಧನೆಗಾಗಿ ರಾಷ್ಟ್ರದ ಖನಿಜ ಸಂಪತ್ತನ್ನು ರಕ್ಷಿಸುವ ಒಂದು ಕಾರ್ಯವನ್ನು ಸಹಾ ನಿರೂಪಿಸಿದೆ. ಹಲವಾರು ಉಕ್ಕು ತಯಾರಿಕಾ ಕಂಪನಿಗಳು ರಾಜ್ಯದಲ್ಲಿ ಉಕ್ಕು ಸ್ಥಾವರಗಳನ್ನು ಸ್ಥಾಪಿಸಲು ಈಗಾಗಲೇ ತಮ್ಮ ಯೋಜನೆಗಳನ್ನು ಮಂದಿಟ್ಟಿವೆ ಎನ್ನುವ ಅಂಶವು ಕರ್ನಾಟಕದ ಕೈಗಾರಿಕಾ ಅಭಿವೃದ್ಧಿಗೆ ಸರ್ಕಾರಕ್ಕಿರುವ ಮುಂದಾಲೋಚನೆಯನ್ನು ಪ್ರತಿಬಿಂಬಿಸುತ್ತದೆ.

154. ಅಕ್ರಮ ಗಣಿಗಾರಿಕೆ ನಿಯಂತ್ರಿಸಲು 'ಕರ್ನಾಟಕ (ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ಸಂಗ್ರಹಣೆ ತಡೆ) ನಿಯಮಗಳು, 2011' ನ್ನು ರೂಪಿಸಲಾಗಿದೆ. ಅಲ್ಲದೆ ಸರ್ಕಾರವು ಇಡೀ ಖನಿಜಾಡಳಿತ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಕ್ರಮಗಳನ್ನು ತೆಗೆದುಕೊಂಡಿದೆ. ಈ ಹಣಕಾಸು ವರ್ಷದಲ್ಲಿ ಗಳಿಸಿದ ಒಟ್ಟು ಆದಾಯವು ಈಗಾಗಲೇ 900 ಕೋಟಿ ರೂ.ಗಳನ್ನು ದಾಟಿದೆ ಮತ್ತು 1100 ಕೋಟಿ ರೂ. ತಲುಪುವ ಸಂಭವವಿದ್ದು ಅದು ಕಳೆದ ವರ್ಷದ ಆದಾಯಕ್ಕಿಂತ ಸುಮಾರು ಶೇ.25ಕ್ಕಿಂತ ಹೆಚ್ಚಾಗಿರುತ್ತದೆ. ಇದನ್ನು ಕಟ್ಟುನಿಟ್ಟಿನ ಜಾರಿ ಚಟುವಟಿಕೆ, ಗಣಕೀಕರಣ ಮತ್ತು ನಿರಂತರ ನಿಗಾವಹಿಸುವ ಮೂಲಕ ಸಾಧಿಸಲಾಗಿದೆ.

155. **ಹೊಸ ಮರಳು ನೀತಿ:** ಮರಳಿನ ದುರುಪಯೋಗ ನಿಯಂತ್ರಣದಲ್ಲಿ ಮರಳನ್ನು ತೆಗೆಯುವುದು, ಅದರ ಉಪಯೋಗದ ಸ್ಥಿರತೆ ಮತ್ತು ಹೆಚ್ಚುತ್ತಿರುವ ಬೇಡಿಕೆಯಲ್ಲೂ ಸಹ ಅದನ್ನು ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವುದು ಮುಂತಾದ ಅನೇಕ ಅಂಶಗಳು ಒಳಗೊಂಡಿವೆ. ಈ ನೀತಿಯಿಂದಾಗಿ ಮರಳು ಗಣಿಗಾರಿಕೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು ಪರಿಸರ ಸಮತೋಲನ ಕಾಪಾಡಿಕೊಂಡು ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಮರಳು ಸಿಗುವಂತಾಗಲಿದೆ.

ಕಾರ್ಮಿಕ ಕಲ್ಯಾಣ, ಉದ್ಯೋಗ ಮತ್ತು ತರಬೇತಿ

156. ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯನ್ನು 5 ಪ್ರಾಯೋಗಿಕ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಬೆಳಗಾವಿ, ದಕ್ಷಿಣ ಕನ್ನಡ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯು 5 ಜನರ ಒಂದು ಕುಟುಂಬಕ್ಕೆ 30,000 ರೂಪಾಯಿವರೆಗೆ ವೈದ್ಯಕೀಯ ಸಹಾಯವನ್ನು ಒದಗಿಸುತ್ತದೆ. ಈ 5 ಜಿಲ್ಲೆಗಳಲ್ಲಿ 1.61 ಲಕ್ಷ ಸ್ಮಾರ್ಟ್ ಕಾರ್ಡ್‌ಗಳನ್ನು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಲಾಗಿದೆ. ಈ ಯೋಜನೆಗೆ 30 ಕೋಟಿ ರೂಪಾಯಿ ಅನುದಾನವನ್ನು ಒದಗಿಸಲಾಗಿದೆ.

157. ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರಿದ ಖಾಸಗಿ ಹೋಟೆಲ್ ಕಾರ್ಮಿಕರು, ಬಸ್, ಲಾರಿ ಹಾಗೂ ಆಟೋ ಚಾಲಕರು, ದುರಸ್ತಿ ವರ್ಕ್‌ಶಾಪ್‌ಗಳಲ್ಲಿ ದುಡಿಯುವ ಕೆಲಸಗಾರರು ಮುಂತಾದವರಿಗೆ ಸ್ವಾವಲಂಬನ ಯೋಜನೆಯಂತಹ ಹೊಸ ಪಿಂಚಣಿ ಪದ್ಧತಿಯನ್ನು ಅನುಷ್ಠಾನಗೊಳಿಸಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. 2011–12ರಲ್ಲಿ 4 ಲಕ್ಷ ಅಸಂಘಟಿತ ಕೆಲಸಗಾರರು ಈ ಯೋಜನೆಯಲ್ಲಿ ನೊಂದಣಿಯಾಗುತ್ತಾರೆಂದು ನಿರೀಕ್ಷಿಸಲಾಗಿದೆ. ಯೋಜನೆಗೆ 25 ಕೋಟಿ ರೂ. ಅನುದಾನವನ್ನು ಒದಗಿಸಲಾಗುವುದು.

158. ಕೌಶಲ್ಯ ಆಯೋಗವನ್ನು ರಚಿಸಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. 2010–11ರಲ್ಲಿ 10 ಕೌಶಲ್ಯ ಮತ್ತು ಉದ್ಯೋಗ ಮೇಳಗಳು ಮತ್ತು 54 ಸಣ್ಣ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದ್ದು, ಇವುಗಳಲ್ಲಿ 3.5 ಲಕ್ಷಕ್ಕೂ ಹೆಚ್ಚಿನ ಯುವಕರು ಭಾಗವಹಿಸಿದ್ದರು. 94,071 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗಿದೆ ಮತ್ತು 80,395 ಜನರಿಗೆ ಉದ್ಯೋಗ ಒದಗಿಸಲಾಗಿದೆ.

159. ಸುವರ್ಣ ವಸ್ತ್ರ ನೀತಿ ಅನುಷ್ಠಾನಗೊಳಿಸಲು 2011–12ನೇ ಸಾಲಿನಲ್ಲಿ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು. ರಾಜ್ಯದಲ್ಲಿ ಜವಳಿ ಮತ್ತು ವಸ್ತ್ರ ವಿನ್ಯಾಸ ಕ್ಷೇತ್ರದಲ್ಲಿ ಕುಶಲಕರ್ಮಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಸೂಕ್ತ ಕೌಶಲ್ಯ

ತರಬೇತಿಯನ್ನು ನೀಡಿದಲ್ಲಿ ಮಹಿಳೆಯರು ಮತ್ತು ಇತರೇ ದುರ್ಬಲವರ್ಗದವರನ್ನು ಒಳಗೊಂಡಂತೆ ಯುವಜನತೆಗೆ ಲಾಭದಾಯಕ ಉದ್ಯೋಗ ಲಭಿಸಲಿದೆ. ಈ ನಿಟ್ಟಿನಲ್ಲಿ ವಸ್ತ್ರ ವಿನ್ಯಾಸ ಮತ್ತು ತರಬೇತಿ ಕೇಂದ್ರವು ರಾಜ್ಯದಲ್ಲಿ ಯುವಜನತೆಗೆ ತರಬೇತಿಯನ್ನು ನೀಡುತ್ತಿದೆ. ಈ ಪ್ರಯತ್ನಕ್ಕೆ ಪೂರಕವಾಗಿ ವಸ್ತ್ರ ವಿನ್ಯಾಸ ಮತ್ತು ತರಬೇತಿ ಕೇಂದ್ರ ಆಯೋಜಿಸುವ ವಿವಿಧ ಕೋರ್ಸ್‌ಗಳಲ್ಲಿ ತರಬೇತಿ ಪಡೆಯಲು ಅಭ್ಯರ್ಥಿಗಳನ್ನು ಸರ್ಕಾರದಿಂದ ಪ್ರಾಯೋಜಿಸಲಾಗುವುದು.

160. ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಮತ್ತು ಡಯಾಗ್ನಿಸ್ಟಿಕ್ ಕೇಂದ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಜಿಸಲು ವೈದ್ಯಕೀಯ ವಿದ್ಯುನ್ಮಾನ ವೃತ್ತಿಯನ್ನು ಪ್ರಾರಂಭಿಸಲಾಗುವುದು.

161. ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಟೋ ಮೆಕಾನಿಕ್ ಕೋರ್ಸ್ ಪ್ರಾರಂಭಿಸಲಾಗುವುದು.

162. ಗುಲ್ಬರ್ಗಾ ಮತ್ತು ಬೆಂಗಳೂರಿನಲ್ಲಿ ಎರಡು ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು 65 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಇದಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಾಗಿ 32 ಕೋಟಿ ರೂಪಾಯಿಗಳನ್ನು ಒದಗಿಸುವುದು.

163. ರಾಜ್ಯದಲ್ಲಿ ಖಾಸಗಿ ವಾಹನಗಳಾದ ಆಟೋ, ಬಸ್, ಮ್ಯಾಕ್ಸಿಕ್ಯಾಬ್, ಲಾರಿ, ಟ್ಯಾಕ್ಸಿ ಚಾಲಕರುಗಳು ವಾಹನ ಚಲಾಯಿಸುತ್ತಿದ್ದಾಗ ಅಪಘಾತಗೊಂಡಲ್ಲಿ, ಅಂತಹವರ ಕುಟುಂಬ ವರ್ಗದವರಿಗೆ ಯಾವುದೇ ಆರ್ಥಿಕ ಭದ್ರತೆ ಇರುವುದಿಲ್ಲ. ಆದುದರಿಂದ ಇಂತಹ ವಾಹನಗಳ ಚಾಲಕರುಗಳಿಗೆ ಒಂದು ಹೊಸ ವಿಮೆ ಯೋಜನೆಯನ್ನು ಜಾರಿಗೊಳಿಸಲಾಗುವುದು.

ಪ್ರವಾಸೋದ್ಯಮ

164. ನಮ್ಮ ರಾಜ್ಯವು ನೈಸರ್ಗಿಕ ಸಂಪನ್ಮೂಲ, ಪುರಾತನ ಸ್ಮಾರಕಗಳು, ದೇವಾಲಯಗಳು ಹಾಗೂ ಕಲೆ ಮತ್ತು ಸಂಸ್ಕೃತಿಯನ್ನು ಹೊಂದಿರುವ ರಾಜ್ಯವಾಗಿದೆ. 2010–11ನೇ ಸಾಲಿನಲ್ಲಿ ಆಯೋಜಿಸಲಾದ 8 ಪ್ರಮುಖ ಅಂತರರಾಷ್ಟ್ರೀಯ ಪ್ರವಾಸ ವ್ಯಾಪಾರ ಮೇಳಗಳಲ್ಲಿ ಕರ್ನಾಟಕ

ಪ್ರವಾಸೋದ್ಯಮವನ್ನು ಭಾರತದ ಅತ್ಯಂತ ಆಕರ್ಷಣೀಯ ಪ್ರವಾಸೋದ್ಯಮ ತಾಣವೆಂದು ಗುರುತಿಸಿದೆ. ಹೊಸ ಮೂಲಸೌಕರ್ಯ ಕಾಮಗಾರಿಗಳನ್ನು ಪ್ರಾರಂಭಿಸಲು 2011–12ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಒದಗಿಸಲಾಗುವುದು.

165. 2010–11ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿಯಲ್ಲಿ ಪರಿಸರ ಪ್ರವಾಸೋದ್ಯಮ ಯೋಜನೆ, ಧಾರವಾಡದಲ್ಲಿರುವ ಸಾಧನಕೇರಿ ಸುಂದರೀಕರಣ ಮತ್ತು ಮಲ್ಪೆ, ಮರವಂತೆ, ಸೇಂಟ್ ಮೇರೀಸ್ ದ್ವೀಪ ಮತ್ತು ಗೋಕರ್ಣಗಳಲ್ಲಿ ಪ್ರವಾಸೋದ್ಯಮ ಸೌಕರ್ಯಗಳನ್ನು ಸೃಜಿಸುವ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

166. ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣ ದೇವರಾಯರ ಪಟ್ಟಾಭಿಷೇಕ ಮಹೋತ್ಸವ ಜರುಗಿ 500 ವರ್ಷಗಳಾಗಿದ್ದು, ಇದರ ಸವಿನೆನಪಿಗಾಗಿ ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಪುನರ್ ನೆನಪಿಸುವಂತಹ ಥೀಮ್ ಪಾರ್ಕ್ ಒಂದನ್ನು ಹಂಪಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗಾಗಿ 2011–12ನೇ ಸಾಲಿನಲ್ಲಿ 100 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರವು ಒದಗಿಸಲಿದೆ. ಇದಲ್ಲದೆ, ಹಂಪಿ ನಗರ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

167. 2011–12ನೇ ಸಾಲಿನಲ್ಲಿ ಪ್ರವಾಸೋದ್ಯಮಕ್ಕಾಗಿ 250 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ

168. ಕನ್ನಡ ರಕ್ಷಣೆಗೆ ಹಾಗೂ ಸಹಾಯಕ್ಕೆ ನಮ್ಮ ಬದ್ಧತೆ ಮುಂದುವರೆದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಳೆದ ವರ್ಷ ಹಲವಾರು ಚಟುವಟಿಕೆಗಳನ್ನು ಕೈಗೊಂಡಿದೆ. ಇವುಗಳ ಪೈಕಿ ಹುಬ್ಬಳ್ಳಿಯಲ್ಲಿ ಗಂಗೂಬಾಯಿ ಹಾನಗಲ್ ಸಂಗೀತ ಶಾಲೆಯ ನಿರ್ವಹಣೆ, ಕೆಂಗೇರಿಯಲ್ಲಿ ಮಹಾತ್ಮಗಾಂಧಿ ಸ್ಮಾರಕ ನಿರ್ಮಾಣ, ಡಾ: ಪಂಡಿತ ಪುಟ್ಟರಾಜ ಗವಾಯಿ ಸ್ಮಾರಕದ ನಿರ್ಮಾಣ ಮತ್ತು ರಂಗಾಯಣದಲ್ಲಿನ ಚಟುವಟಿಕೆಗಳು ಒಳಗೊಂಡಿವೆ.

169. ಬೆಂಗಳೂರಿನ ಸೂಕ್ತ ಸ್ಥಳದಲ್ಲಿ ಕನ್ನಡಿಗರ ಹೆಮ್ಮೆ ಮತ್ತು ಕಣ್ಮಣಿಯಾದ ತಾಯಿ ಭುವನೇಶ್ವರಿಯ ಮೂರ್ತಿಯನ್ನು ಸ್ಥಾಪಿಸಿ ಅಂತರರಾಷ್ಟ್ರೀಯ ಪ್ರವಾಸಿಗರ ಗಮನ ಸೆಳೆಯಲಾಗುವುದು. ಈ ಉದ್ದೇಶಕ್ಕಾಗಿ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

170. ಇದಲ್ಲದೆ, ವಿವಿಧ ಕನ್ನಡ ಮತ್ತು ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ 2011-12ನೇ ಸಾಲಿನಲ್ಲಿ ಒಟ್ಟು 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

171. ಮೈಸೂರಿನಲ್ಲಿ ದಸರಾವನ್ನು ನಾಡ ಹಬ್ಬವಾಗಿ ಆಚರಿಸಲು 10 ಕೋಟಿ ರೂ.ಗಳನ್ನು ನೀಡಲಾಗುವುದು.

172. ಬಸವ ಅಂತರರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 25 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರವು ಒದಗಿಸಲಿದೆ. ಇದರ ಜೊತೆಗೆ ಹೊರ ದೇಶಗಳಲ್ಲಿರುವ ವೂರ್ಜ್‌ಬರ್ಗ್ ವಿಶ್ವವಿದ್ಯಾಲಯ, ಹೈಡೆಲ್‌ಬರ್ಗ್ ವಿಶ್ವವಿದ್ಯಾಲಯ, ಮ್ಯೂನಿಚ್ ವಿಶ್ವವಿದ್ಯಾಲಯ ಮತ್ತು ವಿಯೆನ್ನಾ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸಲು ತಲಾ 1 ಕೋಟಿ ರೂ.ಗಳನ್ನು ಒದಗಿಸಲಾಗುವುದು.

173. ರಾಜ್ಯದಲ್ಲಿ ಕಲೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಬೆಂಗಳೂರಿನಲ್ಲಿ ನಾಡಪ್ರಭು ಕೆಂಪೇಗೌಡರವರ ಹೆಸರಿನಲ್ಲಿ ಕಲಾ ಭವನವನ್ನು ನಿರ್ಮಿಸಲಾಗುವುದು. ಈ ಉದ್ದೇಶಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

174. ಬಸವ ಜಯಂತಿ, ಕನಕ ಜಯಂತಿ, ಅಂಬೇಡ್ಕರ್ ಜಯಂತಿ, ಹಾಗೂ ವಾಲ್ಮೀಕಿ ಜಯಂತಿ ಉತ್ಸವಗಳನ್ನು ಸರ್ಕಾರದ ವತಿಯಿಂದ ಆಚರಿಸಲು ಜಿಲ್ಲಾ ಮಟ್ಟದಲ್ಲಿ 50,000 ರೂ.ಗಳನ್ನು ಮತ್ತು ತಾಲ್ಲೂಕು ಮಟ್ಟದಲ್ಲಿ 25,000 ರೂ.ಗಳನ್ನು ಒದಗಿಸಲಾಗುವುದು.

175. ಬೆಂಗಳೂರಿನಲ್ಲಿ ನಡೆದ 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ಸ್ಮಾರಕ ಭವನ ನಿರ್ಮಾಣಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

176. ಕುವೆಂಪು ಅವರ ಹೆಸರಿನಲ್ಲಿ ಒಂದು ದರ್ಶನ ಭವನ, ವಸ್ತುಸಂಗ್ರಹಾಲಯ ಮತ್ತು 'ಸಾಹಿತಿಗಳ ನೆನಪಿನಂಗಳ' ಸ್ಮಾರಕ ಸ್ಥಾಪಿಸಲು ಪ್ರಾರಂಭಿಕವಾಗಿ 5 ಕೋಟಿ ರೂ. ಒದಗಿಸಲಾಗುವುದು.

177. ಕನ್ನಡದ ಅಶಕ್ತ ಬರಹಗಾರರಿಗೆ ತಮ್ಮ ಕೃತಿಗಳನ್ನು ಪ್ರಕಟಿಸಲು ನೆರವಾಗುವ ಸಲುವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಮುಖಾಂತರ 5 ಕೋಟಿ ರೂ.ಗಳ ಸಹಾಯಾನುದಾನವನ್ನು 2011–12ನೇ ಸಾಲಿನಲ್ಲಿ ಒದಗಿಸಲಾಗುವುದು.

178. ಕರ್ನಾಟಕ ಜಾನಪದ ಪರಿಷತ್ತು ಜಾನಪದ ಕಲೆಗಳ ಸಂರಕ್ಷಣೆಗೆ ಹಾಗೂ ಪ್ರೋತ್ಸಾಹಕ್ಕಾಗಿ ಮಹತ್ವದ ಕಾರ್ಯನಿರ್ವಹಿಸುತ್ತಿದೆ. ಪರಿಷತ್ತಿನ ಈ ಸಾಧನೆಯನ್ನು ಗುರುತಿಸಿ 2011–12ನೇ ಸಾಲಿಗೆ 1 ಕೋಟಿ ರೂ.ಗಳನ್ನು ನೀಡಲಾಗುವುದು.

179. ಜಾನಪದ ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯನ್ನು ಶಿಗ್ಗಾವಿಯಲ್ಲಿ ಸ್ಥಾಪಿಸಲಾಗುವುದು.

180. ಬೆಳಗಾವಿಯಲ್ಲಿ ಮಾರ್ಚ್ 2011ರಲ್ಲಿ ನಡೆಯುವ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಗಾಜಿನ ಮನೆಯೊಂದನ್ನು ನಿರ್ಮಿಸಲು 5 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.

181. ಕೊಂಕಣಿ ಭಾಷೆ ಮತ್ತು ಸಂಸ್ಕೃತಿ ಅಭಿವೃದ್ಧಿ ಕಾರ್ಯಗಳಿಗಾಗಿ 2011–12ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

182. ಸಂಸ್ಕೃತ ವಿಕಿಪಿಡಿಯಾವನ್ನು ಅಭಿವೃದ್ಧಿಗೊಳಿಸಲು, ಸಂಸ್ಕೃತ ಭಾರತಿ ಸಂಸ್ಥೆಗೆ ಸಹಾಯಧನವಾಗಿ ರೂ.1 ಕೋಟಿ ನೀಡಲಾಗುವುದು.

183. ಹುಬ್ಬಳ್ಳಿಯಲ್ಲಿರುವ ವರ್ಲ್ಡ್ ರಿನ್ಯೂವಲ್ ಸ್ಪಿರಿಚ್ಯುಯಲ್ ಟ್ರಸ್ಟ್‌ಗೆ 3 ಕೋಟಿ ರೂ.ಗಳನ್ನು ಒದಗಿಸಲಾಗುವುದು.

184. ಲಂಡನ್‌ನಲ್ಲಿ ಬಸವ ಪುತ್ಥಳಿ ನಿರ್ಮಿಸಲು 3 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

185. ಶ್ರೀ ಎಸ್. ನಿಜಲಿಂಗಪ್ಪ ಸ್ಮಾರಕದ ಮೂಲಕ ಸಂಶೋಧನಾ ಚಟುವಟಿಕೆಗಳಿಗಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

186. ಚಲನಚಿತ್ರ ಹಾಸ್ಯಕಲಾವಿದರಾಗಿದ್ದ ಶ್ರೀ ಟಿ.ಆರ್. ನರಸಿಂಹರಾಜು ಸ್ಮರಣಾರ್ಥ ತಿಪಟೂರಿನಲ್ಲಿ ಒಂದು ಕಲಾಮಂದಿರವನ್ನು ನಿರ್ಮಿಸಲು 1 ಕೋಟಿ ರೂ.ಗಳನ್ನು ಒದಗಿಸಲಾಗುವುದು.

187. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸುವರ್ಣ ಮಹೋತ್ಸವದ ಅಂಗವಾಗಿ ನಿರ್ಮಿಸಲಾಗುವ ಬಹು ಉದ್ದೇಶಿತ ಶೈಕ್ಷಣಿಕ ಸಮುಚ್ಚಯಕ್ಕಾಗಿ 1 ಕೋಟಿ ರೂ.ಗಳನ್ನು ನೀಡಲಾಗುವುದು ಹಾಗೂ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕನ್ನಡಿಗರ ಮಕ್ಕಳಿಗಾಗಿ ಸಾರಿಗೆ ವ್ಯವಸ್ಥೆ ಬಲಪಡಿಸಲು ಎರಡು ಹೊಸ ಬಸ್ಸುಗಳನ್ನು ಖರೀದಿಸಲು 50 ಲಕ್ಷ ರೂ.ಗಳನ್ನು ಒದಗಿಸಲಾಗುವುದು.

188. ದೆಹಲಿ ಕರ್ನಾಟಕ ಸಂಘಕ್ಕೆ 1 ಕೋಟಿ ರೂ. ಒದಗಿಸಲಾಗುವುದು.

189. ಭಾರತೀಯ ಪರಂಪರೆಯ ಉದ್ಯಾನವನವನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ರೂ.100 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವುದು. ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು 2011–12ನೇ ಸಾಲಿನಲ್ಲಿ ತನ್ನ ಪಾಲಿನ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

190. ಬಳ್ಳಾರಿಯಲ್ಲಿ ಸುಸಜ್ಜಿತ ರಂಗಮಂದಿರವನ್ನು ರಂಗತೋರಣ ಸಂಸ್ಥೆಯ ಮೂಲಕ ನಿರ್ಮಿಸಲು ರಾಜ್ಯ ಸರ್ಕಾರವು 1 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಿದೆ.

191. ಶ್ರೀ ರಾಜಶೇಖರಮೂರ್ತಿಯವರು ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗಾಗಿ 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ವಾರ್ತಾ ಮತ್ತು ಪ್ರಸಾರ

192. ಕಂಠೀರವ ಸ್ಟುಡಿಯೋದ ನವೀಕರಣಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

193. ಬೆಂಗಳೂರಿನಲ್ಲಿ ನಡೆಯುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಸರ್ಕಾರವು 5 ಕೋಟಿ ರೂ. ಒದಗಿಸುವುದು.

194. ರಾಜ್ಯ ಸರ್ಕಾರವು ಉತ್ತಮ ಕನ್ನಡ ಚಲನಚಿತ್ರಗಳ ನಿರ್ಮಾಣವನ್ನು ಪ್ರೋತ್ಸಾಹಿಸಲು ಪ್ರತಿ ವರ್ಷ ಆರ್ಥಿಕ ನೆರವು ಪಡೆಯುತ್ತಿರುವ ಚಲನಚಿತ್ರಗಳ ಸಂಖ್ಯೆಯನ್ನು 50 ರಿಂದ 75ಕ್ಕೆ ಹೆಚ್ಚಿಸಲಾಗುವುದು.

ಯುವಜನಸೇವೆ ಮತ್ತು ಕ್ರೀಡೆಗಳು

195. ಇತ್ತೀಚಿಗೆ ನವದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾ ಕೂಟ ಮತ್ತು ಚೀನಾದಲ್ಲಿ ನಡೆದ ಏಷ್ಯನ್ ಕ್ರೀಡಾ ಕೂಟಗಳಲ್ಲಿ ರಾಜ್ಯದ ಸ್ಪರ್ಧಿಗಳು ಅತ್ಯುತ್ತಮ ಸಾಧನೆ ತೋರಿ ಚಿನ್ನದ ಪದಕಗಳನ್ನೊಳಗೊಂಡಂತೆ ಅನೇಕ ಪದಕಗಳನ್ನು ಪಡೆದು ರಾಜ್ಯಕ್ಕೆ ಕೀರ್ತಿ ತಂದಿರುತ್ತಾರೆ. ಈ ಸಂದರ್ಭದಲ್ಲಿ ನಾನು ಅವರುಗಳನ್ನು ರಾಜ್ಯದ ಜನತೆಯ ಪರವಾಗಿ ಅಭಿನಂದಿಸುತ್ತೇನೆ. ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆಯ್ಕೆಯಾಗುವ ರಾಜ್ಯದ ಕ್ರೀಡಾಪಟುಗಳು ತರಬೇತಿಗೆ ಹಾಜರಾದಾಗ ಪ್ರತಿ ದಿನಕ್ಕೆ 100 ರೂ.ಗಳ ವಿಶೇಷ ತರಬೇತಿ ಭತ್ಯೆಯನ್ನು ನೀಡಲಾಗುವುದು. ಇದರ ಜೊತೆಗೆ, ರಾಜ್ಯದ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಅಗತ್ಯವಿರುವ ಆಧುನಿಕ ತರಬೇತಿಯನ್ನು ನೀಡಲು ಈ ಆಯವ್ಯಯದಲ್ಲಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

196. ಶಿವಮೊಗ್ಗದಲ್ಲಿನ ಶಿವಗಂಗಾ ಯೋಗ ಕೇಂದ್ರದ ಯೋಗ ತರಬೇತಿಗಾಗಿ 25 ಲಕ್ಷ ರೂ. ಮತ್ತು ಶಿರಸಿಯ ನಿಸರ್ಗ ಟ್ರಸ್ಟ್‌ಗೆ ಸಹಾಯಧನವಾಗಿ 25 ಲಕ್ಷ ರೂ. ನೀಡಲಾಗುವುದು.

197. ಅವಶ್ಯಕತೆಯಿರುವ ಜಿಲ್ಲೆಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿ ಈಜುಕೊಳ ನಿರ್ಮಾಣ ಮಾಡಲು ನಗರಾಭಿವೃದ್ಧಿ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ 2011--12ನೇ ಸಾಲಿನಲ್ಲಿ ರಾಜ್ಯ ಸರ್ಕಾರವು 10 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

198. ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಒಂದು ಉತ್ತಮ ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

199. ಶಿವಮೊಗ್ಗ ಜಿಲ್ಲೆಯ ವಿದ್ಯಾನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾ ಸಮುಚ್ಚಯ ನಿರ್ಮಿಸಲಾಗುವುದು ಹಾಗೂ ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

200. ಈ ವರ್ಷ ಬಳ್ಳಾರಿಯಲ್ಲಿ ಒಂದು ಕ್ರೀಡಾ ಸಮುಚ್ಚಯ ನಿರ್ಮಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ

201. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಭಾರತ ದೇಶದಲ್ಲಿ ಕರ್ನಾಟಕವು ಜೈವಿಕ ತಂತ್ರಜ್ಞಾನಕ್ಕೆ ಅತಿ ಹೆಚ್ಚು ಸಹಯೋಗಿ ಬಂಡವಾಳವನ್ನು ಆಕರ್ಷಿಸುತ್ತಿದೆ. ಈ ವಲಯದ ಒಟ್ಟಾರೆ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಕೈಗಾರಿಕಾ ಸ್ನೇಹಿ ವಾತಾವರಣವನ್ನು ನಿರ್ಮಿಸಲು ರಾಜ್ಯ ಸರ್ಕಾರವು ಸೆಮಿ ಕಂಡಕ್ಟರ್ ಪಾಲಿಸಿ, ಬಯೋಟೆಕ್ ಪಾಲಿಸಿ,. ಐಸಿಟಿ ಪಾಲಿಸಿ ಮತ್ತು ಎಲೆಕ್ಟ್ರಾನಿಕ್ ಮತ್ತು ಹಾರ್ಡ್‌ವೇರ್ ಪಾಲಿಸಿ ಮುಂತಾದ ಅನೇಕ ಕಾರ್ಯನೀತಿಗಳನ್ನು ಘೋಷಿಸಿದೆ. ಗ್ರಾಮೀಣ ಯುವಕರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ 32 ಗ್ರಾಮೀಣ ಬಿಪಿಒಗಳನ್ನು ಈವರೆಗೆ ಮಂಜೂರು ಮಾಡಲಾಗಿದೆ.

202. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಡಿ ಮಾಹಿತಿ ತಂತ್ರಜ್ಞಾನ / ITES ವಿದ್ಯುನ್ಮಾನ ಹಾರ್ಡ್‌ವೇರ್ ತಯಾರಿಕೆಯನ್ನು ಪ್ರೋತ್ಸಾಹಿಸಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಒಂದು ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯವನ್ನು (ITIR) ಸ್ಥಾಪಿಸಲಾಗುತ್ತಿದೆ. ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯದಲ್ಲಿ ಅತ್ಯುತ್ತಮ ಮೂಲಸೌಕರ್ಯ ಒದಗಿಸಲು ಮತ್ತು ಬಂಡವಾಳ ಹೂಡಿಕೆದಾರರಿಗೆ ಸ್ನೇಹಪರ ವಾತಾವರಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. 2072 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿಬಿ ಮೊದಲ ಹಂತದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದೆ.

203. ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ ಬೆಂಗಳೂರು ಸಂಸ್ಥೆಯು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಪಾರ ಕೊಡುಗೆ

ನೀಡುತ್ತಿರುವುದನ್ನು ಮನಗಂಡು ಧಾರವಾಡ ಜಿಲ್ಲೆಯಲ್ಲಿ ಪದವಿ ಪೂರ್ವ ಕ್ಯಾಂಪಸ್ ಸ್ಥಾಪಿಸಲು ಈ ಸಂಸ್ಥೆಗೆ 50 ಎಕರೆ ಜಮೀನನ್ನು ರಾಜ್ಯ ಸರ್ಕಾರವು ಒದಗಿಸುವುದು.

204. ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ಮೇಲ್ವಿಚಾರಣ ಕೇಂದ್ರದ ಮುಖ್ಯ ನಿಯಂತ್ರಣಾ ಸೌಲಭ್ಯ ಕಟ್ಟಡದ ನಿರ್ಮಾಣವು ಪ್ರಗತಿಯಲ್ಲಿದ್ದು, ಇದನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು.

205. 40 ಉನ್ನತ ಶಿಕ್ಷಣ ಸಂಸ್ಥೆಗಳ ವಿಜ್ಞಾನ ಮತ್ತು ತಂತ್ರಜ್ಞಾನ ಮೂಲಸೌಕರ್ಯವನ್ನು ಬಲಗೊಳಿಸಲು ಒಂದು ಕೋಟಿ ರೂ. ಸಹಾಯಾನುದಾನವನ್ನು ಒದಗಿಸಲಾಗುವುದು.

206. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಸಂಘಕ್ಕೆ 2 ಕೋಟಿ ರೂ. ಸಹಾಯ ನೀಡಲಾಗುವುದು.

207. **ಚಿತ್ರದುರ್ಗ ಜಿಲ್ಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ:** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಸಂಪನ್ಮೂಲ ಕೇಂದ್ರವನ್ನಾಗಿಸುವ ನಮ್ಮ ಸರ್ಕಾರದ ಕ್ರಮಗಳನ್ನು ಮಾನ್ಯ ಸದಸ್ಯರುಗಳು ಸ್ವಾಗತಿಸುತ್ತಾರೆಂದು ಭಾವಿಸಿದ್ದೇನೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಯೋಜನೆಗಳಿಗಾಗಿ 4,250 ಎಕರೆ ಪ್ರದೇಶಗಳನ್ನು ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಎರಡನೇ ಕ್ಯಾಂಪಸ್ ಸ್ಥಾಪಿಸಲು 1,500 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ. ಬಾಬಾ ಅಣು ಸಂಶೋಧನಾ ಕೇಂದ್ರ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳ ಯೋಜನೆಗಳಿಗೂ ಸಹ ಜಮೀನನ್ನು ಒದಗಿಸಲಾಗಿದೆ. ಇದಲ್ಲದೆ, ಹಿಂದುಳಿದಿರುವ ಸಣ್ಣ ಕೈಗಾರಿಕಾ ವಲಯವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ 400 ಎಕರೆಯನ್ನು ಮತ್ತು ಆಧುನಿಕ ವಸತಿ ಯೋಜನೆ "ವೇದವತಿ ನಗರ"ವನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ಗೃಹ ಮಂಡಳಿಗೆ 50 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಈ ಕ್ಷೇತ್ರದಲ್ಲಿ ವಿವಿಧ ಸಂಸ್ಥೆಗಳು ಸುಮಾರು 5,000 ಕೋಟಿ ರೂ.ಗಳ ಬಂಡವಾಳವನ್ನು ಹೂಡಲಿವೆ.

ಇ–ಆಡಳಿತ

208. ರಾಜ್ಯ ಸರ್ಕಾರವು ಇ–ಸಂಗ್ರಹಣೆ, HRMS, KSWAN, ಬೆಂಗಳೂರು–ಒನ್ ಮತ್ತು ನೆಮ್ಮದಿ ಗ್ರಾಮೀಣ ಟೆಲಿ ಸೆಂಟರ್ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ರಾಜ್ಯವು ಒಂದೇ ಛಾವಣಿಯಡಿಯಲ್ಲಿ 45 ಸಾರ್ವಜನಿಕ ಸ್ನೇಹಿ ಸೇವೆಗಳೊಂದಿಗೆ, 63 ಬೆಂಗಳೂರು–ಒನ್ ಕೇಂದ್ರಗಳನ್ನು ಸ್ಥಾಪಿಸಿದೆ. ಬೆಂಗಳೂರು–ಒನ್, ಕೇಂದ್ರಗಳ ಮಾದರಿಯಲ್ಲಿ ರಾಜ್ಯದ 9 ಎರಡನೇ ಶ್ರೇಣಿ ನಗರಗಳಲ್ಲಿ 35 ಕರ್ನಾಟಕ–ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇ–ಸಂಗ್ರಹಣಾ ಯೋಜನೆಯು 90 ಇಲಾಖೆಗಳು/ಸಂಸ್ಥೆಗಳನ್ನು ತನ್ನ ವ್ಯಾಪ್ತಿಯಲ್ಲಿ ತಂದಿದೆ. ಇ–ಸಂಗ್ರಹಣೆ ಪ್ರಕ್ರಿಯೆಯಿಂದಾಗಿ ಸ್ಪರ್ಧೆಯು ಹೆಚ್ಚಾಗಿದ್ದು ಟೆಂಡರ್ ಪ್ರೀಮಿಯಮ್ ಮೊತ್ತದಲ್ಲಿ ಕೂಡ ಇಳಿಕೆಯಾಗಿರುತ್ತದೆ.

209. ರಾಜ್ಯದ ಎಲ್ಲಾ ನಿವಾಸಿಗಳಿಗೆ ಪ್ರತ್ಯೇಕ ಗುರುತಿನ ಚೀಟಿ ನೀಡುವ ಮಹತ್ವಾಕಾಂಕ್ಷೆಯ 'ಆಧಾರ್' (UID) ಯೋಜನೆಯನ್ನು ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ನಮ್ಮ ರಾಜ್ಯವು ದೇಶದಲ್ಲೇ ಪ್ರಥಮ ಸ್ಥಾನದಲ್ಲಿದೆ. ಮಾರ್ಚ್ 2011ರಲ್ಲಿ ಇನ್ನೂ 8 ಬೇರೆ ಜಿಲ್ಲೆಗಳು ಈ ಯೋಜನೆಯ ಅನುಷ್ಠಾನಕ್ಕೆ ಒಳಗೊಳ್ಳುತ್ತವೆ. ಈವರೆವಿಗೆ ರಾಜ್ಯದಲ್ಲಿ 14 ಲಕ್ಷ ಜನರು ನೋಂದಣಿಯಾಗಿರುತ್ತಾರೆ.

210. ತಾಲ್ಲೂಕು ಕಛೇರಿಗಳಲ್ಲಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವಂತಾಗಲು ಸಮಗ್ರ ಇ–ಆಡಳಿತ ಯೋಜನೆಯೊಂದನ್ನು ಶಿವಮೊಗ್ಗ ಮತ್ತು ಶಿಕಾರಿಪುರ ತಾಲ್ಲೂಕು ಕಛೇರಿಗಳಲ್ಲಿ ಪ್ರಾರಂಭಿಸಲಾಗುವುದು.

211. ಇ–ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ಯೋಜನೆಗಳಿಗೆ 40 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಕಂದಾಯ

212. ಸಾಮಾಜಿಕ ಭದ್ರತಾ ಯೋಜನೆಗಳಾದ ಸಂಧ್ಯಾ ಸುರಕ್ಷಾ ಯೋಜನೆ, ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ, ನಿಶ್ಯಕ್ತ ವಿಧವಾ ಪಿಂಚಣಿ ಯೋಜನೆ ಮತ್ತು ಅಶಕ್ತ ಪಿಂಚಣಿ ಯೋಜನೆಯಲ್ಲಿ ಒಳಗೊಂಡಿರುವ 39.75 ಲಕ್ಷ

ಕುಟುಂಬಗಳಿಗೆ ಸರ್ಕಾರವು ಆರ್ಥಿಕ ಸಹಾಯವನ್ನು ಒದಗಿಸುತ್ತಿದೆ. ಈ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಲು ಸಾಮಾಜಿಕ ಭದ್ರತಾ ಸಹಾಯವನ್ನು ವಿದ್ಯುನ್ಮಾನ ಪಾವತಿ ಪದ್ಧತಿ ಮುಖಾಂತರ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ. 2011–12 ರಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ 1,742 ಕೋಟಿ ರೂಪಾಯಿಗಳನ್ನು ಒದಗಿಸಿದೆ.

213. ಕಂದಾಯ ಇಲಾಖೆಯು ಕಂದಾಯ ದಾಖಲೆಗಳ ಸ್ಕ್ಯಾನಿಂಗ್, ಗಣಕೀಕೃತ ಭೂಸ್ವಾಧೀನ ಪ್ರಕ್ರಿಯೆ, ತತ್ಕಾಲ್ ಮ್ಯುಟೇಷನ್ ಮತ್ತು ನಗರ ಆಸ್ತಿ ಮಾಲೀಕತ್ವ ಯೋಜನೆ ಮುಂತಾದ ಹೊಸ ಉಪಕ್ರಮಗಳನ್ನು ತೆಗೆದುಕೊಂಡಿದೆ.

214. ಜಿಲ್ಲಾ ಕಛೇರಿಗಳ ಸಂಕೀರ್ಣದ ನಿರ್ಮಾಣಕ್ಕಾಗಿ 30 ಕೋಟಿ ರೂ.ಗಳನ್ನು ಒದಗಿಸಿದೆ. ಅದೇ ರೀತಿಯಲ್ಲಿ ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಾಣಕ್ಕಾಗಿ 25 ಕೋಟಿ ರೂ.ಗಳನ್ನು ಒದಗಿಸಿದೆ.

215. ಗ್ರಾಮ ಸಂಸ್ಥೆಗಳಲ್ಲಿ 10,450 ಗ್ರಾಮ ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಗೌರವಧನವನ್ನು ದಿನಾಂಕ:01.04.2011 ರಿಂದ ಜಾರಿಗೆ ಬರುವಂತೆ 3,000 ರೂ.ಗಳಿಂದ 3,500 ರೂ.ಗಳಿಗೆ ಹೆಚ್ಚಿಸಲಾಗುವುದು.

216. ಅಗತ್ಯವಿರುವ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ರುದ್ರಭೂಮಿ ಹಾಗೂ ನಗರ ಪ್ರದೇಶಗಳಲ್ಲಿ ಆಧುನಿಕ ವಿದ್ಯುತ್ ಚಿತಾಗಾರ ಒದಗಿಸಲು ರಾಜ್ಯ ಸರ್ಕಾರವು 60 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

217. ನಮ್ಮ ಸರ್ಕಾರವು ಭೂದಾಖಲೆಗಳ ನಿರ್ವಹಣೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ಸಹ, ಕೆಲವು ಸಂದರ್ಭಗಳಲ್ಲಿ ಹಕ್ಕು ದಾಖಲೆಗಳ ಆಧಾರವಾಗಿ ಮಾಲೀಕರಲ್ಲದೇ ಇರುವ ವ್ಯಕ್ತಿಗಳು ಸಹಾ ಆಸ್ತಿಗಳನ್ನು ನೋಂದಣಿ ಮಾಡುತ್ತಿರುವುದು ತಿಳಿದ ವಿಷಯವಾಗಿರುತ್ತದೆ. ಇದು ಸಿವಿಲ್ ವ್ಯಾಜ್ಯಗಳ ಹೆಚ್ಚಳಕ್ಕೆ ದಾರಿಯಾಗುತ್ತದೆ. ಆದ್ದರಿಂದ ಆರ್.ಟಿ.ಸಿ. ಅಥವಾ ಯು.ಪಿ.ಒ.ಆರ್. ದಾಖಲೆಗಳಲ್ಲಿ ನಮೂದಾಗಿರುವ ಮಾಲೀಕರು ಮಾತ್ರ ಆಸ್ತಿಗಳ ಹಕ್ಕು ದಾಖಲೆಗಳನ್ನು ಅರ್ಹ ನೋಂದಣಿ ಪೂರ್ವ ನಕ್ಷೆಗಳ ಮೂಲಕ ವರ್ಗಾಯಿಸುವ ವ್ಯವಸ್ಥೆ ಕಲ್ಪಿಸಲಾಗುವುದು. ಈ ಪ್ರಕ್ರಿಯೆಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು.

218. **ಸುವರ್ಣ ಸೌಧ:** ಬೆಳಗಾವಿಯಲ್ಲಿ ಸುವರ್ಣ ಸೌಧ ಕಟ್ಟಡ ನಿರ್ಮಾಣ ಯೋಜನೆ ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಇದು ಶೀಘ್ರದಲ್ಲಿಯೇ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಕಳೆದ ಎರಡು ವರ್ಷಗಳಲ್ಲಿ ಇದಕ್ಕಾಗಿ ಈಗಾಗಲೇ ಸರ್ಕಾರವು 212 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಮುಂದುವರೆದ ಕಾಮಗಾರಿಗಳಿಗಾಗಿ 2011–12ರಲ್ಲಿ 138 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಮುಜರಾಯಿ

219. 446 ದೇವಸ್ಥಾನಗಳಲ್ಲಿ ವಸತಿ ವ್ಯವಸ್ಥೆ ಮತ್ತು ಮೂಲಭೂತ ಸೌಕರ್ಯ ಒದಗಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

220. ಮೇಲುಕೋಟೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

221. ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ಅರಮೇರಿ ಕಳಂಚೇರಿ ಮಠದ ಅಭಿವೃದ್ಧಿ ಕಾರ್ಯಗಳಿಗಾಗಿ 1 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

222. ಹಾಸನ ನಗರದ ಹಾಸನಾಂಬ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ 1 ಕೋಟಿ ರೂ.ಗಳನ್ನು ಹಾಗೂ ಇದೇ ದೇವಸ್ಥಾನದಲ್ಲಿರುವ ಶ್ರೀ ಸಿದ್ದೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ 1 ಕೋಟಿ ರೂ.ಗಳನ್ನು ಒದಗಿಸಲಾಗುವುದು.

223. ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಚೆನ್ನವೀರ ಶಿವಯೋಗಿಗಳ ಪುಣ್ಯಾಶ್ರಮದ ಜೀರ್ಣೋದ್ಧಾರ ಕಾಮಗಾರಿಗೆ ಸಯಾಯಧನವಾಗಿ ರೂ.1 ಕೋಟಿ ನೀಡಲಾಗುವುದು.

ಒಳಾಡಳಿತ

224. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಉತ್ತಮ ರೀತಿಯಲ್ಲಿದೆ. ರಾಜ್ಯದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಕಾನೂನು ಮತ್ತು ಸುವ್ಯವಸ್ಥೆ ಪಾಲನೆಯು ಅತ್ಯಗತ್ಯ ಅಂಶವಾಗಿದೆ. 2010–11ರಲ್ಲಿ 31 ಆರಕ್ಷಕ ಠಾಣೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಮಂಗಳೂರಿನಲ್ಲಿ ಹೊಸ ಕಮೀಷನರೇಟ್ ಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯದಾದ್ಯಂತ ಪೊಲೀಸ್ ಠಾಣೆಗಳಲ್ಲಿ ಗಸ್ತು

ವ್ಯವಸ್ಥೆಗೆ 1035 ಎಎಸ್ಐ ಹುದ್ದೆಗಳನ್ನು ಸೃಜಿಸಲಾಯಿತು. ಪೊಲೀಸ್ ಇಲಾಖೆಯ ನಿಯಂತ್ರಣದ ಅಡಿಯಲ್ಲಿ 1060 ಅಧಿಕಾರಿಗಳು/ಸಿಬ್ಬಂದಿ ಬಲದೊಂದಿಗೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ದಳವನ್ನು (ಕೆ.ಎಸ್.ಐ.ಎಸ್.ಎಫ್.) ರಚಿಸಲಾಗಿದೆ.

225. ಬಳ್ಳಾರಿ ಜಿಲ್ಲೆಯಲ್ಲಿನ ಮೀನಹಳ್ಳಿಯಲ್ಲಿ ಸಶಸ್ತ್ರ ಮೀಸಲು ಪೊಲೀಸ್ ತರಬೇತಿ ಕೇಂದ್ರವನ್ನು 2011–12ರಲ್ಲಿ ಪೂರ್ಣಗೊಳಿಸಲಾಗುವುದು.

226. ಹೊಸ ಪೊಲೀಸ್ ಠಾಣೆಗಳ ನಿರ್ಮಾಣಕ್ಕೆ ಮತ್ತು ನಿರ್ಮಾಣ ಹಂತದಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು 2011–12ರಲ್ಲಿ 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.

227. **ಬಂದೀಖಾನೆ:** ಆಧುನೀಕರಣ ನಿಧಿಯಿಂದ 8 ಕೇಂದ್ರ ಬಂದೀಖಾನೆಗಳಿಗಾಗಿ ಭದ್ರತಾ ಉಪಕರಣಗಳಾದಂತಹ ಸೆಲ್‌ಫೋನ್ ಜಾಮರ್ಸ್, ಕ್ಲೋಸ್ಡ್ ಸರ್ಕ್ಯೂಟ್ ಟಿ.ವಿ. ಮತ್ತು ಐಪಿ ಕ್ಯಾಮರ್‌ಗಳು, ಎಕ್ಸ್–ರೇ ಬ್ಯಾಗೇಜ್ ಮತ್ತು ಬಾಡಿ ಸ್ಕ್ಯಾನರ್‌ಗಳನ್ನು ಖರೀದಿಸಲು 8 ಕೋಟಿ ರೂ.ಗಳನ್ನು ಒದಗಿಸಲಾಗುವುದು.

228. **ಸೈನಿಕ ಕಲ್ಯಾಣ:** ಸಶಸ್ತ್ರ ಪಡೆಗಳ ನೇಮಕಾತಿ ಸಂಸ್ಥೆ ನಡೆಸುವ ನೇಮಕ ರ‍್ಯಾಲಿಗಳಲ್ಲಿ ಆಯ್ಕೆ ಹೊಂದಲು ಶಕ್ತರಾಗಲು ಅಭ್ಯರ್ಥಿಗಳಿಗೆ ನೇಮಕಾತಿಗಾಗಿ ರಾಜ್ಯದೆಲ್ಲೆಡೆ ತರಬೇತಿ ನೀಡಲು ಹಣಕಾಸಿನ ನೆರವು ಒದಗಿಸಲಾಗುವುದು.

ಕಾನೂನು

229. ರಾಜ್ಯದಲ್ಲಿನ ವಿವಿಧ ನ್ಯಾಯಾಲಯಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ರಾಜ್ಯ ಸರ್ಕಾರವು ಬದ್ಧವಾಗಿದೆ. ಈ ಉದ್ದೇಶಕ್ಕಾಗಿ 2010–11ನೇ ಸಾಲಿನಲ್ಲಿ ನ್ಯಾಯಾಲಯಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ 35 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ಇದನ್ನು 2011–12ರಲ್ಲಿ 75 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು. ಮುಂಬರುವ ವರ್ಷಗಳಲ್ಲಿಯೂ ಸಹ ರಾಜ್ಯ ಸರ್ಕಾರವು ಈ ಉದ್ದೇಶಕ್ಕಾಗಿ ಅಗತ್ಯ ಅನುದಾನವನ್ನು ಒದಗಿಸುವುದು.

230. ಪ್ರತಿಯೊಂದು ಬಾರ್ ಅಸೋಸಿಯೇಷನ್‌ಗಳಿಗೆ ಒಂದು ಜೆರಾಕ್ಸ್ ಯಂತ್ರವನ್ನು ಒದಗಿಸಲು 1 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.

231. ಬೆಂಗಳೂರಿನಲ್ಲಿ ಬಾರ್ ಕೌನ್ಸಿಲ್ ಕಟ್ಟಡ ನಿರ್ಮಾಣಕ್ಕೆ 2 ಕೋಟಿ ರೂ.ಗಳನ್ನು ನೀಡಲಾಗುವುದು. ಬೆಂಗಳೂರು ವಕೀಲರ ಸಂಘದ ಕಟ್ಟಡ ನಿರ್ಮಾಣಕ್ಕಾಗಿ 1 ಕೋಟಿ ರೂ.ಗಳನ್ನು ಒದಗಿಸಲಾಗುವುದು.

232. ಗುಲ್ಬರ್ಗಾದ ಮತ್ತೂರಿನಲ್ಲಿ ವಿಘ್ನೇಶ್ವರ ಕಾನೂನು ಕಾಲೇಜಿನ ಕಟ್ಟಡಕ್ಕೆ 1 ಕೋಟಿ ರೂ. ಒದಗಿಸಲಾಗುವುದು.

ಸಾರಿಗೆ

233. 2010–11ನೇ ಸಾಲಿನಲ್ಲಿ ಸಾರಿಗೆ ಇಲಾಖೆಯು ಗ್ರಾಹಕ ಸ್ನೇಹಿ ಸೇವಾ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಅದರಂತೆ ಚಾಲನಾ ಪರವಾನಗಿ ಪತ್ರ ಹಾಗೂ ನೋಂದಣಿ ಸರ್ಟಿಫಿಕೇಟ್‌ಗಳನ್ನು 25 ಲಕ್ಷ ಸ್ಮಾರ್ಟ್ ಕಾರ್ಡ್ ರೂಪದಲ್ಲಿ ಗ್ರಾಹಕರಿಗೆ ನೀಡಲಾಗುತ್ತಿದೆ. ಅಲ್ಲದೇ, ಸುಮಾರು 50,000 ಸರಕು ವಾಹನಗಳಿಗೆ ರಾಷ್ಟ್ರೀಯ ಪರವಾನಗಿಯನ್ನು ಅಂತರ್ಜಾಲದ ಮೂಲಕ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಅಂತರ್ಜಾಲದ ಮೂಲಕ ನೇರವಾಗಿ ಶುಲ್ಕ ಮತ್ತು ತೆರಿಗೆಯನ್ನು ಪಾವತಿಸಲು ಮತ್ತು ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಒದಗಿಸಲು ಉನ್ನತ ಮಟ್ಟದ ತಂತ್ರಜ್ಞಾನವನ್ನು ಅಳವಡಿಸಲು ಉದ್ದೇಶಿಸಲಾಗಿದೆ.

234. ರಾಜ್ಯದಲ್ಲಿ ಚಾಲಕರ ಕೊರತೆ ಇರುವುದನ್ನು ಮನಗಂಡು ಗುಣಮಟ್ಟದ ಚಾಲಕರನ್ನು ಸಿದ್ಧಗೊಳಿಸಿ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಬೆಂಗಳೂರಿನಲ್ಲಿ ಮತ್ತು ಧಾರವಾಡದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಭಾರಿ ವಾಹನ ಚಾಲಕರ ತರಬೇತಿ ಶಾಲೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಗೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ

235. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸರ್ಕಾರಿ ನೌಕರರು ಒಂದು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಹಿಂದಿನ ವೇತನ ಪರಿಷ್ಕರಣೆಯ ಆರ್ಥಿಕ ಸೌಲಭ್ಯಗಳನ್ನು ಏಪ್ರಿಲ್ 2006ರಿಂದ ನೀಡಲಾಗಿತ್ತು. ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಯು ಪ್ರತಿ ಆರರಿಂದ ಏಳು ವರ್ಷಗಳಿಗೊಮ್ಮೆ

ಪರಿಷ್ಕರಿಸಲಾಗುತ್ತಿದೆ. ವೇತನ ಪರಿಷ್ಕರಣೆಯ ಸರ್ಕಾರಿ ನೌಕರರ ಕೋರಿಕೆಯನ್ನು ಪರಿಗಣಿಸಲು ಒಂದು ವೇತನ ಸಮಿತಿಯನ್ನು ರಚಿಸಲಾಗುವುದು.

236. ರಾಜ್ಯ ಸರ್ಕಾರವು ಪ್ರತಿ ವರ್ಷ ಹಲವಾರು ಯೋಜನಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಆದರೆ, ಈ ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಪರಿಣಾಮಕಾರಿಯಾಗಿ ಮೌಲ್ಯಾಂಕನಗೊಳಿಸಲು ಯಾವುದೇ ನಿರ್ದಿಷ್ಟ ಸಾಂಸ್ಥಿಕ ವ್ಯವಸ್ಥೆ ಇರುವುದಿಲ್ಲ. ಈ ನ್ಯೂನ್ಯತೆಯನ್ನು ಹೋಗಲಾಡಿಸಲು 2011–12ನೇ ಸಾಲಿನಲ್ಲಿ ಯೋಜನಾ ಇಲಾಖೆಯಲ್ಲಿ ಒಂದು ಯೋಜನಾ ಮೌಲ್ಯಮಾಪನ ಘಟಕವನ್ನು ಸ್ಥಾಪಿಸಲಾಗುವುದು.

ತೆರಿಗೆ ಪ್ರಸ್ತಾವನೆಗಳು

ವಾಣಿಜ್ಯ ತೆರಿಗೆಗಳು

237. ಈಗಾಗಲೇ ಹೇಳಿದಂತೆ, ಪ್ರಸಕ್ತ ಸಾಲಿನಲ್ಲಿ ರಾಜ್ಯದ ತನ್ನದೇ ತೆರಿಗೆಗಳಿಂದ ಬರುವ ಆದಾಯದಲ್ಲಿ ಉತ್ತಮ ಬೆಳವಣಿಗೆ ಇರುತ್ತದೆ. ನಮ್ಮ ತೆರಿಗೆ ಆದಾಯದಲ್ಲಿ ಮುಖ್ಯ ಭಾಗವಾಗಿರುವ ವಾಣಿಜ್ಯ ತೆರಿಗೆಗಳ ಆದಾಯದಲ್ಲಿ ಅಭೂತಪೂರ್ವ ಎನ್ನಬಹುದಾದ ಅಭಿವೃದ್ಧಿಯಿಂದ ಇದು ಸಾಧ್ಯವಾಗಿರುತ್ತದೆ. ಆರ್ಥಿಕದಲ್ಲಿ ಹೆಚ್ಚಾದ ಬೆಳವಣಿಗೆ, ತೆರಿಗೆಯನ್ನು ಸಂಗ್ರಹಿಸುವಲ್ಲಿ ಇಲಾಖಾಧಿಕಾರಿಗಳ ಶ್ರದ್ಧಾಪೂರ್ವಕ ಪ್ರಯತ್ನಗಳು ಮತ್ತು ವಾಣಿಜ್ಯೋದ್ಯಮಗಳ ಪೂರಕ ಪಾತ್ರಗಳು ಈ ಬೆಳವಣಿಗೆಗೆ ಕಾರಣಗಳೆಂದು ಹೇಳಬಹುದಾಗಿದೆ.

238. ಪ್ರಸಕ್ತ ಸಾಲಿನಲ್ಲಿ ತೆರಿಗೆ ಕಾನೂನುಗಳ ಅನುಸರಣೆಗೆ ಅನುಕೂಲವಾಗುವಂತೆ ನಾವು ಹಲವಾರು ಕ್ರಮಗಳನ್ನು ತೆಗೆದುಕೊಂಡಿರುತ್ತೇವೆ. ಹಿಂದಿನ ಸಾಲಿನಲ್ಲಿ ಘೋಷಿಸಿದಂತೆ, ವಿದ್ಯುನ್ಮಾನ ವಿಧಾನದಲ್ಲಿ ರಿಟರ್ನ್‌ಗಳ ಸಲ್ಲಿಕೆಗೆ ಮತ್ತು ಮಾಹಿತಿಯನ್ನು ಒದಗಿಸಲಿಕ್ಕೆ ಹಾಗೂ ಇಂಟರ್‌ನೆಟ್ ಮೂಲಕ ತೆರಿಗೆ ಪಾವತಿಸಲು ಕಾನೂನಿನಲ್ಲಿ ಅವಕಾಶ ಮಾಡಲಾಗಿದೆ. ಈ ಸುಧಾರಣಾ ಕ್ರಮಗಳಿಗೆ ವಾಣಿಜ್ಯೋದ್ಯಮ ತುಂಬು ಹೃದಯದ ಪ್ರತಿಕ್ರಿಯಿಸಿದೆ ಮತ್ತು ಅವರ ಬೆಂಬಲ ಮತ್ತು ಸಹಕಾರಗಳಿಗೆ ನಾನು ಅಭಿನಂದನೆ ಸಲ್ಲಿಸಲು ಇಚ್ಛಿಸುತ್ತೇನೆ. ಬರುವ ಸಾಲಿನಲ್ಲಿ ಈ ಕ್ರಮಗಳನ್ನು ಮತ್ತಷ್ಟು ಸಂಘಟಿಸಲು ನಾನು ಉದ್ದೇಶಿಸಿರುತ್ತೇನೆ. ಈ ನಿಟ್ಟಿನಲ್ಲಿ ವಿವಿಧ ವಾಣಿಜ್ಯ ತೆರಿಗೆ ಕಾಯ್ದೆಗಳಡಿಯಲ್ಲಿ

ವಿದ್ಯುನ್ಮಾನ ವಿಧಾನದಲ್ಲಿ ನೋಂದಣಿಗೆ ಅರ್ಜಿಗಳನ್ನು ಸಲ್ಲಿಸಲು ಮತ್ತು ಮಾಹಿತಿಯನ್ನು ಒದಗಿಸಲು ಉಪಬಂಧಗಳನ್ನು ತರಲು ನಾನು ಪ್ರಸ್ತಾವಿಸುತ್ತೇನೆ. ಇವುಗಳನ್ನೂ ಕೂಡ ವಾಣಿಜ್ಯೋದ್ಯಮ ಸ್ವಾಗತಿಸುತ್ತದೆಂದು ನಾನು ನಿರೀಕ್ಷಿಸುತ್ತೇನೆ. ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ) ಬಗ್ಗೆ ನಮ್ಮ ನಿಲುವೇನಿರುತ್ತದೆ ಎಂದರೆ ರಾಜ್ಯಗಳ ಆರ್ಥಿಕ ಸ್ವಾತಂತ್ರ್ಯ ಭಂಗವಾಗಬಾರದು.

ಮೌಲ್ಯವರ್ಧಿತ ತೆರಿಗೆ

239. ನಾನು ವಾಣಿಜ್ಯೋದ್ಯಮಗಳ ಜೊತೆ ನಿರಂತರ ಸಂವಾದ ಹೊಂದಿರುವ ಸಂಪ್ರದಾಯವನ್ನು ಮುಂದುವರಿಸಿರುತ್ತೇನೆ. ತೆರಿಗೆ ಕಾನೂನು ಮತ್ತು ನಿಯಮಗಳನ್ನು ಸರಳೀಕರಿಸುವ ಬಗ್ಗೆ ಮತ್ತು ವ್ಯಾಪಾರ ಪಲ್ಲಟವನ್ನು ತಡೆಯುವ ಬಗ್ಗೆ ಅವರು ನೀಡಿರುವ ಸಲಹೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಅವರ ಮನವಿಗಳನ್ನು ಹಾಗೂ ಸಾಮಾನ್ಯ ಜನರ ಮತ್ತು ರೈತರ ಹಿತದೃಷ್ಟಿಗಳನ್ನಲ್ಲದೆ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಾನು ಮುಂದಿನ ಪರಿಹಾರಗಳನ್ನು ಮತ್ತು ಸುಧಾರಣಾ ಕ್ರಮಗಳನ್ನು ಪ್ರಸ್ತಾವಿಸುತ್ತೇನೆ.

(1) ಭತ್ತ, ಅಕ್ಕಿ, ಗೋಧಿ, ಬೇಳೆಕಾಳುಗಳು ಹಾಗೂ ಅಕ್ಕಿ ಮತ್ತು ಗೋಧಿಯ ಪದಾರ್ಥಗಳ ಮೇಲಿನ ತೆರಿಗೆ ವಿನಾಯಿತಿಯನ್ನು 2011 ರ ಏಪ್ರಿಲ್‌ನಿಂದ ಮತ್ತೊಂದು ವರ್ಷದವರೆಗೆ ಮುಂದುವರಿಸಲಾಗುವುದು.

(2) ಕೊಬ್ಬರಿಯನ್ನು ಹೊರತುಪಡಿಸಿ ತೆಂಗಿನಕಾಯಿಯನ್ನು ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು.

(3) ಮುಳ್ಳುತಂತಿಯ ಮೇಲಿನ ತೆರಿಗೆಯನ್ನು ಶೇ.13.5 ರಿಂದ ಶೇ.5ಕ್ಕೆ ಇಳಿಸಲಾಗುವುದು.

(4) ಎಣ್ಣೆ ತೆಗೆದ ಅಕ್ಕಿ ಹೊಟ್ಟನ್ನು ತೆರಿಗೆಯಿಂದ ವಿನಾಯಿತಿ ಗೊಳಿಸಲಾಗುವುದು.

(5) ಶೇ.5ರ ರಿಯಾಯಿತಿ ತೆರಿಗೆ ಸೌಲಭ್ಯಕ್ಕೆ ಅರ್ಹವಾಗಲು ಶಾಲಾ ಕೈಚೀಲಗಳಿಗೆ ನಿಗದಿ ಮಾಡಿರುವ ಬೆಲೆ ಮಿತಿಯನ್ನು ರೂ.200 ರಿಂದ ರೂ.500 ಗಳಿಗೆ ಏರಿಸಲಾಗುವುದು.

(6) ಎಲ್ಲಾ ಅಡುಗೆ ಪಾತ್ರೆಗಳ ಮೇಲಿನ ತೆರಿಗೆಯನ್ನು ಶೇ.13.5 ರಿಂದ ಶೇ.5ಕ್ಕೆ ಇಳಿಸಲಾಗುವುದು.

(7) ಟೋಪಿಗಳ ಮೇಲಿನ ತೆರಿಗೆಯನ್ನು ಶೇ.13.5 ರಿಂದ ಶೇ.5 ಕ್ಕೆ ಇಳಿಸಲಾಗುವುದು.

(8) ಚಲನಚಿತ್ರಗಳ ಲೀಸಿಂಗ್ ಮತ್ತು ಚಲನಚಿತ್ರಗಳಿಗೆ ಸಂಬಂಧಿಸಿದ ಕಾಪಿರೈಟುಗಳ ಮಾರಾಟವನ್ನು ತೆರಿಗೆಯಿಂದ ವಿನಾಯಿತಿ ಗೊಳಿಸಲಾಗುವುದು.

(9) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಂತಹ ಬಹುಪಕ್ಷೀಯ ಆರ್ಥಿಕ ಸಂಸ್ಥೆಗಳಿಗೂ ಕೂಡ ತಮ್ಮ ಖರೀದಿಯ ಮೇಲೆ ಪಾವತಿಸಿದ ತೆರಿಗೆ ಮರು ಪಾವತಿಯ ಸೌಲಭ್ಯ ನೀಡಲಾಗುವುದು.

(10) ಮನವಿ ಜಂಟಿ ಆಯುಕ್ತರುಗಳು ವಿವಾದಿತ ತೆರಿಗೆ ಬಗ್ಗೆ ನೀಡಿದ ತಡೆಯಾಜ್ಞೆಗಳ ಊರ್ಜಿತತ್ವದ ಅವಧಿಯನ್ನು 120 ದಿನಗಳಿಂದ 240 ದಿನಗಳಿಗೆ ಏರಿಸಲಾಗುವುದು.

(11) ಕರನಿರ್ಧರಣೆ ಮತ್ತು ಮರು ಕರನಿರ್ಧರಣೆ ತೆಗೆದುಕೊಳ್ಳಲು ಇರುವ ಸಮಯ ಮಿತಿಯನ್ನು 5 ವರ್ಷಗಳಿಂದ 4 ವರ್ಷಗಳಿಗೆ ಇಳಿಸಲಾಗುವುದು.

(12) ವ್ಯಾಪಾರಿಗಳು ತಮ್ಮ ಲೆಕ್ಕಪುಸ್ತಕಗಳನ್ನು ಕಡ್ಡಾಯವಾಗಿ ಪರಿಶೋಧನೆಗೆ (ಆಡಿಟ್) ಒಳಪಡಿಸಲು ಇರುವ ವಹಿವಾಟಿನ ಕನಿಷ್ಠ ಮಿತಿಯನ್ನು ರೂ. 60 ಲಕ್ಷಗಳಿಂದ ರೂ. 1 ಕೋಟಿಗೆ ಏರಿಸಲಾಗುವುದು.

(13) ಗುತ್ತಿಗೆದಾರರು ಪ್ರತಿ ಕರಾರಿನ ಪ್ರತಿಯನ್ನು ಸಲ್ಲಿಸಬೇಕೆಂದಿರುವ ಉಪಬಂಧವನ್ನು ರದ್ದು ಮಾಡಲಾಗುವುದು.

(14) ಕಡಿಮೆ ತೆರಿಗೆ ದರಗಳಿರುವ ಸರಕುಗಳ ಅಕ್ರಮ ಸಾಗಣೆಗೆ ದಂಡವನ್ನು ಹೆಚ್ಚಿಸಲಾಗುವುದು.

(15) ತೆರಿಗೆ ಪಾವತಿಯ ವಿಳಂಬದ ಬಗ್ಗೆ ಇರುವ ಬಡ್ಡಿ ದರವನ್ನು ವಾರ್ಷಿಕ ಶೇ.15 ರಿಂದ ಶೇ.18 ಕ್ಕೆ ಏರಿಸಲಾಗುವುದು.

240. ಘೋಷಿತ ಸರಕುಗಳ ಮೇಲಿನ ತೆರಿಗೆ ದರವನ್ನು ಕೇಂದ್ರ ಮಾರಾಟ ತೆರಿಗೆ ಕಾಯ್ದೆಯಡಿಯಲ್ಲಿ ಅಂತಹ ಸರಕುಗಳಿಗೆ ನಿಗದಿ ಮಾಡಿರುವ ಗರಿಷ್ಠ ದರದೊಂದಿಗೆ ಸಮನಾಗಿರುವಂತೆ ಮಾಡಲು ನಾನು ಪ್ರಸ್ತಾವಿಸುತ್ತೇನೆ.

ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

241. ಹೆಚ್ಚಾಗುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚವನ್ನು ಭರಿಸಲು, ತೆರಿಗೆ ದರಗಳನ್ನು ಏರಿಸುವ ಅಥವಾ ಹೊಸ ತೆರಿಗೆಯನ್ನು ಹಾಕುವ ಬದಲಾಗಿ, ನಮ್ಮ ತೆರಿಗೆ ಸಂಗ್ರಹಣಾ ಪ್ರಯತ್ನಗಳನ್ನು ಉತ್ತಮಪಡಿಸುವತ್ತ ನಾನು ಯಾವಾಗಲೂ ಒತ್ತು ನೀಡಿರುತ್ತೇನೆ. ಆದರೆ, ನಾನು ಕೈಗೆತ್ತಿಕೊಳ್ಳಲು ಪ್ರಸ್ತಾವಿಸಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಪನ್ಮೂಲದ ಅವಶ್ಯಕತೆ ಇರುತ್ತದೆ. ಹೆಚ್ಚಾದ ತೆರಿಗೆಯನ್ನು ಹೊರಲು ಸಾಧ್ಯವಿರುವವರ ಮೇಲೆ ಮಾತ್ರ ಯಾವುದೇ ತೆರಿಗೆ ಏರಿಕೆ ಇರಬೇಕು. ಅದರಂತೆ, ರಾಜ್ಯದ ಒಟ್ಟಾರೆ ಹಿತದೃಷ್ಟಿಗೆ ಆವಶ್ಯವಿರುವ ಅಧಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಸಲುವಾಗಿ ಕೆಲವು ಕ್ರಮಗಳನ್ನು ಕೈಗೊಳ್ಳಲು ನಾನು ಪ್ರಸ್ತಾವಿಸುತ್ತೇನೆ.

- ಬಂಗಾರ ಮತ್ತಿತರೆ ಬೆಲೆಬಾಳುವ ಲೋಹಗಳ ಆಭರಣಗಳು ಮತ್ತು ವಸ್ತುಗಳು ಹಾಗೂ ಅಮೂಲ್ಯ ಮತ್ತು ಅರೆ-ಅಮೂಲ್ಯ ಹರಳುಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.1 ರಿಂದ ಶೇ.2 ಕ್ಕೆ ಏರಿಸಲು, ಮತ್ತು
- ಶೇ.13.5 ರ ಮೌಲ್ಯವರ್ಧಿತ ತೆರಿಗೆ ದರವನ್ನು ಶೇ.14ಕ್ಕೆ ಏರಿಸಲು ನಾನು ಪ್ರಸ್ತಾವಿಸುತ್ತೇನೆ.

ಜೂಜು ತೆರಿಗೆಯಡಿಯಲ್ಲಿ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮ

242. ಟೋಟಲೈಸೇಟರ್ ಬಗ್ಗೆ ಬೆಂಗಳೂರು ಟರ್ಫ್ ಕ್ಲಬ್ ಪಾವತಿಸಬೇಕಾದ ರಾಜಿ ತೆರಿಗೆ ಮೊತ್ತವನ್ನು ಶೇ.4 ರಿಂದ ಶೇ.8ಕ್ಕೆ ಏರಿಸಲು ನಾನು ಪ್ರಸ್ತಾವಿಸುತ್ತೇನೆ.

243. ಮೇಲಿನ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳಿಂದ ಸುಮಾರು ರೂ.500 ಕೋಟಿ ಹೆಚ್ಚುವರಿ ಆದಾಯವನ್ನು ಸಂಗ್ರಹಣೆಯನ್ನು ನಾನು ಉದ್ದೇಶಿಸಿರುತ್ತೇನೆ.

ಮನರಂಜನಾ ತೆರಿಗೆ – ಪರಿಹಾರ

244. ಚಲನಚಿತ್ರಗಳ ಹಂಚಿಕೆದಾರರನ್ನು ನೋಂದಣಿಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ವಿಲಾಸ ತೆರಿಗೆ – ಪರಿಹಾರ

245. ಹೋಂಸ್ಟೇ ಘಟಕಗಳು ಸಾಮಾನ್ಯ ತೆರಿಗೆ ಬದಲಾಗಿ ರಾಜಿ ಮೊತ್ತಗಳನ್ನು ಪಾವತಿಸಲು ಅವಕಾಶ ಮಾಡಲು ನಾನು ಪ್ರಸ್ತಾವಿಸುತ್ತೇನೆ.

ತತ್ಸಂಬಂಧ ತಿದ್ದುಪಡಿಗಳು

246. ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ತಿದ್ದುಪಡಿಗಳ ಜೊತೆ ಇತರೆ ಪರಿಷ್ಕರಣಾ ತಿದ್ದುಪಡಿಗಳೊಂದಿಗೆ ಸೂಕ್ತ ವಿಧೇಯಕಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

247. 2010–11 ನೇ ಸಾಲಿಗೆ ಅಬಕಾರಿ ಶುಲ್ಕದ ದರವನ್ನು ಹೆಚ್ಚಿಸದೇ 7500 ಕೋಟಿ ರೂ. ಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿತ್ತು. ಇಲಾಖೆಯು ಈ ಗುರಿಯನ್ನು ಮೀರಿ 700 ಕೋಟಿ ರೂ. ಗಳ ಹೆಚ್ಚಿನ ಸಾಧನೆ ಮಾಡಲಿದ್ದು, ಇದರಿಂದ 2010–11 ನೇ ಸಾಲಿನ ಆದಾಯ ಕ್ರೋಢೀಕರಣ 8200 ಕೋಟಿ ರೂ.ಗಳಿಗೆ ತಲುಪಲಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. 2010–11 ನೇ ಸಾಲಿನಲ್ಲಿ ಪ್ರಸ್ತಾಪಿಸಿದ ಕರಸಮಾಧಾನ ಯೋಜನೆ–3ನ್ನು 31–03–2011 ರವರೆಗೆ ವಿಸ್ತರಿಸಿದ್ದು, 16 ಕೋಟಿ ರೂಗಳಿಗೂ ಹೆಚ್ಚಿನ ಬಾಕಿ ವಸೂಲಿ ಮಾಡುವ ನಿರೀಕ್ಷೆ ಇದೆ.

248. 2011–12 ನೇ ಸಾಲಿಗೆ ಹೆಚ್ಚುವರಿ ಅಬಕಾರಿ ಸುಂಕದ ದರಗಳನ್ನು ಶೇ. 10 ರಿಂದ 20 ರವರೆಗೆ ಅನುಬಂಧ – 2 ರಲ್ಲಿರುವಂತೆ ವಿವಿಧ 17 ಸ್ಲಾಬ್‌ಗಳ ಮೇಲೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಘೋಷಿತ ಬೆಲೆಯ ಎಲ್ಲಾ 17 ಸ್ಲಾಬ್‌ಗಳಲ್ಲಿ ಸಹ ಪ್ರತಿ ಸ್ಲಾಬ್‌ಗೆ ರೂ. 25 ರಂತೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಹೆಚ್ಚುವರಿ ಅಬಕಾರಿ ಸುಂಕದ ದರದಲ್ಲಿನ ಹೆಚ್ಚಳ ಹಾಗೂ ಪರಿಣಾಮಕಾರಿಯಾದ ಜಾರಿ ಕ್ರಮಗಳ ಮೂಲಕ 2010–11 ನೇ ಸಾಲಿಗೆ ಹೋಲಿಸಿದಾಗ ಶೇ. 12 ರಷ್ಟು

ಬೆಳವಣಿಗೆಯಿಂದ 9200 ಕೋಟಿ ರೂ.ಗಳ ಆದಾಯ ಕ್ರೋಢೀಕರಣದ ಗುರಿಯನ್ನು 2011-12 ನೇ ಸಾಲಿಗೆ ಪ್ರಸ್ತಾಪಿಸುತ್ತೇನೆ.

249. ಅಕ್ರಮ ಮತ್ತು ಕಲುಷಿತ ಮದ್ಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಇಲಾಖೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಸಿದ್ದು, ಇಲಾಖೆಗೆ ವೈರ್‌ಲೆಸ್, ಜಿ.ಪಿ.ಎಸ್, ಶಸ್ತಾಸ್ತ್ರ ಹಾಗೂ ಆಧುನಿಕ ವಾಹನಗಳನ್ನು ನೀಡಲು ಉದ್ದೇಶಿಸಿದೆ. ಕಂಪ್ಯೂಟರಿಕರಣವನ್ನು ವಲಯಮಟ್ಟದ (ತಾಲ್ಲೂಕು) ವರೆಗೆ ವಿಸ್ತರಿಸಿ, ಅನುಷ್ಠಾನಗೊಳಿಸಲಾಗುವುದು. ಸಾಗಾಣಿಕಾ ನಷ್ಟ, ಮೆಚುರೇಶನ್ ನಷ್ಟ, ಯಾಂತ್ರಿಕವಾಗಿ ಭದ್ರತಾ ಚೀಟಿಗಳನ್ನು ಅಂಟಿಸುವುದು ಬೀಟ್‌ರೂಟ್, ಬೆಲ್ಲ ಇತ್ಯಾದಿಯಿಂದ ಮದ್ಯಸಾರ ತಯಾರಿಕೆ ಇತ್ಯಾದಿ ಅಂಶಗಳನ್ನು ತಾಂತ್ರಿಕ ಸಮಿತಿಯ ಮೂಲಕ ಪರಿಶೀಲಿಸಲಾಗುವುದು.

ನೋಂದಣಿ ಮತ್ತು ಮುದ್ರಾಂಕ

250. ಆರ್ಥಿಕ ವಲಯದಲ್ಲಿನ ಚೇತರಿಕೆಯೊಂದಿಗೆ 2010-11ನೇ ಸಾಲಿನಲ್ಲಿ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕದ ಆದಾಯದಲ್ಲಿ ಗುಣಾತ್ಮಕ ಬೆಳವಣಿಗೆ ತೋರಿದೆ. 2009-10ನೇ ಸಾಲಿನಲ್ಲಿ ಸಂಗ್ರಹಿಸಿದ 2,818 ಕೋಟಿ ರೂ.ಗಳ ರಾಜಸ್ವಕ್ಕೆ ಹೋಲಿಸಿದಲ್ಲಿ, 2010-11ನೇ ಸಾಲಿನಲ್ಲಿ 3,700 ಕೋಟಿ ರೂ.ಗಳ ರಾಜಸ್ವ ಸಂಗ್ರಹವಾಗುವ ನಿರೀಕ್ಷೆ ಇದೆ.

251. 2011-12ನೇ ಸಾಲಿನಲ್ಲಿ ಸಂಗ್ರಹಣಾ ದಕ್ಷತೆಯನ್ನು ಹೆಚ್ಚಿಸುತ್ತಾ, ತೆರಿಗೆ ಸಂಗ್ರಹಣೆಯನ್ನು ಮತ್ತಷ್ಟು ಪಾರದರ್ಶಕವಾಗಿ ಹಾಗೂ ತೆರಿಗೆದಾರರ ಸ್ನೇಹಪರವಾಗಿ ಮಾಡಲು ಗಮನ ನೀಡಲಾಗುವುದು. ಕಾರ್ಯವಿಧಾನಗಳಲ್ಲಿ ಸುಧಾರಣೆ, ತೆರಿಗೆ ಸೋರಿಕೆಯನ್ನು ತಡೆಗಟ್ಟಲು ಹಾಗೂ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ಕೆಳಕಂಡ ಬದಲಾವಣೆಗಳನ್ನು ತರಲು ಉದ್ದೇಶಿಸಿರುತ್ತೇನೆ.

252. ಕೆಳಕಂಡ ಪ್ರಕರಣಗಳಿಗೆ ಸಂಬಂಧಿಸಿದ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

* ರಾಜ್ಯ ಪ್ರವಾಸೋದ್ಯಮ ನೀತಿ;
* ಜಂಟಿ ಬಾಧ್ಯತಾ ಗುಂಪುಗಳು, ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಪಡೆಯುವ ವ್ಯವಸಾಯೇತರ ಸಾಲಗಳಿಗೆ; ಮತ್ತು
* ರೈತರ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಭೂಸ್ವಾಧೀನ ಮಾಡಿದಾಗ ಪರಿಹಾರವಾಗಿ ಹಂಚಿಕೆ ಮಾಡುವ ಅಭಿವೃದ್ಧಿ ಪಡಿಸಿದ ಭೂಮಿಗೆ ಅಥವಾ ಈ ಸಂಬಂಧ ನೀಡುವ ಪರಿಹಾರದ ಹಣದಿಂದ ರೈತರು ಖರೀದಿಸುವ ಜಮೀನಿಗೆ.

253. ನೋಟರಿಗಳು ದೃಢೀಕರಿಸುವ ದಸ್ತಾವೇಜುಗಳಿಗೆ ವಿಧಿಸುವ ರೂ. 10ರ ಮುದ್ರಾಂಕ ಶುಲ್ಕವನ್ನು ವಿನಾಯಿತಿಗೊಳಿಸಲು ಪ್ರಸ್ತಾಪಿಸುತ್ತೇನೆ.

254. ಕ್ರಯದ ಕರಾರು ಪತ್ರ ಮಾಡಿದಾಗ ಸ್ವತ್ತಿನ ಸ್ವಾಧೀನತೆ ಪಡೆದುಕೊಳ್ಳದ ಪ್ರಕರಣಗಳಲ್ಲಿ ಮುದ್ರಾಂಕ ಶುಲ್ಕವನ್ನು ಶೇ. 1 ರಿಂದ ಶೇ. 0.1ಕ್ಕೆ ಇಳಿಸಲು ಹಾಗೂ ಗರಿಷ್ಠ ಶುಲ್ಕವನ್ನು 20,000 ರೂಪಾಯಿಗಳಿಗೆ ಮಿತಿಗೊಳಿಸಲು ನಾನು ಪ್ರಸ್ತಾಪಿಸುತ್ತೇನೆ. ಇಂತಹ ಕರಾರು ಪತ್ರಗಳಲ್ಲಿ ಸ್ವತ್ತನ್ನು ಮಾರಾಟ ಮಾಡಲು ಖರೀದಿದಾರರಿಗೆ ಅಧಿಕಾರ ಪತ್ರ ನೀಡಿರುವ ಬಗ್ಗೆ ಉಲ್ಲೇಖವಿದ್ದಲ್ಲಿ ಸ್ವತ್ತಿನ ಸ್ವಾಧೀನತೆ ವರ್ಗಾವಣೆಯಾಗಿದೆ ಎಂದು ಪರಿಗಣಿಸಿ ಶೇ. 6ರಷ್ಟು ಮುದ್ರಾಂಕ ಶುಲ್ಕವನ್ನು ವಿಧಿಸಲು ಉದ್ದೇಶಿಸಿದ್ದೇನೆ.

255. ತೆರಿಗೆ ಅನುಸರಣೆಯನ್ನು ಉತ್ತಮಗೊಳಿಸಲು ಹೆಚ್ಚಿನ ಸಂಪನ್ಮೂಲ ಕ್ರೋಢಿಕರಿಸಲು ನಾನು ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸುತ್ತೇನೆ.

256. ಹಾಲಿ ಜಂಟಿ ಅಭಿವೃದ್ಧಿ ಕರಾರು ಪತ್ರಗಳು ಹಾಗೂ ಈ ಸಂಬಂಧ ನೀಡಲಾಗುವ ಅಧಿಕಾರ ಪತ್ರಗಳು ಇವುಗಳಿಗೆ ಸಂಬಂಧಿಸಿದಂತೆ ಮುದ್ರಾಂಕ ಕಾಯ್ದೆಯಲ್ಲಿರುವ ಅನಗತ್ಯ ಮತ್ತು ಅಸ್ಪಷ್ಟ ಉಪಬಂಧಗಳನ್ನು ಕೈಬಿಡಲಾಗುವುದು.

257. ಕಂಪನಿಗಳ ಸಂಯೋಜನೆ ಮತ್ತು ವಿಭಜನೆ ಪ್ರಕ್ರಿಯೆಯಲ್ಲಿ ಒಳಗೊಳ್ಳುವ ಸ್ವತ್ತಿನ ವರ್ಗಾವಣೆಯ ಮೇಲೆ ವಿಧಿಸಲಾಗುವ ಮುದ್ರಾಂಕ ಶುಲ್ಕದ ದರವನ್ನು ಹಾಲಿ ಇರುವ ಶೇಕಡಾ 3 ರಿಂದ 2 ಕ್ಕೆ ಇಳಿಸಲಾಗುವುದು

ಮತ್ತು ಷೇರುಗಳ ವರ್ಗಾವಣೆಯ ಮೇಲೆ ವಿಧಿಸುವ ಮುದ್ರಾಂಕ ಶುಲ್ಕ ದರವನ್ನು ಶೇಕಡಾ 0.7 ರಿಂದ ಶೇಕಡಾ 1 ಕ್ಕೆ ಹೆಚ್ಚಿಸಲಾಗುವುದು.

258. ದಲ್ಲಾಳಿಗಳು ಗ್ರಾಹಕರಿಗೆ ನೀಡುವ ಟಿಪ್ಪಣಿ, ವಿಮಾಪಾಲಿಸಿ ಬಾಂಡ್ ಮತ್ತು ರಸೀದಿಗಳ ಮೇಲೆ ಸಂಚಿತ ಮುದ್ರಾಂಕ ಶುಲ್ಕವನ್ನು ಪಾವತಿಸಲು ಅವಕಾಶ ಕಲ್ಪಿಸಲಾಗುವುದು.

259. ಷೇರು ಮಾರುಕಟ್ಟೆಗೆ ಸಂಬಂಧಿಸಿದಂತೆ ಟ್ರೇಡಿಂಗ್ ಮತ್ತು ಡಿ–ಮ್ಯಾಟ್ ಅಕೌಂಟ್‌ಗಳ ಉದ್ದೇಶಕ್ಕಾಗಿ ಷೇರುದಾರರು ಅಥವಾ ಗ್ರಾಹಕರು, ಷೇರು ಏಜೆಂಟರು ಅಥವಾ ಬ್ರೋಕರ್‌ಗಳಿಗೆ ನೀಡಲಾಗುವ ಅಧಿಕಾರ ಪತ್ರಗಳಿಗೆ 50 ರೂ.ಗಳ ಮುದ್ರಾಂಕ ಶುಲ್ಕವನ್ನು ನಿಗದಿ ಮಾಡಲಾಗುವುದು.

260. ಈ ಕೆಳಕಂಡ ಟ್ರಸ್ಟ್‌ಗಳಿಗೆ 1,000 ರೂ.ಗಳ ಮುದ್ರಾಂಕ ಶುಲ್ಕವನ್ನು ವಿಧಿಸಲಾಗುವುದು.

* ಸಾರ್ವಜನಿಕ, ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿಯೇ ಸಂಘಟಿಸುವ ಟ್ರಸ್ಟ್‌ಗಳು, ಮತ್ತು
* ಸ್ವತ್ತಿನ ವರ್ಗಾವಣೆಯಾಗದೇ ಅಥವಾ ವಿಕ್ರಯವಾಗದೇ ಸ್ವತ್ತುಗಳ ನಿರ್ವಹಣೆ ಮತ್ತು ಸುಪರ್ದಿಗೆ ನೀಡುವ ಉದ್ದೇಶಕ್ಕೆ ಸಂಘಟಿಸಲಾದ ಟ್ರಸ್ಟ್‌ಗಳು,

261. ಸಾರ್ವಜನಿಕ, ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳನ್ನು ಹೊರತುಪಡಿಸಿ ಉಳಿದ ಉದ್ದೇಶಗಳಿಗೆ ಸಂಘಟಿಸಲಾದ ಟ್ರಸ್ಟ್‌ಗಳಲ್ಲಿ ಕೆಳಗಿನ ರೀತಿಯಲ್ಲಿ ಸ್ವತ್ತು ವರ್ಗಾವಣೆಯಾಗುತ್ತಿದ್ದಲ್ಲಿ ಅಥವಾ ವಿಕ್ರಯವಾಗುತ್ತಿದ್ದಲ್ಲಿ ಸಂಬಂಧಿತ ಟ್ರಸ್ಟ್ ಪತ್ರಗಳಿಗೆ ಶೇ. 6 ರ (ಕನ್‌ವೆಯನ್ಸ್) ದರದಲ್ಲಿ ಮುದ್ರಾಂಕ ಶುಲ್ಕ ವಿಧಿಸಲು ಉದ್ದೇಶಿಸಿದೆ.

* ಮಾಲೀಕನಿಂದ ಟ್ರಸ್ಟ್‌ಗೆ ಸ್ವತ್ತು ವರ್ಗಾವಣೆಯಾದಲ್ಲಿ,
* ಒಂದು ಟ್ರಸ್ಟ್‌ನಿಂದ ಮತ್ತೊಂದು ಟ್ರಸ್ಟ್‌ಗೆ ಅಥವಾ ಟ್ರಸ್ಟೀಗೆ ಅಥವಾ ಫಲಾನುಭವಿಗೆ,
* ಒಬ್ಬ ಟ್ರಸ್ಟೀಯಿಂದ ಟ್ರಸ್ಟ್‌ಗೆ ಅಥವಾ ಟ್ರಸ್ಟೀಗೆ ಅಥವಾ ಫಲಾನುಭವಿಗೆ,

262. ಮೇಲ್ಕಂಡ ಪ್ರಸ್ತಾವನೆಗಳಿಂದ ಸರ್ಕಾರಿ ರಾಜಸ್ವಕ್ಕೆ ಸುಮಾರು 300 ಕೋಟಿ ರೂ.ಗಳ ಹೆಚ್ಚಿನ ಆದಾಯ ನಿರೀಕ್ಷಿಸಬಹುದಾಗಿದೆ.

263. ಮೇಲ್ಕಂಡ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನೀಡುತ್ತಿರುವ ಸೌಲಭ್ಯಗಳನ್ನು ಉತ್ತಮಗೊಳಿಸಲು ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳಿಗೆ ಸಮಗ್ರ ತಿದ್ದುಪಡಿಗಳನ್ನು ಮಾಡಲು ಉದ್ದೇಶಿಸಿದ್ದೇನೆ.

264. ಈ ಮೇಲೆ ಪ್ರಸ್ತಾಪಿಸಲಾದ ಮಾರ್ಪಾಡುಗಳ ವಿವರಗಳು ಅನುಬಂಧ – 3ರಲ್ಲಿ ಇರಿಸಲಾಗಿದೆ.

ವಾಹನ ತೆರಿಗೆ

265. 2010–11 ನೇ ಸಾಲಿನಲ್ಲಿ ಇಲಾಖೆಯು ತೆರಿಗೆ ಸಂಗ್ರಹಣೆಯಲ್ಲಿ ಗಣನೀಯ ಸಾಧನೆ ಮಾಡಿರುತ್ತದೆ. ಹಿಂದಿನ ವರ್ಷ ಅಂದರೆ 2009–10 ರಲ್ಲಿ ಸುಮಾರು ರೂ. 2032 ಕೋಟಿ ಇದ್ದಂತಹ ವಸೂಲಾತಿ ಈ ವರ್ಷ ಸುಮಾರು ರೂ. 2400 ಕೋಟಿ ಮೀರಿ ತಲುಪುವ ನಿರೀಕ್ಷೆ ಇದೆ. ಮುಂದಿನ ಅಂದರೆ 2011–12 ನೇ ಸಾಲಿನಲ್ಲಿ 2800 ಕೋಟಿ ರೂ.ಗಳ ತೆರಿಗೆ ವಸೂಲಿ ಮಾಡಲು ಉದ್ದೇಶಿಸಲಾಗಿದೆ. ವಾಹನಗಳ ಮೇಲೆ ವಿಧಿಸಿರುವ ಶೇ 10 ಸೆಸ್ ಅನ್ನು ಶೇ. 11 ಕ್ಕೆ ಏರಿಸಿ (ಅನುಬಂಧ 4 ರಲ್ಲಿ ತೋರಿಸಿರುವಂತೆ) ಈ ಮೂಲಕ ಹೆಚ್ಚುವರಿಯಾಗಿ ಸಂಗ್ರಹಿಸಲಾಗುವ 20 ಕೋಟಿ ರೂ.ಗಳನ್ನು ಈಗಾಗಲೇ ಘೋಷಿಸಿರುವ ನಗರ ಸಾರಿಗೆ ನಿಧಿಗೆ ಪ್ರತಿ ವರ್ಷ ನೀಡಲಾಗುವುದು.

ಹೆಚ್ಚುವರಿ ಸಂಪನ್ಮೂಲ ಸಂಗ್ರಹಣಾ ಕ್ರಮಗಳು

266. ಆಯವ್ಯಯದಲ್ಲಿ ಪ್ರಸ್ತಾಪಿಸಿರುವ ವಿವಿಧ ತೆರಿಗೆಯ ಪದ್ಧತಿ ಮತ್ತು ದರಗಳ ಪರಿಷ್ಕರಣೆಯಿಂದ 1,020 ಕೋಟಿ ರೂ. ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸಲು ಅಂದಾಜಿಸಲಾಗಿದೆ.

ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ

267. 2008ನೇ ಸಾಲಿನ ಆರ್ಥಿಕ ಹಿಂಜರಿತ ಪರಿಸ್ಥಿತಿಯ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಆರ್ಥಿಕ ಉತ್ತೇಜನ ಕ್ರಮಗಳನ್ನು ಕೈಗೊಂಡಿರುವ ಅಂಶವನ್ನು

ಮಾನ್ಯ ಸದಸ್ಯರುಗಳಿಗೆ ನೆನಪಿಸಬಯಸುತ್ತೇನೆ. ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ, ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿಯನ್ನು ಅನುಮೋದಿಸುವ ಮೂಲಕ ಘನಸದನವು 2008-09ನೇ ಸಾಲಿನಲ್ಲಿ ಶೇ.3.5ರಷ್ಟು ಹಾಗೂ 2009-10ನೇ ಸಾಲಿನಲ್ಲಿ ಶೇ.4ರಷ್ಟು ಹೆಚ್ಚಿನ ವಿತ್ತೀಯ ಕೊರತೆಗೆ ಅನುಮೋದನೆಯನ್ನು ನೀಡಿದೆ. ಆರ್ಥಿಕ ಉತ್ತೇಜನ ಕ್ರಮಗಳನ್ನು ಕೈಗೊಂಡಿದ್ದರೂ ಸಹ ಆ ವರ್ಷಗಳಲ್ಲಿ ವಿತ್ತೀಯ ಕೊರತೆಯನ್ನು ಕ್ರಮವಾಗಿ ಶೇ.2.88 ಮತ್ತು ಶೇ.3.24ಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ ಎಂಬುದನ್ನು ನಾನು ಅತ್ಯಂತ ಸಂತೋಷದಿಂದ ತಿಳಿಸಬಯಸುತ್ತೇನೆ.

268. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿತ್ತೀಯ ಸ್ಥಿತಿಯನ್ನು ಸುಧಾರಣಾ ಹಾದಿಯತ್ತ ತರಲು ಹದಿಮೂರನೇ ಹಣಕಾಸು ಆಯೋಗವು ಅನುಷ್ಠಾನ ನಕ್ಷೆಯನ್ನು ನಿಗದಿಪಡಿಸಿದೆ. 2010-11ನೇ ಸಾಲಿನಲ್ಲಿ, ಆರ್ಥಿಕ ಬೆಳವಣಿಗೆಯು ಸುಧಾರಿಸಿದ್ದು, ತೆರಿಗೆ ಸಂಗ್ರಹಣೆಯ ಮೇಲೆ ಉತ್ತಮ ಪರಿಣಾಮವನ್ನು ಬೀರಿದೆ. ಅದಾಗ್ಯೂ, 2009-10ನೇ ಸಾಲಿನಲ್ಲಿ ಅನುಮೋದಿಸಿದ್ದ ಶೇ.4ರ ವಿತ್ತೀಯ ಕೊರತೆಯನ್ನು 2010-11ನೇ ಸಾಲಿನಲ್ಲಿ ಶೇ.3ಕ್ಕೆ ತಕ್ಷಣವೇ ಇಳಿಸಿದಲ್ಲಿ, ಸಾರ್ವಜನಿಕ ವೆಚ್ಚದ ಮೇಲೆ ತೀಕ್ಷ್ಣ ಪರಿಣಾಮ ಉಂಟಾಗಬಹುದು. ಇಂತಹ ತೊಡಕುಗಳನ್ನು ಎದುರಿಸಲು, 2010-11 ವರ್ಷವನ್ನು ಬದಲಾವಣಾ ಪರ್ವವೆಂದು ಹಣಕಾಸು ಆಯೋಗವು ಶಿಫಾರಸ್ಸು ಮಾಡಿದೆ. ಈ ಅವಧಿಯಲ್ಲಿ ವಿತ್ತೀಯ ಕೊರತೆಯನ್ನು ಶೇ.3.44ಕ್ಕೆ ಸೀಮಿತಗೊಳಿಸುವಂತೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ.

269. ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಬಾಕಿ ಇರುವ ಸಾಲದ ಮೊತ್ತ ಮತ್ತು ಪಾರದರ್ಶಕತೆ ಕಾಯ್ದುಕೊಳ್ಳುವ ಬಗ್ಗೆಯೂ ಸಹ 13ನೇ ಹಣಕಾಸು ಆಯೋಗ ಕೆಲವು ನಿರ್ದಿಷ್ಟ ಶಿಫಾರಸ್ಸುಗಳನ್ನು ಮಾಡಿದೆ. 13ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ರಾಜ್ಯದ ನಿರ್ಧಿಷ್ಟ ಅನುದಾನ ಮಂಜೂರು ಮಾಡಲು ಮತ್ತು ಕೆಲವು ಸಾಲಗಳನ್ನು ಮನ್ನಾ ಮಾಡಲು, ಕೇಂದ್ರ ಸರ್ಕಾರದ ನಿಬಂಧನೆಯಂತೆ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು

ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಆದುದರಿಂದ ಕೇಂದ್ರ ಸರ್ಕಾರದ ಈ ಸಲಹೆಯಂತೆ, 13ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ತರಲು ಈ ಸದನದ ಅನುಮೋದನೆಗಾಗಿ ಪ್ರಸ್ತಾಪಿಸುತ್ತಿದ್ದೇನೆ.

ಪರಿಷ್ಕೃತ ಅಂದಾಜು 2010–11

270. 2010–11ರ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 68,564 ಕೋಟಿ ರೂ.ಗಳೆಂದು ನಿರೀಕ್ಷಿಸಲಾಗಿತ್ತು. ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 65,258 ಕೋಟಿ ರೂ.ಗಳಾಗಿದೆ, ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 70,063 ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜಿನ ರೀತ್ಯಾ ವೆಚ್ಚವು 72,277 ಕೋಟಿ ರೂ.ಗಳಾಗಿದೆ.

271. ಪರಿಷ್ಕೃತ ಅಂದಾಜು ರೀತ್ಯ 1,595 ರೂ.ಗಳ ರಾಜಸ್ವ ಹೆಚ್ಚಳವನ್ನು ಅಂದಾಜಿಸಲಾಗಿದೆ ಮತ್ತು 11,700 ಕೋಟಿ ರೂ.ಗಳ ವಿತ್ತೀಯ ಕೊರತೆಯನ್ನು ನಿರೀಕ್ಷಿಸಲಾಗಿದೆ. ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3.07ರಷ್ಟು ಆಗುತ್ತದೆ.

272. 2010–11ರ ಆಯವ್ಯಯದಲ್ಲಿ ರಾಜ್ಯದ ಯೋಜನಾ ಗಾತ್ರವನ್ನು 31,000 ಕೋಟಿ ರೂ. ಗಳಿಗೆ ನಿಗಧಿಪಡಿಸಲಾಗಿತ್ತು. ಪರಿಷ್ಕೃತ ಅಂದಾಜಿನಂತೆ 31,050 ಕೋಟಿ ರೂ. ಗಳಾಗಬಹುದೆಂದು ಅಂದಾಜಿಸಲಾಗಿದೆ. 2010–11ರ ಸಾಧನೆಯು ಹಿಂದಿನ ವರ್ಷದಲ್ಲಿ ಆಗಿರುವ 26,944 ಕೋಟಿ ರೂ.ಗಳ ಸಾಧನೆಗಿಂತ ಶೇ.15.2ರಷ್ಟು ಹೆಚ್ಚಾಗಿರುತ್ತದೆ.

273. 2010–11ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ಸ್ವಂತ ತೆರಿಗೆಯಿಂದ 36,228 ಕೋಟಿ ರೂ.ಗಳನ್ನು ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಸರ್ಕಾರದ ದಕ್ಷ ಮತ್ತು ಪ್ರಾಮಾಣಿಕ ಪ್ರಯತ್ನದಿಂದಾಗಿ ಈ ಗುರಿಯನ್ನು ಮೀರಿ 38,049 ಕೋಟಿ ರೂ.ಗಳ ಸಂಗ್ರಹಣೆಯನ್ನು ಪರಿಷ್ಕೃತ ಅಂದಾಜಿನಲ್ಲಿ ನಿಗದಿಪಡಿಸಲಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಮೊತ್ತವು

ಶೇ. 24.4ರಷ್ಟು ಹೆಚ್ಚಾಗಿದೆ. ಇದರ ಜೊತೆಗೆ 425 ಕೋಟಿ ರೂ. ಗಳನ್ನು ಮೇಲುಕರ ವಿಧಿಸುವ ಮೂಲಕ ಸಂಗ್ರಹಿಸಲು ಅಂದಾಜಿಸಲಾಗಿದೆ.

ಆಯವ್ಯಯ ಅಂದಾಜುಗಳು 2011–12

274. 2011–12ನೇ ಸಾಲಿನ ಒಟ್ಟು ಜಮೆ 83,729 ಕೋಟಿ ರೂ.ಗಳಾಗುವ ನಿರೀಕ್ಷೆಯಿದೆ. ಇದರಲ್ಲಿ 66,313 ಕೋಟಿ ರೂ.ಗಳ ರಾಜಸ್ವ ಜಮೆ ಮತ್ತು 17,416 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 85,319 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 65,034 ಕೋಟಿ ರೂ.ಗಳು ರಾಜಸ್ವ ವೆಚ್ಚವಾಗಿದ್ದು 20,285 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

275. 2011–12ರ ರಾಜಸ್ವ ಹೆಚ್ಚಳವನ್ನು 1,279 ಕೋಟಿ ರೂ.ಗಳಿಗೆ ಅಂದಾಜಿಸಲಾಗಿದೆ. 2011–12ನೇ ಸಾಲಿನ ವಿತ್ತೀಯ ಕೊರತೆಯನ್ನು 12,482 ಕೋಟಿ ರೂ.ಗಳು ಅಂದರೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ. 2.87 ರಷ್ಟು ಆಗಬಹುದೆಂದು ಅಂದಾಜಿಸಲಾಗಿದೆ.

ಸಂಪನ್ಮೂಲಗಳ ಸಂಗ್ರಹಣೆ

276. ಮೇಲೆ ಪ್ರಸ್ತಾಪಿಸಿರುವ ತೆರಿಗೆ ರಿಯಾಯಿತಿ ಹಾಗೂ ಸಂಗ್ರಹಣಾ ಕ್ರಮಗಳಿಂದ 1,020 ಕೋಟಿ ರೂ.ಗಳಷ್ಟು ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣವಾಗಲಿದ್ದು, 2011–12ರ ಸಾಲಿನಲ್ಲಿ ರಾಜ್ಯದ ಒಟ್ಟು ಸ್ವಂತ ತೆರಿಗೆ ಆದಾಯವು 43,817 ಕೋಟಿ ರೂ.ಗಳು ಆಗುವುದೆಂದು ಅಂದಾಜು ಮಾಡಿದೆ.

277. ತೆರಿಗೆಯೇತರ ಮೂಲಗಳಿಂದ 3,675 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದೆ. 2011–12ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ 8,402 ಕೋಟಿ ರೂ.ಗಳನ್ನು ತೆರಿಗೆಯ ಪಾಲಿನಲ್ಲಿ ಮತ್ತು 10,419 ಕೋಟಿ ರೂ.ಗಳನ್ನು ಅನುದಾನದ ರೂಪದಲ್ಲಿ ಬರಬಹುದೆಂದು ಅಂದಾಜಿಸಲಾಗಿದೆ. 15,354 ಕೋಟಿ ರೂ.ಗಳ ಸಾಲಗಳು ಸೇರಿದಂತೆ ಒಟ್ಟು 17,416 ಕೋಟಿ ರೂ.ಗಳ ಬಂಡವಾಳ ಸ್ವೀಕೃತಿಯನ್ನು ನಿರೀಕ್ಷಿಸಲಾಗಿದೆ.

278. ಇದಲ್ಲದೆ, ಸರ್ಕಾರಿ ಸ್ವಾಮ್ಯದ ನಿಗಮ ಹಾಗೂ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಮರುಪಾವತಿ ಮಾಡುವ ಸಾಮರ್ಥ್ಯವನ್ನು ಅವಲಂಬಿಸಿ ಹಣಕಾಸಿನ ಸಂಸ್ಥೆಗಳಿಂದ ಸಾಲಗಳನ್ನು ಸಂಗ್ರಹಿಸಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಿವೆ. ಇಂತಹ ಸಂಸ್ಥೆಗಳು ಮುಂದಿನ ವರ್ಷದಲ್ಲಿ ಅವರ ಆಂತರಿಕ ಮತ್ತು ಸಾಲಗಳ ಮೂಲಗಳಿಂದ ಒಟ್ಟು 5,772 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ಅಂದಾಜು ಮಾಡಲಾಗಿದೆ.

ಕಾನೂನಿನ ತಿದ್ದುಪಡಿಗಳು

279. ಮೇಲ್ಕಂಡ ತೆರಿಗೆ ಪ್ರಸ್ತಾವನೆಗಳನ್ನು ಹಾಗೂ ಇತರೆ ಕೆಲವು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಸಂಬಂಧಿತ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಅಲ್ಲದೆ ಭಾರತ ಸರ್ಕಾರವು ಸಲಹೆ ಮಾಡಿರುವಂತೆ 2010–11ನೆಯ ಸಾಲಿನ ವಿತ್ತೀಯ ಕೊರತೆಯ ಶಾಸನಬದ್ಧ ಮಿತಿಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3.44ಕ್ಕೆ ಏರಿಸಲು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002ಕ್ಕೆ ತಿದ್ದುಪಡಿಯನ್ನು ಮಾಡಬೇಕಾಗಿದೆ. ಅದರಂತೆ, ಅಗತ್ಯವಿರುವ ತಿದ್ದುಪಡಿಗಳನ್ನು ಸದನದ ಮುಂದೆ ಮಂಡಿಸಲಾಗುವುದು.

ಸನ್ಮಾನ್ಯ ಸಭಾಧ್ಯಕ್ಷರೇ,

280. ನಾನು ಈಗ 2011–12ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಮಾನ್ಯ ಸದನದ ಪರಿಶೀಲನೆಗೆ ಮಂಡಿಸುತ್ತಾ, ಈ ಮುಂಗಡ ಪತ್ರದ ಅಂದಾಜುಗಳ ಪ್ರಕಾರ ಜುಲೈ 31, 2011ರವರೆಗೆ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್

ಜೈ ಕರ್ನಾಟಕ

ಬಜೆಟ್ ವಿಹಂಗಮ

ಕ್ರ ಸಂ.	ಬಾಬ್ತು	ಬಜೆಟ್ ಅಂದಾಜು 2010-11	ಪರಿಷ್ಕೃತ ಅಂದಾಜು 2010-11	ಬಜೆಟ್ ಅಂದಾಜು 2011-12
	ಪ್ರಾರಂಭ ಶಿಲ್ಕು	-44.80	-107.68	88.47
ಎ.	**ರಾಜಸ್ವ ಲೆಕ್ಕ**			
	ಜಮೆ :			
	ರಾಜ್ಯ ತೆರಿಗೆ	36228.32	38048.67	43817.10
	ಕೇಂದ್ರ ತೆರಿಗೆಯಲ್ಲಿ ಪಾಲು	9060.09	9310.09	10418.99
	ಕೇಂದ್ರ ಸರ್ಕಾರದ ಅನುದಾನಗಳು	5530.47	6906.34	8402.38
	ತೆರಿಗೆಯೇತರ ರಾಜಸ್ವ	2819.90	3519.48	3674.79
	ಒಟ್ಟು-ಎ (೧)	**53638.78**	**57784.58**	**66313.26**
	ವೆಚ್ಚ :			
	ಸಾಮಾಜಿಕ ಸೇವೆ	21952.46	23034.13	24878.75
	ಆರ್ಥಿಕ ಸೇವೆ	12226.15	15856.38	17299.35
	ಸಾಮಾನ್ಯ ಸೇವೆ	16074.54	14613.58	18512.87
	ಸಹಾಯಾನುದಾನ ಮತ್ತು ಅಂಶದಾನ	2885.14	2685.14	4343.36
	ಒಟ್ಟು-ಎ (೨)	**53138.29**	**56189.23**	**65034.33**
ಎ.	**ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ**	500.49	1595.35	1278.94

ನೋಟ

(ಕೋಟಿ ರೂಪಾಯಿಗ

ಕ್ರ ಸಂ.	ಬಾಬ್ತು	ಬಜೆಟ್ ಅಂದಾಜು 2010-11	ಪರಿಷ್ಕೃತ ಅಂದಾಜು 2010-11	ಬಜೆಟ್ ಅಂದಾಜು 2011-12
ಬಿ.	ಬಂಡವಾಳ ಲೆಕ್ಕ			
	ಜಮೆ :			
	ಭಾರತ ಸರ್ಕಾರದಿಂದ ಸಾಲ	1142.00	1538.72	1738.80
	ಬಹಿರಂಗ ಮಾರುಕಟ್ಟೆ ಸಾಲ(ನಿವ್ವಳ)	7028.19	1028.18	8199.75
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	1530.41	3605.00	2765.00
	ಸಾಲಗಳು ಮತ್ತು ಮುಂಗಡಗಳ ವಸೂಲಿ	103.25	159.50	61.72
	ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	1550.36	7215.36	1884.75
	ಒಟ್ಟು-ಬಿ (೧)	**11354.21**	**13546.76**	**14650.02**
	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	8977.76	11817.42	11754.44
	ಕೇಂದ್ರ ಸಾಲಗಳ ಮರುಸಂದಾಯ	549.97	543.93	590.51
	ಎಲ್ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಎಸ್‌ಎಸ್‌ಎಫ್ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	941.11	956.25	1221.35
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	1334.44	1637.36	2067.88
	ಒಟ್ಟು-ಬಿ (೨)	**11803.28**	**14945.96**	**15634.18**
ಬಿ.	**ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ (–)**	**-449.07**	**-1399.20**	**-984.16**
ಸಿ.	**ವರ್ಷದ ಒಟ್ಟು ಹೆಚ್ಚಳ / ಕೊರತೆ**	**51.42**	**196.15**	**294.78**
ಡಿ.	**ಮುಕ್ತಾಯ ಶಿಲ್ಕು**	**6.62**	**88.47**	**383.25**

ಅನುಬಂಧ - 1

2011-2012ನೇ ಸಾಲಿನ ವಲಯವಾರು ಹಂಚಿಕೆ *

ವಲಯ	₹ ಕೋಟಿಗಳಲ್ಲಿ
1. ಕೃಷಿ ಮತ್ತು ತೋಟಗಾರಿಕೆ	3179
2. ಪಶುಸಂಗೋಪನೆ ಮತ್ತು ಮೀನುಗಾರಿಕೆ	1077
3. ಒಳಾಡಳಿತ ಮತ್ತು ಸಾರಿಗೆ	3602
4. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	4385
5. ಸಮಾಜ ಕಲ್ಯಾಣ	3264
6. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	2399
7. ಕಂದಾಯ	2415
8. ವಸತಿ	1194
9. ಶಿಕ್ಷಣ	12284
10. ವಾಣಿಜ್ಯ ಮತ್ತು ಕೈಗಾರಿಕೆ	1457
11. ನಗರಾಭಿವೃದ್ಧಿ	7710
12. ಲೋಕೋಪಯೋಗಿ	4319
13. ಜಲ ಸಂಪನ್ಮೂಲ	7800
14. ಆರೋಗ್ಯ ಮತ್ತು ಕುಟುಂಬ ಕಲ್ಯಾಣ	3254
15. ಇಂಧನ	8523

* ಈ ಹಂಚಿಕೆಯಲ್ಲಿ ಆಂತರಿಕ ಮತ್ತು ಹೆಚ್ಚುವರಿ ಸಂಪನ್ಮೂಲಗಳು ಸೇರಿವೆ

ಅನುಬಂಧ – 2

(ಪ್ಯಾರಾ – 248)

ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಹಾಗೂ ಎಇಡಿ ದರಗಳು

ಕ್ರ.ಸಂ	ಪ್ರಸ್ತುತ		ಪ್ರಸ್ತಾವಿತ	
	ಘೋಷಿತ ಬೆಲೆ	ಎಇಡಿ	ಘೋಷಿತ ಬೆಲೆ	ಎಇಡಿ
1	275-324	72	300-349	79
2	325-374	93	350-399	102
3	375-424	117	400-449	129
4	425-474	153	450-499	168
5	475-574	168	500-599	193
6	575-674	189	600-699	217
7	675-774	200	700-799	230
8	775-874	216	800-899	248
9	875-974	227	900-999	261
10	975-1074	243	1000-1099	292
11	1075-1174	254	1100-1199	305
12	1175-1274	270	1200-1299	324
13	1275-1674	291	1300-1699	349
14	1675-2074	324	1700-2099	389
15	2075-4799	356	2100-4824	427
16	4800-7525	405	4825-7550	486
17	7526 ಮತ್ತು ಅದಕ್ಕಿಂತ ಮೇಲ್ಪಟ್ಟು	ಘೋಷಿತ ಬೆಲೆಯ ಮೇಲೆ ಪ್ರತಿ ಬಲ್ಕ್ ಲೀಟರ್‌ಗೆ ರೂ.540/- ಅಥವಾ ಶೇ. 6 – ಯಾವುದು ಹೆಚ್ಚೋ ಅದು.	7551 ಮತ್ತು ಅದಕ್ಕಿಂತ ಮೇಲ್ಪಟ್ಟು	ಘೋಷಿತ ಬೆಲೆಯ ಮೇಲೆ ಪ್ರತಿ ಬಲ್ಕ್ ಲೀಟರ್‌ಗೆ ರೂ.566/- ಅಥವಾ ಶೇ. 7.5 – ಯಾವುದು ಹೆಚ್ಚೋ ಅದು.

* ಎಇಡಿ; ಹೆಚ್ಚುವರಿ ಅಬಕಾರಿ ಸುಂಕ

ಅನುಬಂಧ – 3

(ಪ್ಯಾರಾ – 264)

ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಸೂಚಿಯ ಉದ್ದೇಶಿತ ಬದಲಾವಣೆ (ತಿದ್ದುಪಡಿ)ಗಳು

ಕ್ರ ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
1.	ಕರಾರು ಅಥವಾ ಕರಾರಿನ ದಾಖಲೆಗಳು ಅಥವಾ ಕರಾರು ಪತ್ರ	5(ಇ)(ii)	ಕ್ರಯದ ಕರಾರು; ಸ್ವತ್ತಿನ ಸ್ವಾಧೀನ ನೀಡದೇ ಇದ್ದಲ್ಲಿ	ಕ್ರಯದ ಕರಾರಿನಲ್ಲಿ ಹೇಳಲಾದ ಪ್ರತಿಫಲದ ಮೇಲೆ ಶೇ. 1	ಕ್ರಯದ ಕರಾರು; ಸ್ವತ್ತಿನ ಸ್ವಾಧೀನ ನೀಡದೇ ಇದ್ದಲ್ಲಿ **ವಿವರಣೆ** ಕ್ರಯದ ಕರಾರಿನಲ್ಲಿ ಮಾರಾಟಗಾರನು ಖರೀದಿದಾರನಿಗೆ ಕ್ರಯದ ಕರಾರಿಗೆ ಒಳಪಟ್ಟ ಸ್ವತ್ತಿನ ಬಾಬ್ತು ಅಧಿಕಾರ ಪತ್ರ ನೀಡಿದ ಉಲ್ಲೇಖವಿದ್ದಲ್ಲಿ, ಈ ಕಂಡಿಕೆಯ ಉದ್ದೇಶಕ್ಕೆ ಸ್ವತ್ತಿನ ಸ್ವಾಧೀನ ನೀಡಲಾಗಿದೆಯೆಂದು ಪರಿಗಣಿಸಲಾಗುವುದು.	ಕ್ರಯದ ಕರಾರಿನಲ್ಲಿ ಹೇಳಲಾದ ಪ್ರತಿಫಲದ ಮೇಲೆ ಶೇ. 0.1 **ಪರಂತು** ಅದೇ ಪಕ್ಷಕಾರರ ನಡುವೆ ಅದೇ ಸ್ವತ್ತಿನ ಬಗ್ಗೆ ಅನುಚ್ಛೇಧ 41 (ಇ) ಅಥವಾ 41(ಇಬಿ) ರಲ್ಲಿನ ಅಧಿಕಾರ ಪತ್ರವನ್ನು ಮಾಡಿಕೊಂಡಿದ್ದು, ಹಾಗೂ ಈ ಪತ್ರದ ಮೇಲೆ ಸರಿಯಾದ ಮುದ್ರಾಂಕ ಶುಲ್ಕ ಪಾವತಿಸಿದ್ದಲ್ಲಿ, ಆಗ ಅನುಚ್ಛೇಧ 5 (ಇ) ರಲ್ಲಿನ ಕ್ರಯದ ಕರಾರು ಪತ್ರಕ್ಕೆ ನೀಡಬೇಕಾದ ಮುದ್ರಾಂಕ ಶುಲ್ಕ ಗರಿಷ್ಠ ರೂ. 200/– ಗಳಿಗೆ ಮೀರತಕ್ಕದ್ದಲ್ಲ.
		5(ಎಫ್)	ನಿರ್ಮಾಣ ಅಥವಾ ಅಭಿವೃದ್ಧಿಪಡಿಸಿದ ನಂತರ ಸ್ವತ್ತನ್ನು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಹೊಂದಬೇಕೆಂಬ ಅಥವಾ ಸ್ವತ್ತನ್ನು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಮಾರಾಟಮಾಡಬೇಕೆಂಬ ಅಥವಾ ಬಾಗಶಃ	ಸ್ವತ್ತಿನ ಉದ್ದೇಶಿತ ನಿರ್ಮಾಣ ಅಥವಾ ಅಭಿವೃದ್ಧಿಯ ಅಂದಾಜು ವೆಚ್ಚ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ವರ್ಗಾವಣೆ	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
			ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಹೊಂದಬೇಕೆಂಬ ಮತ್ತು ಉಳಿದಿರುವ ಭಾಗವನ್ನು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಮಾರಾಟಮಾಡಬೇಕೆಂಬ ಷರತ್ತಿನೊಂದಿಗೆ ಬಹು-ಘಟಕ ಮನೆ, ಅಥವಾ ಕಟ್ಟಡ, ಅಪಾರ್ಟ್‌ಮೆಂಟ್ ಅಥವಾ ಫ್ಲ್ಯಾಟ್ ಅಥವಾ ಬಹುಮಹಡಿ ಕಟ್ಟಡವೂ ಸೇರಿದಂತೆ ಸ್ಥಿರಾಸ್ತಿಯ ನಿರ್ಮಾಣ ಅಥವಾ ಅಭಿವೃದ್ಧಿಯ ಸಂಬಂಧ ಮಾಡಿಕೊಳ್ಳಲಾದ ಕರಾರಿಗೆ ಸಂಬಂಧಿಸಿದಂತೆ.	ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಪಡೆಯುತ್ತಿರುವ ಪ್ರತಿಫಲ ಇವುಗಳಲ್ಲಿ ಯಾವುದು ಹೆಚ್ಚಿನದೋ ಅದರ ಪ್ರತಿ ರೂ. 100/- ಅಥವಾ ಅದರ ಭಾಗಾಂಶದ ಮೇಲೆ ರೂ. 1/- ರಂತೆ ಗರಿಷ್ಠ 1,50,000/- ರೂಗಳಿಗೆ ಮಿತಿಗೊಳಿಸಿದೆ.		
			ವಿವರಣೆ:- 1 1) ಗುತ್ತಿಗೆದಾರ ಎಂಬ ಪದವು 30 ವರ್ಷಗಳು ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅಥವಾ ಯಾವುದೇ ನಿರ್ದಿಷ್ಟ ಅವಧಿಯೆಂದು ತಿಳಿಯಲಾಗದ ಅವಧಿಗೆ ಗುತ್ತಿಗೆ ಪಡೆದವರು ಎಂಬ ಅರ್ಥವನ್ನು ಹೊಂದಿರತಕ್ಕದ್ದು. 2) ಕಟ್ಟಡ ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್, ಫ್ಲ್ಯಾಟ್ ಅಥವಾ ಕಛೇರಿ ಸ್ಥಳಾವಕಾಶ ಅಥವಾ	ಪರಂತು ಅದೇ ಪಕ್ಷಕಾರರ ನಡುವೆ ಅದೇ ಸ್ವತ್ತಿನ ಬಗ್ಗೆ ಅನುಚ್ಛೇಧ 41 (ಇ ಎ) ರಲ್ಲಿನ ಅಧಿಕಾರ ಪತ್ರವನ್ನು ಮಾಡಿಕೊಂಡಿದ್ದಲ್ಲಿ, ಹಾಗೂ ಈ ಪತ್ರದ ಮೇಲೆ ಸರಿಯಾದ ಮುದ್ರಾಂಕ ಶುಲ್ಕವನ್ನು ಪಾವತಿಸಿದ್ದಲ್ಲಿ, ಆಗ ಇಂತಹ / ಸದರೀ ಕ್ರಯದ ಕರಾರು ಪತ್ರಕ್ಕೆ	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ ವಿವರಣೆ	ಪ್ರಸ್ತುತ ದರ	ಉದ್ದೇಶಿತ ವಿವರಣೆ	ಉದ್ದೇಶಿತ ದರ
			ಬಹುಮಹಡಿ ಕಟ್ಟಡದ ಭಾಗ ಎಂಬ ಅರ್ಥವನ್ನು ಒಳಗೊಂಡಿರತಕ್ಕದು	ನೀಡಬೇಕಾದ ಮುದ್ರಾಂಕಶುಲ್ಕ ಗರಿಷ್ಠ ರೂ. 200/- ಗಳನ್ನು ಮೀರತಕ್ಕದ್ದಲ್ಲ.		
			ವಿವರಣೆ:- 2 ಕಂಡಿಕೆ (ಇ) ಮತ್ತು ಕಂಡಿಕೆ (ಎಫ್) ಮತ್ತು ಕಂಡಿಕೆ (ಹೆಚ್) ಇವುಗಳ ಉದ್ದೇಶಕ್ಕಾಗಿ ಕರಾರು ಪತ್ರ ಅಥವಾ ಅದರ ಟಿಪ್ಪಣಿ ಅಥವಾ ಒಡಂಬಡಿಕೆ ಪತ್ರದ ನಂತರ ಹಸ್ತಾಂತರ ಅಥವಾ ಆಧಾರ/ಭೋಗ್ಯವನ್ನು ಅದೇ ಪಕ್ಷಕಾರರ ನಡುವೆ ಮಾಡಿಕೊಂಡಲ್ಲಿ ಸದರಿ ಕರಾರು ಪತ್ರದ ಮುದ್ರಾಂಕ ಶುಲ್ಕವನ್ನು ಪಾವತಿಸಿದಲ್ಲಿ ಅದನ್ನು ಇವುಗಳ ಮೇಲೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.		ವಿವರಣೆ:- 2 ಕಂಡಿಕೆ (ಇ) ಮತ್ತು ಕಂಡಿಕೆ (ಹೆಚ್) ಇವುಗಳ ಉದ್ದೇಶಕ್ಕಾಗಿ ಕರಾರು ಪತ್ರ ಅಥವಾ ಅದರ ಟಿಪ್ಪಣಿ ಅಥವಾ ಒಡಂಬಡಿಕೆ ಪತ್ರದ ನಂತರ ಹಸ್ತಾಂತರ ಅಥವಾ ಆಧಾರ/ಭೋಗ್ಯವನ್ನು ಅದೇ ಪಕ್ಷಕಾರರ ನಡುವೆ ಮಾಡಿಕೊಂಡಲ್ಲಿ ಸದರಿ ಕರಾರು ಪತ್ರದ ಮುದ್ರಾಂಕ ಶುಲ್ಕವನ್ನು ಪಾವತಿಸಿದಲ್ಲಿ ಅದನ್ನು ಇವುಗಳ ಮೇಲೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.	
2.	ಕಂಪನಿಗಳ ಕಾಯ್ದೆ 1956ರ ಕಲಂ 394ರಡಿ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶಕ್ಕೆ	20(4)(i)	ಉಪಕಂಪನಿಯು ಮಾತೃ (ಮೂಲ)ಕಂಪನಿಯೊಂದಿಗೆ ಸಂಯೋಜನೆಗೊಳ್ಳುವುದು ಸೇರಿದಂತೆ ಕಂಪನಿಗಳ ಸಂಯೋಜನೆ	ವರ್ಗಾವಣೆ ಮಾಡುತ್ತಿರುವ ಕಂಪನಿಯಿಂದ ವರ್ಗಾವಣೆ ಪಡೆದ ಕಂಪನಿಗೆ ವರ್ಗಾವಣೆಯಾಗುತ್ತಿರುವ ಕರ್ನಾಟಕ	ಉಪಕಂಪನಿಯು ಮಾತೃ (ಮೂಲ) ಕಂಪನಿಯೊಂದಿಗೆ ಸಂಯೋಜನೆಗೊಳ್ಳುವುದು ಸೇರಿದಂತೆ ಕಂಪನಿಗಳ ಸಂಯೋಜನೆ	ವರ್ಗಾವಣೆ ಮಾಡುತ್ತಿರುವ ಕಂಪನಿಯಿಂದ ವರ್ಗಾವಣೆ ಪಡೆದ ಕಂಪನಿಗೆ ವರ್ಗಾವಣೆಯಾಗುತ್ತಿರುವ ಕರ್ನಾಟಕ ರಾಜ್ಯದಲ್ಲಿನ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 2 ಅಥವಾ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
	ಸಂಬಂಧಿಸಿ ದಂತೆ			ರಾಜ್ಯದಲ್ಲಿನ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 3 ಅಥವಾ ವಿತರಿಸಲಾದ ಅಥವಾ ಹಂಚಿಕೆಯಾದ ಷೇರುಗಳ ಒಟ್ಟು ಮೌಲ್ಯದ ಅಥವಾ ಉಪಕಂಪನಿಯಾಗಿ ದ್ದಲ್ಲಿ ಮಾತ್ರ ಕಂಪನಿಯೊಂದಿಗೆ ವಿಲೀನಗೊಂಡ ಷೇರುಗಳು ಮತ್ತು ವಿಲೀನಕ್ಕೆ ಪಡೆಯಲಾದ ಪ್ರತಿಫಲದ ಮೇಲೆ ಶೇ. 0.7 **ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು**		ವಿತರಿಸಲಾದ ಅಥವಾ ಹಂಚಿಕೆಯಾದ ಷೇರುಗಳ ಒಟ್ಟು ಮೌಲ್ಯದ ಅಥವಾ ಉಪಕಂಪನಿಯಾಗಿದ್ದಲ್ಲಿ ಮಾತ್ರ ಕಂಪನಿಯೊಂದಿಗೆ ವಿಲೀನಗೊಂಡ ಅಥವಾ ರದ್ದುಪಡಿಸಲಾದ ಷೇರುಗಳು ಮೇಲೆ ಶೇ. 1 **ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು**
		20(4) (ii)	ಕಂಪನಿಯ ಪುನರ್ ನಿರ್ಮಾಣ ಅಥವಾ ವಿಭಜನೆ (ವಿಘಟನೆ)	ವರ್ಗಾವಣೆ ಮಾಡುತ್ತಿರುವ ಕಂಪನಿಗೆ ಸೇರಿದ ಕರ್ನಾಟಕ ರಾಜ್ಯದಲ್ಲಿರುವ ಮತ್ತು ಪುನರ್ ರಚಿತ ಕಂಪನಿಗೆ ವರ್ಗಾವಣೆ	ಕಂಪನಿಯ ಪುನರ್ ನಿರ್ಮಾಣ ಅಥವಾ ವಿಭಜನೆ (ವಿಘಟನೆ)	ವರ್ಗಾವಣೆ ಮಾಡುತ್ತಿರುವ ಕಂಪನಿಗೆ ಸೇರಿದ ಕರ್ನಾಟಕ ರಾಜ್ಯದಲ್ಲಿರುವ ಮತ್ತು ಪುನರ್ ರಚಿತ ಕಂಪನಿಗೆ ವರ್ಗಾವಣೆಯಾಗುತ್ತಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 2

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
				ಯಾಗುತ್ತಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 3		
				ಅಥವಾ ಪುನರ್ ರಚಿತ ಕಂಪನಿಗೆ ವಿತರಿಸಲಾದ/ಹಂಚಿಕೆ ಮಾಡಲಾದ ಷೇರುಗಳು ಮತ್ತು ಇದರ ಜೊತೆಗೆ ಪುನರ್ ರಚನೆಗೆ ಅಥವಾ ವಿಭಜನೆಗೆ ಪಡೆದ ಪ್ರತಿಫಲದ ಮೊತ್ತದ ಮೇಲೆ ಶೇ. 0.7 **ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು**		**ಅಥವಾ** ಪುನರ್ ರಚಿತ ಕಂಪನಿಗೆ ವಿತರಿಸಲಾದ/ಹಂಚಿಕೆ ಮಾಡಲಾದ ಷೇರುಗಳು ಮತ್ತು ಇದರ ಜೊತೆಗೆ ಪುನರ್ ರಚನೆಗೆ ಅಥವಾ ವಿಭಜನೆಗೆ ಪಡೆದ ಪ್ರತಿಫಲದ ಮೊತ್ತದ ಮೇಲೆ ಶೇ. 1 **ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು** ವಿವರಣೆ: ಅನುಚ್ಛೇದ 20(4)ರ ಉದ್ದೇಶಕ್ಕೆ ಷೇರುಗಳ ಒಟ್ಟು ಮೌಲ್ಯ ಎಂಬ ಪದದ ಅರ್ಥವು ಷೇರುಗಳ ಮುಖಬೆಲೆ ಅಥವಾ ಅವುಗಳ ಮಾರುಕಟ್ಟೆ ಬೆಲೆ ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು ಎಂಬುದಾಗಿರುತ್ತದೆ.
3.	ನೋಟರಿ ದೃಢೀಕರಣ	36	ನೋಟರಿ ಕಾರ್ಯ ಎಂದರೆ ನೋಟರಿ ಪಬ್ಲಿಕನ್ನು ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ನೋಟರಿ ಪಬ್ಲಿಕನೆಂದು ಕಾನೂನು ಬದ್ಧವಾಗಿ ಕಾರ್ಯ	ಹತ್ತು ರೂಪಾಯಿಗಳು	ಕಲಂ 4ರಂತೆ	ವಿನಾಯತಿ ನೀಡಲಾಗಿದೆ.

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
			ನಿರ್ವಹಿಸುವ ಯಾವನೇ ಇತರ ವ್ಯಕ್ತಿಯು ಮಾಡಿದ ಅಥವಾ ರುಜು ಮಾಡಿದ ಪ್ರಸಾಕ್ಷ್ಯ (ಸಂ.42) ಅಲ್ಲದೆ ಯಾವುದೇ ಲಿಖಿತ ಹಿಂಬರಹ, ಟಿಪ್ಪಣಿ, ಅನುಪ್ರಮಾಣಿನ, ಪ್ರಮಾಣ ಪತ್ರ ಅಥವಾ ನಮೂದು ಹುಂಡಿ ಅಥವಾ ನೋಟರಿ ಪ್ರಸಾಕ್ಷ್ಯ (ಸಂ. 42)			
4.	ಅಧಿಕಾರ ಪತ್ರ (ಕಲಂ 2(1)(ಪಿ)ರಲ್ಲಿ ವ್ಯಾಖ್ಯಾನಿಸಿರುವಂತೆ-ಪ್ರತಿನಿಧಿ ಪತ್ರವಲ್ಲದ)	41 (ಇ)		ಪರಂತು, ಇಂತಹ/ಸದರಿ ಅಧಿಕಾರ ಪತ್ರಕ್ಕೆ ನೀಡಲಾದ ಮುದ್ರಾಂಕ ಶುಲ್ಕವನ್ನು ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿನ ಬಗ್ಗೆ ತದನಂತರ ಮಾಡಿಕೊಳ್ಳುವ ಕ್ರಯ/ವರ್ಗಾವಣೆ ಪತ್ರಕ್ಕೆ ನೀಡಬೇಕಾದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.		ಪರಂತು, ಇಂತಹ/ಸದರಿ ಅಧಿಕಾರ ಪತ್ರಕ್ಕೆ ನೀಡಲಾದ ಮುದ್ರಾಂಕ ಶುಲ್ಕವನ್ನು ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿನ ಬಗ್ಗೆ ತದನಂತರ ಮಾಡಿಕೊಳ್ಳುವ ಕ್ರಯದ ಕರಾರು ಅನುಚ್ಛೇದ 5(ಇ) ಕ್ರಯ/ವರ್ಗಾವಣೆ ಪತ್ರಕ್ಕೆ ನೀಡಬೇಕಾದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.
		41(ಇ,ಎ)	ನಿರ್ಮಾಣ ಅಥವಾ ಅಭಿವೃದ್ಧಿಪಡಿಸಿದ ನಂತರ ಸ್ವತ್ತನ್ನು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಹೊಂದಬೇಕೆಂಬ ಅಥವಾ ಸ್ವತ್ತನ್ನು ಜಂಟಿಯಾಗಿ	ಪರಂತು ಇಂತಹ / ಸದರೀ ಅಧಿಕಾರ ಪತ್ರಕ್ಕೆ ನೀಡಲಾದ ಮುದ್ರಾಂಕ	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
			ಅಥವಾ ಪ್ರತ್ಯೇಕವಾಗಿ ಮಾರಾಟಮಾಡಬೇಕೆಂಬ ಅಥವಾ ಭಾಗಶಃ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಹೊಂದಬೇಕೆಂಬ ಮತ್ತು ಉಳಿದಿರುವ ಭಾಗವನ್ನು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಮಾರಾಟಮಾಡಬೇಕೆಂಬ ಷರತ್ತಿನೊಂದಿಗೆ ಬಹು-ಘಟಕ ಮನೆ, ಅಥವಾ ಕಟ್ಟಡ, ಅಪಾರ್ಟ್‌ಮೆಂಟ್ ಅಥವಾ ಫ್ಲಾಟ್ ಅಥವಾ ಬಹುಮಹಡಿ ಕಟ್ಟಡವೂ ಸೇರಿದಂತೆ ಸ್ಥಿರಾಸ್ತಿಯ ನಿರ್ಮಾಣ ಅಥವಾ ಅಭಿವೃದ್ಧಿ ಅಥವಾ ಮಾರಾಟದ ಅಧಿಕಾರ ಪತ್ರವನ್ನು ನೀಡಿದಾಗ.	ಶುಲ್ಕವನ್ನು, ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿನ ಬಗ್ಗೆ ತದನಂತರ ಮಾಡಿಕೊಳ್ಳುವ ಕ್ರಯ/ ವರ್ಗಾವಣೆ ಪತಕ್ಕೆ ನೀಡಬೇಕಾದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.		
			ವಿವರಣೆ:- 1 1) ಗುತ್ತಿಗೆದಾರ ಎಂಬ ಪದವು 30 ವರ್ಷಗಳು ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅಥವಾ ಯಾವುದೇ ನಿರ್ದಿಷ್ಟ ಅವಧಿಯೆಂದು ತಿಳಿಯಲಾಗದ ಅವಧಿಗೆ ಗುತ್ತಿಗೆ ಪಡೆದವರು ಎಂಬ ಅರ್ಥವನ್ನು ಹೊಂದಿರತಕ್ಕದ್ದು.	ಪರಂತು ಇಂತಹ / ಸದರೀ ಅಧಿಕಾರ ಪತ್ರಕ್ಕೆ ನೀಡಲಾದ ಮುದ್ರಾಂಕ ಶುಲ್ಕವನ್ನು, ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿನ ಬಗ್ಗೆ ತದನಂತರ ಮಾಡಿಕೊಳ್ಳುವ ಕ್ರಯ/ ವರ್ಗಾವಣೆ ಪತಕ್ಕೆ ನೀಡಬೇಕಾದ	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
				ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.		
			2) ಕಟ್ಟಡ ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್, ಫ್ಲಾಟ್ ಅಥವಾ ಕಛೇರಿ ಸ್ಥಳಾವಕಾಶ ಅಥವಾ ಬಹುಮಹಡಿ ಕಟ್ಟಡದ ಭಾಗ ಎಂಬ ಅರ್ಥವನ್ನು ಒಳಗೊಂಡಿರತಕ್ಕದು	ಅಧಿಕಾರ ಪತ್ರದಲ್ಲಿನ ವಿಷಯವಾದ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ, ಅನುಚ್ಛೇಧ 20 (1) ರಡಿ ಹಸ್ತಾಂತರದಂತೆ ಮುದ್ರಾಂಕ ಶುಲ್ಕವನ್ನು ನೀಡುವುದು.	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ
		41(ಇ,ಬಿ)	ಪರಂತು ಇಂತಹ / ಸದರೀ ಪತ್ರಕ್ಕೆ ನೀಡಲಾದ ಮುದ್ರಾಂಕ ಶುಲ್ಕವನ್ನು, ಅಧಿಕಾರ ಪಡೆದವರಿಗೆ ಅಥವಾ ಇತರೆಯವರಿಗೆ ತದನಂತರ ಬರೆದುಕೊಡುವ ಕ್ರಯ/ ವರ್ಗಾವಣೆ ಪತಕ್ಕೆ ನೀಡಬೇಕಾದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.			ಪರಂತು ಇಂತಹ / ಸದರೀ ಪತ್ರಕ್ಕೆ ನೀಡಲಾದ ಮುದ್ರಾಂಕ ಶುಲ್ಕವನ್ನು, ಅದೇ ಪಕ್ಷಕಾರರ ನಡುವೆ ಮತ್ತು ಅದೇ ಸ್ವತ್ತಿನ ಬಗ್ಗೆ ತದನಂತರ ಬರೆದುಕೊಡುವ ಕ್ರಯ/ ವರ್ಗಾವಣೆ ಮತ್ತು ಕರಾರು ಅನುಚ್ಛೇದ 5(ಇ) ಪತ್ರಕ್ಕೆ ನೀಡಬೇಕಾದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.
		41(ಇ.ಸಿ)	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ಮೊಖ್ತ್ಯಾಯಾರುದಾರನು ಏಕೈಕ ಉದ್ದೇಶಕ್ಕಾಗಿ ನಿಧಿಪತ್ರ ವ್ಯಾಪಾರ ಸಂಸ್ಥೆಯ ಜೊತೆಗೆ ತನ್ನ ದಲ್ಲಾಳಿಗೆ (Broker) ವ್ಯವಹಾರ ಮಾಡಲು	ಐವತ್ತು ರೂಪಾಯಿಗಳು ಮಾತ್ರ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
					ವಿದಿಸಮ್ಮತ ಕರ್ತವ್ಯ ಮತ್ತು ಕಾರ್ಯಗಳನ್ನು ತನ್ನ ವ್ಯಾಪಾರ ನಿರ್ವಹಣೆ, ಕ್ರಯ / ವಿಕ್ರಯಕ್ಕೆ ಸಂಬಂಧಿಸಿದಂತೆ ತನ್ನ ವೀಕ್ರೇಯ ಪ್ರತಿಭೂತಿಯ ವರ್ಗಾವಣೆಯ ಪ್ರತಿಫಲ ಪಡೆಯಲು / ನೀಡಲು ಮತ್ತು ಪ್ರತಿಭೂತಿಗಳನ್ನು ಬೇರೆಯವರಿಗೆ / ಬೇರೆಯವರಿಂದ ತನ್ನ ಪರವಾಗಿ ವ್ಯವಹರಿಸಲು ಮಾತ್ರ	
		41(ಇ.ಡಿ)	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ಕಕ್ಷಿದಾರನು ತನ್ನ ಏಕೈಕ ಉದ್ದೇಶಕ್ಕೆ ನಿಕ್ಷೇಪದಲ್ಲಿ ಭಾಗವಹಿಸುವವರು ತನ್ನ ವಿಧಿಬದ್ಧ ಕಾರ್ಯ ಮತ್ತು ಕರ್ತವ್ಯಗಳನ್ನು ತನ್ನ ಡಿ-ಮ್ಯಾಟ್ ಖಾತೆದಾರನ ಪರವಾಗಿ ಅವರ ನಿಕ್ಷೇಪಗಳ ಉಪ ವಿಧಿಗಳಂತೆ/ ನಿಯಮಗಳನ್ನು ಪರಿಪಾಲಿಸಿ ಮಾಡುವ ಕಾರ್ಯಗಳಿಗೆ	ಐವತ್ತು ರೂಪಾಯಿಗಳು ಮಾತ್ರ
5.	ವರ್ಗಾವಣೆ	52(ಡಿ)	ಒಬ್ಬ ಟ್ರಸ್ಟೀಯಿಂದ ಇನ್ನೊಬ್ಬ ಟ್ರಸ್ಟೀಗೆ ಅಥವಾ ಟ್ರಸ್ಟೀಯಿಂದ ಫಲಾನುಭವಿಗೆ ವರ್ಗಾವಣೆಯಾಗುತ್ತಿರುವ ಟ್ರಸ್ಟ್‌ನ ಸ್ವತ್ತಿಗೆ	ರೂ. 200/-	ಒಂದು ಟ್ರಸ್ಟ್‌ನಿಂದ ಇನೊಂದು ಟ್ರಸ್ಟ್‌ಗೆ ಅಥವಾ ಒಬ್ಬ ಟ್ರಸ್ಟೀಯಿಂದ ಇನೊಬ್ಬ ಟ್ರಸ್ಟೀಗೆ ಅಥವಾ	ವರ್ಗಾವಣೆಯಾಗುತ್ತಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಅಥವಾ ವರ್ಗಾವಣೆಗೆ ಪಡೆಯುತ್ತಿರುವ ಪ್ರತಿಫಲ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
					ಫಲಾನುಭವಿಗೆ ವರ್ಗಾವಣೆಯಾಗುತ್ತಿರುವ ಟ್ರಸ್ಟ್‌ನ ಸ್ವತ್ತಿಗೆ	ಇವುಗಳಲ್ಲಿ ಯಾವುದು ಹೆಚ್ಚಿನದೋ ಅದರ ಮೇಲೆ ಅನುಚ್ಛೇದ 20(1)ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ಮುದ್ರಾಂಕ ಶುಲ್ಕ.
6.	ನ್ಯಾಸ (ಟ್ರಸ್ಟ್)	54	ಎ) ನ್ಯಾಸ (ಟ್ರಸ್ಟ್)ದ ಘೋಷಣೆ–		ಎ) ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಮರಣ ಶಾಸನವನ್ನು ಹೊರತುಪಡಿಸಿ ಇತರೆ ಲಿಖಿತ ದಸ್ತಾವೇಜಿನ ಮೂಲಕ ನ್ಯಾಸದ ಘೋಷಣೆ ಮಾಡಿದಾಗ	
			1. ನ್ಯಾಸಕರ್ತನು ನ್ಯಾಸದ ಮೂಲಧನವಾಗಿ ನ್ಯಾಸಕ್ಕೆ ಹಸ್ತಾಂತರಿಸಿದ ಯಾವುದೇ ಮೊತ್ತ ಅಥವಾ ಹಣಕ್ಕೆ ಸಂಬಂಧಿಸಿದಂತೆ	ರೂ. 500/–	1. ನ್ಯಾಸವನ್ನು ಸಾರ್ವಜನಿಕ ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗೆ ಸೀಮಿತವಾಗಿ ಸ್ಥಾಪಿಸಿದಾಗ	ರೂ. 1000/–ಮಾತ್ರ
			2. ನ್ಯಾಸಕರ್ತನು ನ್ಯಾಸದ ಏಕಮಾತ್ರ ಸದಸ್ಯನಾಗಿದ್ದು ತನ್ನ ಮಾಲೀಕತ್ವದ ಯಾವುದೇ ಸ್ಥಿರಾಸ್ತಿಯನ್ನು ನ್ಯಾಸಕ್ಕೆ ಹಸ್ತಾಂತರಿಸಿದಾಗ	ರೂ. 500/–	2. ಸ್ವತ್ತಿನ ವರ್ಗಾವಣೆ/ ವಿಕ್ರಯವಿಲ್ಲದೆ ನ್ಯಾಸವನ್ನು ಕೇವಲ ಸ್ವತ್ತಿನ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ಸ್ಥಾಪಿಸಿದಾಗ	ರೂ. 1000/–ಮಾತ್ರ
			3. ನ್ಯಾಸಕರ್ತನು ನ್ಯಾಸದ ಸದಸ್ಯ ಅಥವಾ ಸದಸ್ಯರಲ್ಲಿ ಒಬ್ಬನಲ್ಲದೆ ಇದ್ದು, ತನ್ನ ಯಾವುದೇ ಸ್ಥಿರಾಸ್ತಿಯನ್ನು ನ್ಯಾಸಕ್ಕೆ ಹಸ್ತಾಂತರಿಸಿದಾಗ	ಹಸ್ತಾಂತರವಾದ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಅನುಚ್ಛೇದ 20(1)ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ಮುದ್ರಾಂಕ ಶುಲ್ಕ	3. ನ್ಯಾಸದ ಸ್ಥಾಪನೆ ಯಾವುದೇ ರೀತಿಯಲ್ಲಿ ಸ್ವತ್ತಿನ ವರ್ಗಾವಣೆ/ವಿಕ್ರಯ (ವಿಲೇ)ವನ್ನು ಒಳಗೊಂಡಿದ್ದಾಗ	ವರ್ಗಾವಣೆಯಾಗುತ್ತಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಅನುಚ್ಛೇದ 20(1)ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ
			ಬಿ) ಮರಣಶಾಸನವನ್ನು	ದಸ್ತಾವೇಜಿನಲ್ಲಿ	ಕೈ ಬಿಡಲಾಗಿದೆ	ಕೈ ಬಿಡಲಾಗಿದೆ

ಕ್ರ. ಸಂ.	ಅನುಸೂಚಿಯಲ್ಲಿನ ಕಂಡಿಕೆ	ಅನುಚ್ಛೇದದ ಸಂಖ್ಯೆ	ಪ್ರಸ್ತುತ		ಉದ್ದೇಶಿತ	
			ವಿವರಣೆ	ದರ	ವಿವರಣೆ	ದರ
			ಹೊರತುಪಡಿಸಿ ಇತರೆ ದಸ್ತಾವೇಜಿನ ಮೂಲಕ ಯಾವುದೇ ಸ್ವತ್ತಿನ ಅಥವಾ ಅದಕ್ಕೆ ಸಂಬಂಧಿಸಿದ ರದ್ದಿಯಾತಿಯನ್ನು ಮಾಡಿದಾಗ	ತೋರಿಸಲಾದ ಸ್ವತ್ತಿನ ಮೌಲ್ಯಕ್ಕೆ ಸಮನಾದ ಮೊತ್ತದ ಮೇಲೆ ರೂ. 200/-ಕ್ಕೆ ಮೀರದಂತೆ ಅನುಚ್ಛೇದ 12ರಂತೆ ಬಾಂಡ್ ಪತ್ರಕ್ಕೆ ಅನ್ವಯವಾಗುವ ಮುದ್ರಾಂಕ ಶುಲ್ಕ		

ಅನುಬಂಧ – 4
(ಪ್ಯಾರ – 265)
ಮೋಟಾರು ವಾಹನ ತೆರಿಗೆಗಳ ಸೆಸ್

ಪ್ರಸ್ತುತ			ಪ್ರಸ್ತಾವಿತ		
ಕ್ರ.ಸಂ.	ಐಟಂ. ನಂ.	ವಿವರ	ಕ್ರ.ಸಂ.	ಐಟಂ. ನಂ.	ವಿವರ
1	1	ಮೋಟಾರು ವಾಹನ ತೆರಿಗೆ ಕಾಯ್ದೆ ಪ್ರಕರಣ 3 ರಲ್ಲಿ ನೊಂದಣಿಯಾದ ವಾಹನಗಳಿಗೆ ಮೋಟಾರು ವಾಹನ ಕಾಯ್ದೆ 1988 (ಕೇಂದ್ರ ಕಾಯ್ದೆ 59/1988) ಮೋಟಾರು ವಾಹನ ತೆರಿಗೆಗಳ ಮೇಲೆ ಸೆಸ್ ವಿಧಿಸಿ ಅದನ್ನು ವಸೂಲಿ ಮಾಡಿ ವಿವಿಧ ಮೂಲಭೂತ ಸೌಕರ್ಯಗಳನ್ನು ರಾಜ್ಯದಲ್ಲಿ ಕಲ್ಪಿಸುವ ಉದ್ದೇಶದಿಂದ, ಈಕ್ವಿಟಿ ಇನ್ವೆಸ್ಟ್‌ಮೆಂಟ್ ಇನ್ ಬೆಂಗಳೂರು ಮಾಸ್ ರ್‍ಯಾಪಿಡ್ ಟ್ರಾನ್ಸಿಟ್ ಲಿ. ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ 57:28:15 ಅನುಪಾತದಲ್ಲಿ ಶೇ. 10ರ ಸೆಸ್ ಅನ್ನು ವಿಧಿಸಿ ವಸೂಲಿಸಲಾಗುತ್ತಿದೆ.	1	1	ಮೋಟಾರು ವಾಹನ ತೆರಿಗೆ ಕಾಯ್ದೆ ಪ್ರಕರಣ 3 ರಲ್ಲಿ ನೊಂದಣಿಯಾದ ವಾಹನಗಳಿಗೆ ಮೋಟಾರು ವಾಹನ ಕಾಯ್ದೆ 1988(ಕೇಂದ್ರ ಕಾಯ್ದೆ 59/1988) ಮೋಟಾರು ವಾಹನ ತೆರಿಗೆಗಳ ಮೇಲೆ ಶೇ. 11 ರ ಸೆಸ್ ವಿಧಿಸಿ ಅದನ್ನು ವಸೂಲಿ ಮಾಡಿ ಅದರಲ್ಲಿ ರಾಜ್ಯದ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಉದ್ದೇಶದಿಂದ, ಈಕ್ವಿಟಿ ಇನ್ವೆಸ್ಟ್‌ಮೆಂಟ್ ಇನ್ ಬೆಂಗಳೂರು ಮಾಸ್ ರ್‍ಯಾಪಿಡ್ ಟ್ರಾನ್ಸಿಟ್ ಲಿ. ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಗಾಗಿ 57:28:15ರ ಅನುಪಾತದಲ್ಲಿ ಉಪಯೋಗಿಸಲಾಗುತ್ತಿದ್ದು, ಹೆಚ್ಚಿಗೆ ವಿಧಿಸಿರುವ ಶೇ. 1 ರ ಸೆಸ್ ಅನ್ನು ನಗರ ಸಾರಿಗೆ ನಿಧಿಗೆ ಉಪಯೋಗಿಸಲು ಉದ್ದೇಶಿಸಲಾಗಿದೆ.
2	2	ಮೋಟಾರು ವಾಹನ ತೆರಿಗೆ ಕಾಯ್ದೆ ಪ್ರಕರಣ 10–ಎ ರಲ್ಲಿ ನೊಂದಣಿಯಾದ ವಾಹನಗಳಿಗೆ ಮೋಟಾರು ವಾಹನ ಕಾಯ್ದೆ 1988(ಕೇಂದ್ರ ಕಾಯ್ದೆ 59/1988) ಮೋಟಾರು ವಾಹನ ತೆರಿಗೆ ಕಾಯ್ದೆ 10–ಎ ಫ್ಲೀಟ್ ಮಾಲೀಕರ ವಾಹನಗಳಿಗೆ ಸೆಸ್ ವಿಧಿಸಿ ಅದನ್ನು ವಸೂಲಿ ಮಾಡಿ ವಿವಿಧ ಮೂಲಭೂತ ಸೌಕರ್ಯಗಳನ್ನು ರಾಜ್ಯದಲ್ಲಿ ಕಲ್ಪಿಸುವ ಉದ್ದೇಶದಿಂದ, ಈಕ್ವಿಟಿ ಇನ್ವೆಸ್ಟ್‌ಮೆಂಟ್ ಇನ್ ಬೆಂಗಳೂರು ಮಾಸ್ ರ್‍ಯಾಪಿಡ್ ಟ್ರಾನ್ಸಿಟ್ ಲಿ. ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ 57:28:15 ಅನುಪಾತದಲ್ಲಿ ಶೇ. 10ರ ಸೆಸ್ ಅನ್ನು ವಿಧಿಸಿ ವಸೂಲಿಸಲಾಗುತ್ತಿದೆ.	2	2	ಮೋಟಾರು ವಾಹನ ತೆರಿಗೆ ಕಾಯ್ದೆ ಪ್ರಕರಣ 10–ಎ ರಲ್ಲಿ ನೊಂದಣಿಯಾದ ವಾಹನಗಳಿಗೆ ಮೋಟಾರು ವಾಹನ ಕಾಯ್ದೆ 1988(ಕೇಂದ್ರ ಕಾಯ್ದೆ 59/1988) ಮೋಟಾರು ವಾಹನ ತೆರಿಗೆ ಕಾಯ್ದೆ 10–ಎ ಫ್ಲೀಟ್ ಮಾಲೀಕರ ವಾಹನಗಳಿಗೆ ಶೇ. 11 ರ ಸೆಸ್ ವಿಧಿಸಿ ಅದನ್ನು ವಸೂಲಿ ಮಾಡಿ ಅದರಲ್ಲಿ ರಾಜ್ಯದ ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಉದ್ದೇಶದಿಂದ, ಈಕ್ವಿಟಿ ಇನ್ವೆಸ್ಟ್‌ಮೆಂಟ್ ಇನ್ ಬೆಂಗಳೂರು ಮಾಸ್ ರ್‍ಯಾಪಿಡ್ ಟ್ರಾನ್ಸಿಟ್ ಲಿ. ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಗಾಗಿ 57:28:15ರ ಅನುಪಾತದಲ್ಲಿ ಉಪಯೋಗಿಸಲಾಗುತ್ತಿದ್ದು, ಹೆಚ್ಚಿಗೆ ವಿಧಿಸಿರುವ ಶೇ. 1 ರ ಸೆಸ್ ಅನ್ನು ನಗರ ಸಾರಿಗೆ ನಿಧಿಗೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಜಮೆ - ರೂಪಾಯಿ ಎಷ್ಟು ಭಾಗ ಯಾವುದರಿಂದ



ವೆಚ್ಚ (ಯೋಜನೆ ಮತ್ತು ಯೋಜನೇತರ), ರೂಪಾಯಿ ಯಾವ ಭಾಗ ಎಷ್ಟೆಷ್ಟು?




ರಾಜ್ಯದ ಸ್ವಂತ ತೆರಿಗೆಗಳ ವಿವರಗಳು 2011-12
(ಆಯವ್ಯಯ ಅಂದಾಜುಗಳು)
(ಉಪಕರ ಹೊರತುಪಡಿಸಿ) (ಕೋಟಿ ರೂ.ಗಳಲ್ಲಿ ಮತ್ತು ಶೇಕಡಾವಾರು)
ಮೋಟಾರು ವಾಹನಗಳು, 2630.00, 6%
ಇತರೆ, 1342.10, 3%
ಸ್ಟ್ಯಾಂಪುಗಳು ಮತ್ತು ನೋಂದಣಿ ಶುಲ್ಕ, 4030.00, 9%
ರಾಜ್ಯ ಅಬಕಾರಿ, 9115.00, 21%
ವಾಣಿಜ್ಯ ತೆರಿಗೆಗಳು, 26700.00, 61%


ವಲಯವಾರು ಯೋಜನಾ ವೆಚ್ಚ 2011-12
(ಕೋಟಿ ರೂ.ಗಳಲ್ಲಿ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ, 1301.97, 3%
ಗೃಹ ನಿರ್ಮಾಣ , 1163.02, 3%
ಉದ್ಯಮ ಮತ್ತು ಖನಿಜಗಳು, 659.35, 2%
ಗ್ರಾಮೀಣಾಭಿವೃದ್ಧಿ, 1505.63, 4%
ನೀರಾವರಿ ಮತ್ತು ಪ್ರವಾಹ ನಿಯಂತ್ರಣ, 6843.41, 18%
ನೀರು ಪೂರೈಕೆ ಮತ್ತು ನೈರ್ಮಲ್ಯ,, 2049.88, 5%
*ಇತರ, 6351.00, 17%
ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ, 2851.40, 7%
ನಗರಾಭಿವೃದ್ಧಿ, 3375.05, 9%
ಇಂಧನ, 4395.88, 12%
ಸಾರಿಗೆ, 3742.79, 10%
ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಚಟುವಟಿಕೆಗಳು, 3830.64, 10%